ದುಡಿಯುವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 16 | ಸಂಚಿಕೆ 15 | ಏಪ್ರಿಲ್ 4-10, 2022 | ಪುಟ 16 | ರೂ.10/-

https://janashakthi.wordpress.com e-mail : js_weekly@yahoo.com



ಬರ್ಕ್ಯ ಮಂಗತ್‌ಗೆ ನಮನ

ಭಾರತವನ್ನು ಉಳಿಸಿ, ಜನತೆಯನ್ನು ರಕ್ಷಿಸಲು



20 ಕೋಟಿ ಕಾರ್ಮಿಕರ ಮಹಾ ಮುಷ್ಕರ



ಅಮಿತ್ ಶಾ ಭೇಟಿ ವೇಗ ಪಡೆದ ರಾಜಕೀಯ ತಂತ್ರಗಾರಿಕೆ



ಶ್ರೀಲಂಕಾ ಆರ್ಥಿಕ ಬಿಕ್ಕಟ್ಟು ಯಾಕೆ?



ದೇಶಕ್ಕೆ ದಾರಿ ತೋರಲಿರುವ ಸಿಪಿಐ(ಎಂ) ನ 23 ನೇ ಮಹಾಧಿವೇಶನ



ಅಸಹನೀಯ ಬೆಲೆ ಏರಿಕೆಗಳ ವಿರುದ್ಧ ಎಪ್ರಿಲ್ 2 ರಂದು ಪ್ರತಿಭಟನಾ ಕಾರ್ಯಾಚರಣೆಗಳು: ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

ಹತ್ತು ದಿನಗಳಲ್ಲಿ ಒಂಭತ್ತು ಬಾರಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯಾಗಿದೆ. ಪ್ರತಿ ಲೀಟರ್‌ಗೆ ಈಗ ರೂ. 6.40 ಹೆಚ್ಚು ಬೆಲೆ ತೆರಬೇಕಾಗಿದೆ. ಇದರೊಂದಿಗೆ ಅಡುಗೆ ಅನಿಲ ಮತ್ತು ಇತರೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯೂ ಏರಿಕೆಯಾಗಿದೆ. ಇದು ಈಗಾಗಲೇ ಎಲ್ಲಾ ಅಗತ್ಯ ವಸ್ತುಗಳ ಬೆಲೆ ಏರಿಕೆ, ಹೆಚ್ಚುತ್ತಿರುವ ನಿರುದ್ಯೋಗ, ಬಡತನ ಮತ್ತು ಹಸಿವಿನಿಂದ ಬಳಲುತ್ತಿರುವ ಜನರ ಜೀವನೋಪಾಯದ ಮೇಲೆ ಅಸಹನೀಯ ಹೊರೆಗಳನ್ನು ಹೇರುತ್ತಿದೆ.

ಮೋದಿ ಸರ್ಕಾರವು ತನಗೆ ಅಸಾಧಾರಣ ಕೇಂದ್ರೀಯ ಆದಾಯಗಳನ್ನು ತಂದು ಕೊಡುತ್ತಿರುವ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಭಾರೀ ಸೆಸ್/ಸರ್‌ಚಾರ್ಜ್‌ಗಳನ್ನು ತಕ್ಷಣವೇ ರದ್ದುಪಡಿಸಬೇಕು ಮತ್ತು ಜನರಿಗೆ ಪರಿಹಾರವನ್ನು ಒದಗಿಸಲು ಬೆಲೆಗಳನ್ನು ಕಡಿಮೆ ಮಾಡಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಒತ್ತಾಯಿಸಿದೆ.

ಏಪ್ರಿಲ್ 2, 2022 ರಂದು ಈ ಅಸಹನೀಯ ಬೆಲೆ ಏರಿಕೆಗಳ ವಿರುದ್ಧ ಪ್ರತಿಭಟನಾ ಕಾರ್ಯಾಚರಣೆಗಳನ್ನು ಸಂಘಟಿಸಬೇಕು ಎಂದು ಪಕ್ಷದ ಎಲ್ಲಾ ಘಟಕಗಳಿಗೆ ನವದೆಹಲಿಯಲ್ಲಿ ಮಾರ್ಚ್ 25 ಮತ್ತು 26ರಂದು ಸಭೆ ಸೇರಿದ ಸಿಪಿಐ(ಎಂ) ಕೇಂದ್ರ ಸಮಿತಿಯು ಕರೆ ನೀಡಿದೆ.

'ದಿ ಕಾಶ್ಮೀರ್ ಫೈಲ್ಸ್' ಚಿತ್ರವನ್ನು ಕೋಮು ಧ್ರುವೀಕರಣವನ್ನು ಬಡಿದೆಬ್ಬಿಸಲು ಬಳಸಲಾಗುತ್ತಿದೆ

1990ರ ದಶಕದಲ್ಲಿ ಕಾಶ್ಮೀರ ಕಣಿವೆಯಲ್ಲಿ ನಡೆದ ಉಗ್ರಗಾಮಿಗಳ ಕೊಲೆಗಡುಕ ಪ್ರಹಾರಗಳನ್ನು ಸಿಪಿಐ(ಎಂ) ಸತತವಾಗಿ ಬಲವಾಗಿ ಖಂಡಿಸಿತ್ತು. ಇಂತಹ ಉಗ್ರಗಾಮಿ ದಾಳಿಗಳನ್ನು ಆರಂಭದಲ್ಲೇ ಎದುರಿಸಿದವರಲ್ಲಿ ಒಬ್ಬರಾದ ಸಿಪಿಐ(ಎಂ) ಮುಖಂಡ ಮೊಹಮ್ಮದ್ ಯೂಸುಫ್ ತಾರಿಗಾಮಿ 1989ರ ಡಿಸೆಂಬರ್‌ನಲ್ಲಿ ಮೊದಲ ಬಾರಿಗೆ ಇದನ್ನು ಎದುರಿಸಿದ್ದರು. ಕಾಶ್ಮೀರಿ ಪಂಡಿತರು ಪಟ್ಟ ಪಾಡುಗಳೊಂದಿಗೆ ಸೌಹಾರ್ದ ವ್ಯಕ್ತಪಡಿಸಿರುವ ಸಿಪಿಐ(ಎಂ) ಈ ಹಿಂದೆ ಮತ್ತು ನಂತರವೂ ಅವರ ಕಲ್ಯಾಣ ಮತ್ತು ಪುನರ್ವಸತಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೈಗೆತ್ತಿಕೊಂಡಿತ್ತು.

ಆದಾಗ್ಯೂ, ಈ ಸಂಕಟವನ್ನು ಬಿಂಬಿಸುವ ಚಲನಚಿತ್ರವನ್ನು ಕೋಮು ಧ್ರುವೀಕರಣವನ್ನು ಬಡಿದೆಬ್ಬಿಸಲು ಬಳಸಲಾಗುತ್ತಿದೆ, ಇದು ಅನಿವಾರ್ಯವಾಗಿಯೇ ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಮತ್ತು ಹಿಂಸಾಚಾರದ ವಾತಾವರಣ ಹೆಚ್ಚುತ್ತ ಹೋಗಲು ಕಾರಣವಾಗುತ್ತದೆ. ಇದು ಭಾರತದ ಐಕ್ಯತೆ ಮತ್ತು ಸಮಗ್ರತೆ ಮತ್ತು ಜನರ ಕಲ್ಯಾಣದ ಹಿತದೃಷ್ಟಿಯಿಂದ ಒಳ್ಳೆಯದಲ್ಲ.. ಇದು ಈಗಾಗಲೇ ತೀಕ್ಷ್ಣಗೊಳ್ಳುತ್ತಿರುವ ಕೋಮು ವಿಭಜನೆಗಳನ್ನು ಮತ್ತಷ್ಟು ಉಲ್ಬಣಗೊಳಿಸುತ್ತದೆ.

ಉಗ್ರವಾದದ ವಿರುದ್ಧದ ಹೋರಾಟವು ಎಲ್ಲಾ ಭಾರತೀಯರ ಒಗ್ಗಟ್ಟಿನ ಹೋರಾಟವಾಗಿದೆ ಎಂದು ಪುನರುಚ್ಚರಿಸುತ್ತ ಸಿಪಿಐ(ಎಂ) ಕೇಂದ್ರಸಮಿತಿಯು, ಉಗ್ರಗಾಮಿ ಶಕ್ತಿಗಳು ನಡೆಸಿದ ದೌರ್ಜನ್ಯಗಳಿಂದ ಎಲ್ಲ ಸಮುದಾಯಗಳು ಸಂಕಟಪಟ್ಟಿವೆ ಎನ್ನುತ್ತ ಉಗ್ರಗಾಮಿ ಹಿಂಸಾಚಾರದ ವಿರುದ್ಧದ ಈ ಹೋರಾಟದಲ್ಲಿ ಒಗ್ಗೂಡುವುದು ಅಗತ್ಯವಾಗಿದೆಯೇ ಹೊರತು ವಿಭಜನೆಗೊಳ್ಳುವದಲ್ಲ ಎಂದು ಅಭಿಪ್ರಾಯ ಪಟ್ಟಿದೆ.

ಪಶ್ಚಿಮ ಬಂಗಾಳ: ಖಾಸಗಿ ಕಲ್ಲಿದ್ದಲು ಗಣಿ ಪ್ರಸ್ತಾಪವನ್ನು ರದ್ದು ಮಾಡಬೇಕು

ಬೀರ್‌ಭೂಮ್ ಜಿಲ್ಲೆಯ ದೇವೂಚಾ ಪಚಮ್ಮೆಯಲ್ಲಿ ಟಿಎಂಸಿ ರಾಜ್ಯ ಸರ್ಕಾರವು ಬಹಳಷ್ಟು ದೊಡ್ಡ ಬುಡಕಟ್ಟು ಜನಸಂಖ್ಯೆಯನ್ನು ಒಳಗೊಂಡಂತೆ ಸ್ಥಳೀಯ ಸಮುದಾಯಗಳನ್ನು ಖಾಸಗಿ ಓಪನ್‌ಕಾಸ್ಟ್ ಕಲ್ಲಿದ್ದಲು ಗಣಿಗಾಗಿ ಅವರ ಮನೆಮಾರುಗಳಿಂದ ಸ್ಥಳಾಂತರಿಸಲು ಪ್ರಯತ್ನಿಸುತ್ತಿದೆ. ಇದಕ್ಕೂ ಮುನ್ನ ಕೋಲ್ ಇಂಡಿಯಾ ಲಿಮಿಟೆಡ್ ಈ ಪರಿಯೋಜನೆಯು ಕಾರ್ಯಸಾಧ್ಯವಲ್ಲ ಎಂದು ಘೋಷಿಸಿತ್ತು. ಇದು ಉದ್ಯೋಗದ ವಿಷಯದಲ್ಲಿ ಅಥವಾ ಪ್ರದೇಶದ ಒಟ್ಟಾರೆ ಅಭಿವೃದ್ಧಿಗಾಗಲೀ ಯಾವುದೇ ಪ್ರಯೋಜನವನ್ನು ತರುವುದಿಲ್ಲ. ಬದಲಾಗಿ, ಇದು ಪರಿಸರ ಮತ್ತು ವಾಸಸ್ಥಳಗಳನ್ನು ನಾಶಪಡಿಸುತ್ತದೆ. ಈ ನಡೆಯು ಸರ್ಕಾರದ ಯೋಜನೆಯ ವಿರುದ್ಧ ಒಂದು ಅತ್ಯಂತ ವಿಶಾಲವಾದ ನೆಲೆಯ ಐಕ್ಯ ಚಳುವಳಿ ಎದ್ದು ಬರುವಂತೆ ಮಾಡಿದೆ. ಪ್ರಜಾಪ್ರಭುತ್ವವಾದಿ ಶಕ್ತಿಗಳು ಈ ಪರಿಯೋಜನೆಯನ್ನು ನಿಸ್ಸಂದಿಗ್ಧವಾಗಿ ಕೈಬಿಡಬೇಕು ಎಂದು ಆಗ್ರಹಿಸುತ್ತಿವೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ಘೋರ ಬೀರ್‌ಭೂಮ್ ಹತ್ಯೆಗಳು

ಅಕ್ರಮ ಮರಳು ಗಣಿಗಾರಿಕೆ ಮತ್ತು ಇತರ ಕಾನೂನುಬಾಹಿರ ಚಟುವಟಿಕೆಗಳ ನಡುವಿನ ನಂಟು ಸ್ಥಳೀಯ ಟಿಎಂಸಿ ಅಧಿಕಾರ-ಶ್ರೇಣಿ ಮತ್ತು ಪೊಲೀಸ್ ಆಡಳಿತದಲ್ಲಿ ಮಾಫಿಯಾವನ್ನು ಗಟ್ಟಿಗೊಳಿಸಿದೆ. ರಾಂಪುರ್‌ಹಾಟ್ ಬ್ಲಾಕ್‌ನ ಬೊಗ್ತುಯಿ ಗ್ರಾಮದಲ್ಲಿ ಹಲವಾರು ಗುಡಿಸಲುಗಳನ್ನು ಸುಟ್ಟುಹಾಕಿದ ಮತ್ತು ಹತ್ತು ಜನರನ್ನು, ಹೆಚ್ಚಾಗಿ ಮಹಿಳೆಯರು ಮತ್ತು ಮಕ್ಕಳನ್ನು, ಸುಟ್ಟುಹಾಕಿದ ಹೀನಕೃತ್ಯದಲ್ಲಿ ಇದು ಬಯಲಾಗಿದೆ.. ಪಂಚಾಯತ್‌ನ ಸ್ಥಳೀಯ ಟಿಎಂಸಿ ಉಪಮುಖ್ಯಸ್ಥನ ಸಾವು ಮತ್ತು ಈ ಕೊಲೆಗಡುಕ ಪ್ರತೀಕಾರವು ಟಿಎಂಸಿ ಇದರಲ್ಲಿ ಎಷ್ಟು ಆಳವಾಗಿ ತೊಡಗಿಕೊಂಡಿದೆ ಮತ್ತು ಹೇಗೆ ಪೊಲೀಸರು ಈ ಬಗ್ಗೆ ಕಣ್ಣುಮುಚ್ಚಿಕೊಂಡಿದ್ದಾರೆ ಎಂಬುದನ್ನು ಬಹಿರಂಗಪಡಿಸಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.


ಅನೀಸ್ ಖಾನ್ ಕೊಲೆ-ತಕ್ಷಣವೇ ನ್ಯಾಯ ಒದಗಿಸಬೇಕು

ಹೌರಾ ಜಿಲ್ಲೆಯ ಅಮ್ತಾ ಬ್ಲಾಕ್‌ನ ಶಾರದಾ ಗ್ರಾಮದಲ್ಲಿ ಪೋಲೀಸರಿಂದ ಅಲಿಯಾ ವಿಶ್ವವಿದ್ಯಾಲಯದ ಅನೀಸ್ ಖಾನ್ ಎಂಬ ವಿದ್ಯಾರ್ಥಿ ಹೋರಾಟಗಾರನ ಹತ್ಯೆಯಾಗಿರುವುದನ್ನು ಖಂಡಿಸಿದ ಕೇಂದ್ರ ಸಮಿತಿಯು ಅಪರಾಧಿಗಳನ್ನು ಶೀಘ್ರವಾಗಿ ಬಂಧಿಸಿ ಕಠಿಣ ಶಿಕ್ಷೆಗೆ ಗುರಿಪಡಿಸುವ ಮೂಲಕ ತಕ್ಷಣವೇ ನ್ಯಾಯವನ್ನು ನೀಡಬೇಕು ಎಂದು ಆಗ್ರಹ ಪಡಿಸಿತು.

ಸಿಪಿಐ(ಎಂ)ನ 23ನೇ ಮಹಾಧಿವೇಶನ

ಏಪ್ರಿಲ್ 6 ರಿಂದ 10, 2022ರ ವರೆಗೆ ಕೇರಳದ ಕಣ್ಣೂರಿನಲ್ಲಿ ನಡೆಯಲಿರುವ ಪಕ್ಷದ 23 ನೇ ಮಹಾಧಿವೇಶನದ ಪರಿಗಣನೆಗೆ ಮಂಡಿಸಬೇಕಾದ ಕರಡು ರಾಜಕೀಯ-ಸಂಘಟನಾ ವರದಿಯನ್ನು ಕೇಂದ್ರ ಸಮಿತಿಯು ಅಂಗೀಕರಿಸಿತು.





ಯಶಸ್ವಿ ಸಾರ್ವತ್ರಿಕ ಮುಷ್ಕರದಿಂದ ಸರಕಾರ ಎಚ್ಚೆತ್ತುಕೊಳ್ಳಬೇಕು: ಸಿಪಿಐ(ಎಂ) ಪೊಲಿಟ್‌ಬ್ಯುರೊ

ದೇಶದ ಕಾರ್ಮಿಕ ವರ್ಗ ಮಾರ್ಚ್ 28-29 ರಂದು ನಡೆದ 48 ಗಂಟೆಗಳ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಿದ್ದಾರೆ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಇದಕ್ಕಾಗಿ ಅವರನ್ನು ಅಭಿನಂದಿಸಿದೆ. 10 ಕೇಂದ್ರೀಯ ಕಾರ್ಮಿಕ ಸಂಘಗಳು ಮತ್ತು ವಿವಿಧ ವಲಯಗಳ ಒಕ್ಕೂಟಗಳು ನೀಡಿದ ಕರೆಗೆ ಲಕ್ಷಾಂತರ ಕಾರ್ಮಿಕರು ಸ್ಪಂದಿಸಿದ್ದಾರೆ.

ವರದಿಗಳ ಪ್ರಕಾರ, ಕೇರಳದಲ್ಲಿ ಸಂಪೂರ್ಣ ಮುಚ್ಚಿಕೆಯಾಯಿತು ಮತ್ತು ಪಶ್ಚಿಮ ಬಂಗಾಳ, ತಮಿಳುನಾಡು, ಹರಿಯಾಣ, ತೆಲಂಗಾಣ, ಕರ್ನಾಟಕ, ಅಸ್ಸಾಂ ಮತ್ತು ತ್ರಿಪುರದ ಪ್ರಮುಖ ಕೈಗಾರಿಕಾ ಕೇಂದ್ರಗಳಲ್ಲಿ ಮುಷ್ಕರವು ಭಾರಿ ಪರಿಣಾಮ ಬೀರಿತು. ವಿಮೆ ಮತ್ತು ಬ್ಯಾಂಕಿಂಗ್ ಸೇವೆಗಳಲ್ಲು ನೌಕರರು ಮುಷ್ಕರದಲ್ಲಿ ಸಂಪೂರ್ಣವಾಗಿ ಭಾಗವಹಿಸಿದ್ದು ಕಂಡು ಬಂತು. ಸಾರಿಗೆ, ವಿದ್ಯುತ್, ರಾಜ್ಯ ಸರ್ಕಾರಿ ಮತ್ತು ಕೇಂದ್ರ ಸರ್ಕಾರಿ ನೌಕರರು, ಸ್ಕೀಮ್ ವರ್ಕರ್‌ಗಳಂತಹ ಪ್ರಮುಖ ಕ್ಷೇತ್ರಗಳ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಮುಷ್ಕರದಲ್ಲಿ ಭಾಗವಹಿಸಿದರು.



ಮುಷ್ಕರದ ಯಶಸ್ಸು ಬಿಜೆಪಿ ಸರ್ಕಾರದ ರಾಷ್ಟ್ರೀಯ ಆಸ್ತಿಗಳ ನಗದೀಕರಣ, ಸಾರ್ವಜನಿಕ ವಲಯದ ಖಾಸಗೀಕರಣ, ನಾಲ್ಕು ಕಾರ್ಮಿಕ ಸಂಹಿತೆಗಳು ಮತ್ತು ಬೆಲೆ ಏರಿಕೆಯ ನೀತಿಗಳ ವಿರುದ್ಧ ಹೆಚ್ಚುತ್ತಿರುವ ಕೋಪವನ್ನು ಪ್ರತಿಬಿಂಬಿಸುತ್ತದೆ. ಮುಷ್ಕರ ಕರೆಯನ್ನು ವಿವಿಧ ರೈತ ಸಂಘಟನೆಗಳು, ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಮತ್ತು ಕೃಷಿ ಕಾರ್ಮಿಕರ ಸಂಘಟನೆಗಳು ಸಕ್ರಿಯವಾಗಿ ಬೆಂಬಲಿಸಿದವು.

ಕೆಲವು ರಾಜ್ಯಗಳಲ್ಲಿ ಪೋಲೀಸರು ಅಟ್ಟಹಾಸ ನಡೆಸಿದರು ಎನ್ನುತ್ತ ಅದನ್ನು ಪೊಲಿಟ್‌ಬ್ಯುರೊ ಖಂಡಿಸಿದೆ. ಸರಕಾರ ದಬ್ಬಾಳಿಕೆ ನಡೆಸುವ ಬದಲು ಕಾರ್ಮಿಕರ ಬೇಡಿಕೆಗಳಿಗೆ ಸ್ಪಂದಿಸಬೇಕು. ಈ ಸಾರ್ವತ್ರಿಕ ಮುಷ್ಕರವು ಕಾರ್ಮಿಕ ವರ್ಗ-ವಿರೋಧಿ ನೀತಿಗಳನ್ನು ಅನುಸರಿಸದಂತೆ ಸರ್ಕಾರಕ್ಕೆ ಎಚ್ಚರಿಕೆಯಾಗಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಆದಿವಾಸಿ ಹೋರಾಟಗಳ ನಾಯಕ ಬರ್ಕ್ಯ ಮಂಗತ್ ನಿಧನ



ಮಹಾರಾಷ್ಟ್ರದ ಸಿಪಿಐ(ಎಂ) ಮತ್ತು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್)ದ ಹಿರಿಯ ಆದಿವಾಸಿ ನಾಯಕ ಬರ್ಕ್ಯ ಮಂಗತ್ ಮಾರ್ಚ್ 31 ರ ಸಂಜೆ ಹಠಾತ್ ಹೃದಯಾಘಾತದಿಂದ ನಿಧನರಾದರು. ಕೆಲವು ತಿಂಗಳುಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರಿಗೆ 69 ವರ್ಷ ವಯಸ್ಸಾಗಿತ್ತು.

ಮಂಗತ್ ಅವರು 2015 ರಿಂದ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾಗಿದ್ದರು ಮತ್ತು 2014 ರಿಂದ 2022 ರವರೆಗೆ ಪಕ್ಷದ ಥಾಣೆ-ಪಾಲ್ಘರ್ ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿದ್ದರು. ಈ ತಿಂಗಳ ಆರಂಭದಲ್ಲಿ ಆರೋಗ್ಯದ ಕಾರಣಕ್ಕಾಗಿ ಅವರೇ ಜಿಲ್ಲಾ ಸಮ್ಮೇಳನದಲ್ಲಿ ಈ ಹುದ್ದೆಯಿಂದ ಕೆಳಗಿಳಿದರು.

ಇದಕ್ಕೂ ಮೊದಲು ಅವರು 15 ವರ್ಷಗಳ ಕಾಲ ಥಾಣೆ ಜಿಲ್ಲಾ ಪರಿಷತ್ತಿಗೆ ಚುನಾಯಿತರಾಗಿದ್ದರು. 1997ರಲ್ಲಿ ಆಗಿನ ಬಿಜೆಪಿ-ಶಿವಸೇನಾ ರಾಜ್ಯ ಸರ್ಕಾರದ ಷಡ್ಯಂತ್ರದಿಂದ ಜೈಲಿನಲ್ಲಿದ್ದರೂ ಜಿ.ಪಂ. ಗೆ ಆಯ್ಕೆಯಾದರು. ಅವರು ತಲಾಸರಿ ತಹಸಿಲ್ ಪಂಚಾಯತ್ ಸಮಿತಿಯ ಅಧ್ಯಕ್ಷರಾಗಿ 5 ವರ್ಷಕ್ಕೆ ಆಯ್ಕೆಯಾದರು.

ಹಲವು ವರ್ಷಗಳ ಕಾಲ ಎಐಕೆಎಸ್ ನ ರಾಜ್ಯ ಮತ್ತು ಜಿಲ್ಲಾ ಉಪಾಧ್ಯಕ್ಷರಾಗಿದ್ದ ಅವರು ಜಿಲ್ಲೆಯಲ್ಲಿ ಕಿಸಾನ್ ಸಭಾವನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಈ ಹಿಂದೆ ಡಿವೈಎಫ್ಐ ಸಂಸ್ಥಾಪಕ ಜಿಲ್ಲಾಧ್ಯಕ್ಷ ಹಾಗೂ ರಾಜ್ಯ ಉಪಾಧ್ಯಕ್ಷರಾಗಿದ್ದ ಅವರು ಭೂಮಿ ಮತ್ತು ಉದ್ಯೋಗಕ್ಕಾಗಿ ಆದಿವಾಸಿ ಯುವಕರ ಹೋರಾಟದ ನೇತೃತ್ವ ವಹಿಸಿದ್ದರು.

ತಲಸರಿ ಮತ್ತು ದಹಾಣು ತಹಸಿಲ್‌ಗಳಲ್ಲಿ, ಪಕ್ಷದ ನೇತೃತ್ವದ ಆದಿವಾಸಿ ಪ್ರಗತಿ ಮಂಡಲವು ಕಾಮ್ರೇಡ್ ಗೋದಾವರಿ ಶಾಮರಾವ್ ಪರುಲೇಕರ್ ಅವರ ಹೆಸರಿನಲ್ಲಿ ಹಿರಿಯ ಮತ್ತು ಜೂನಿಯರ್ ಕಾಲೇಜನ್ನು ನಡೆಸುತ್ತಿದೆ, ಜೊತೆಗೆ ಇತರ ಶಾಲೆಗಳು ಮತ್ತು ಹಾಸ್ಟೆಲ್‌ಗಳನ್ನು ಸಹ ನಡೆಸುತ್ತಿದೆ. ಮಂಗತ್ ಅವರು ಮಂಡಲ್‌ನ ಕಾರ್ಯದರ್ಶಿಯಾಗಿದ್ದರು.

ಕಾಂ. ಮಂಗತ್ ಅವರ ನಿಧನದಿಂದ ಪಕ್ಷಕ್ಕೆ, ಎಐಕೆಎಸ್ ಮತ್ತು ಇತರ ಎಲ್ಲಾ ಸಾಮೂಹಿಕ ರಂಗಗಳಿಗೆ ಅಪಾರ ನಷ್ಟವಾಗಿದೆ ಎಂದು ಸಿಪಿಐ(ಎಂ) ಹೇಳಿದೆ.

ಸಂಪಾದಕೀಯ


ಚುನಾವಣಾ ಸುಧಾರಣೆಗಳ ಚರ್ಚೆ:
ಅಪರಾಧಿಗಳ ಆತ್ಮ ನಿವೇದನೆ ಆಗದಿರಲಿ

ಚುನಾವಣಾ ಸುಧಾರಣೆಗಳ ಕುರಿತು ಕರ್ನಾಟಕ ವಿಧಾನಸಭೆಯಲ್ಲಿ ಮತ್ತೊಂದು ಸುತ್ತಿನ ಚರ್ಚೆಗಳಾಗುತ್ತಿವೆ. ಚುನಾವಣೆಗಳ ವಿವಿಧ ಹಂತಗಳ ಒಟ್ಟು ಪ್ರಕ್ರಿಯೆಗಳನ್ನು ಅದರ ವಿಧಾನ ಮತ್ತು ವಿದ್ಯಾಮಾನಗಳನ್ನು ಗಮನಿಸಿದ ಯಾರಿಗಾದರೂ ಬೇಸರ, ಹೇಸಿಗೆ ಹುಟ್ಟಿಸದೇ ಇರುವುದಿಲ್ಲ. ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನತೆ ತನ್ನ ಸರಕಾರವನ್ನು ಆಯ್ಕೆ ಮಾಡಿಕೊಳ್ಳುವ ಪ್ರಜಾಸತ್ತಾತ್ಮಕ ಪ್ರಕ್ರಿಯೆ ವಿಕೃತಗೊಳ್ಳುವುದು ಆತಂಕದ ವಿಚಾರವೂ ಆಗಿದೆ. ರಾಜಕೀಯ ಪಕ್ಷಗಳ ಪ್ರಣಾಳಿಕೆಗಳ ಪ್ರಚಾರ ಒಂದು ವಿಧಾನವಾದರೆ ಮತದಾರರ ಮನವೊಲಿಕೆಗೆ ಬಳಸುವ ತಂತ್ರಗಳು ಅಧಿಕಾರ ಹಿಡಿಯಲು ಬಹುಮತ ಪಡೆಯಲು ನಡೆಸುವ ಅಪ್ರಜಾಸತ್ತಾತ್ಮಕ ವಿಧಾನಗಳು ಮತ್ತೊಂದು ಬಗೆಯವು. ಬಹುತೇಕ ಎಲ್ಲಾ ಬಲಪಂಥೀಯ ಪಕ್ಷಗಳಲ್ಲಿ ಅಭ್ಯರ್ಥಿಗಳ ಆಯ್ಕೆಯಿಂದಲೂ ಹಿಡಿದು ಚುನಾವಣಾ ಹೋರಾಟ, ಮುಖ್ಯವಾಗಿ ಗೆಲುವು ಸಾಧಿಸಲು ಹಣ ಬಲ, ಸಾಮಾಜಿಕ ಸ್ಥಾನ, ಜಾತಿ–ಮತಧರ್ಮದ ಬಲ, ತೋಳ್ಬಲದ ಬಳಕೆಯ ಸಾಮರ್ಥ್ಯ, ಆಡಳಿತ ಯಂತ್ರದ ದುರ್ಬಳಕೆ, ಭ್ರಷ್ಟಾಚಾರ ಇತ್ಯಾದಿಗಳು ಅಘೋಷಿತ ಅಗತ್ಯಗಳಾಗಿವೆ. ಇಂತಹ 'ಪ್ರಾಯೋಗಿಕ' ಎಂದು ಕರೆಸಿಕೊಳ್ಳುವ ವಿಧಾನಗಳು ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದುರ್ಬಲಗೊಳಿಸಿ, ಸಂವಿಧಾನಾತ್ಮಕ ಮೌಲ್ಯಗಳನ್ನು ಅಪಹಾಸ್ಯ ಮಾಡುತ್ತವೆ. ಪ್ರಜಾಪ್ರಭುತ್ವೀಯ ವ್ಯವಸ್ಥೆಯನ್ನು ಒಳಗಿನಿಂದಲೇ ಕೊರೆದು ತಿಂದು ಹಾಕುತ್ತವೆ. ಈ ನಕಾರಾತ್ಮಕ ಪ್ರವೃತ್ತಿಗಳ ನಡುವೆಯೇ ಪ್ರಜಾಪ್ರಭುತ್ವ ಜನತೆಯ ಜಾಗೃತಿಯಿಂದ ಒಂದಿಷ್ಟು ಉಸಿರಾಡಿ ಕೊಂಡಿರುವುದನ್ನು ಅಲ್ಲಗಳೆಯಲಾಗುವುದಿಲ್ಲ ಎಂಬುದೂ ನಿಜ. ಸ್ಥಾಪಿತ ಹಿತಾಸಕ್ತಿಗಳ ಸಾಧನೆಗಾಗಿ ಪ್ರಭುತ್ವವೇ ಸರ್ವಾಧಿಕಾರಿ ಪ್ರವೃತ್ತಿಯ ಹಾದಿ ಹಿಡಿದಾಗ ಸಂಸದೀಯ ಮೌಲ್ಯಗಳ ಕುಸಿತ ಮಾತ್ರವಲ್ಲ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ವ್ಯವಸ್ಥೆಯೇ ಶಿಥಿಲಗೊಳ್ಳುವ ಅಪಾಯಕಾರಿ ಸೂಚನೆಗಳು ಇಲ್ಲದಿಲ್ಲ. ಭಾರತ ಸ್ವಾತಂತ್ರ್ಯ ಗಳಿಸಿದ ಬಳಿಕ ವಸಾಹತುಶಾಹಿಗಳ ಆಳ್ವಿಕೆಯಿಂದ ವಿಮೋಚನೆಗೊಂಡ ದೇಶಗಳಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆ ಬಹು ಬೇಗ ಬುಡ ಮೇಲಾಗಿ ಪ್ರಜೆಗಳನ್ನು ದಮನಿಸಿ ಸರ್ವಾಧಿಕಾರಿ ವ್ಯವಸ್ಥೆ ಮೇಲುಗೈ ಸಾಧಿಸಿರುವ ನಿದರ್ಶನಗಳು ಕಣ್ಣೆದಿರಿಗಿವೆ. ಹಲವು ಮಿತಿಗಳ ನಡುವೆಯೂ ಭಾರತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಆಳವಾಗಿ ಬೇರೂರಿದೆ ಎನ್ನುವ ಮಾತುಗಳು ಇವೆ. ಆದರೆ ಆಳುವ ವರ್ಗಗಳ ಬೆದರಿಕೆಗಳ ಎದುರಲ್ಲಿ ಭಾರತದ ಸಂಸದೀಯ ಪ್ರಜಾಪ್ರಭುತ್ವ ಕೊನೆಯ ವಿಕೆಟ್ ಎನ್ನುವ ಎಚ್ಚರಿಕೆಯ ಅನುಭವಿಗಳ ಮಾತು ಉತ್ಪ್ರೇಕ್ಷೆಯಲ್ಲ. ಬದಲಾಗುವ ಆರ್ಥಿಕ ವ್ಯವಸ್ಥೆಯು ಬದಲಾದ ಸಾಮಾಜಿಕ, ರಾಜಕೀಯ ವ್ಯವಸ್ಥೆಯ ಸಂರಚನೆಗಾಗಿ ಒತ್ತಾಯಿಸುತ್ತದೆ.

ನಮ್ಮ ಸಂಸದೀಯ ವ್ಯವಸ್ಥೆಯಲ್ಲಿ ಚುನಾವಣಾ ಪದ್ಧತಿಯ ದೋಷ ದೌರ್ಬಲ್ಯಗಳಿಗೆ ರಾಜಕೀಯ ಪಕ್ಷಗಳ ಪಾತ್ರ ಇರುವಂತೆ ಪ್ರಭುತ್ವದ ಹಿತಾಸಕ್ತಿಗಳೂ ಅಷ್ಟೇ ಮುಖ್ಯವಾಗಿವೆ. ತಮ್ಮ ವೈಫಲ್ಯಗಳನ್ನು ಮರೆಮಾಚಿಕೊಳ್ಳಲು ಆಮಿಷ, ಅಕ್ರಮಗಳಿಗೆ ಮೊರೆ ಹೋಗಲಾಗುತ್ತಿದೆ. ರಾಜಕೀಯ ಅಧಿಕಾರ ಮತ್ತು ಚುನಾವಣಾ ಸುಧಾರಣೆ ಕುರಿತಾದ ಯಾವುದೇ ಚರ್ಚೆಗಳು ಈ ತಳಹದಿಯನ್ನು ಬಿಟ್ಟು ಹೋಗುವಂತಿಲ್ಲ.

ಚುನಾವಣಾ ಸುಧಾರಣೆಗಳ ಕುರಿತ ಚರ್ಚೆಗಳು ಸಂಸತ್ ಹಾಗೂ ವಿಧಾನಸಭಾ ಮಟ್ಟದಲ್ಲಿ ಹಲವಾರು ನಡೆದಿವೆ. ಅಧ್ಯಯನ ಸಮಿತಿಗಳು, ಹಲವು ಆಯೋಗಗಳು ರಚನೆಯಾಗಿವೆ. 1990 ರ ಜನವರಿಯಲ್ಲಿ ಪ್ರಧಾನಿ ವಿ.ಪಿ.ಸಿಂಗ್ ಅವರು ಕರೆದ ಸರ್ವಪಕ್ಷಗಳ ಸಭೆಯನ್ನು ಸುಧಾರಣೆಗಳ ಬಗ್ಗೆ ಚರ್ಚಿಸಲಾಯಿತು. ದಿನೇಶ್ ಗೋಸ್ವಾಮಿ ಅಧ್ಯಕ್ಷತೆಯ ಸಮಿತಿ 107 ಶಿಫಾರಸುಗಳನ್ನು ನೀಡಿದೆ. 1993 ರಲ್ಲಿ ವೋರಾ ಸಮಿತಿ ರಾಜಕೀಯ ಅಪರಾಧೀಕರಣದ ತಡೆಗಳ ಬಗ್ಗೆ ವಿಸ್ತೃತ ವರದಿಯನ್ನು ನೀಡಿದೆ. 1999 ರಲ್ಲಿ ರಾಮ್ ಜೇಠ್ಮಲಾನಿ ಸಚಿವರಾಗಿದ್ದಾಗ ಚುನಾವಣಾ ಕಾನೂನು ಸುಧಾರಣೆಗಳ ಬಗ್ಗೆ ಕ್ರಮ ವಹಿಸಿದೆ. ಬಿ.ಪಿ ರೆಡ್ಡಿ ಅವರು ಹದಿನೈದನೆಯ ಕಾನೂನು ಆಯೋಗದ ಅಧ್ಯಕ್ಷರಾಗಿರುವಾಗ ಹಲವು ಪ್ರಸ್ತಾವಗಳು ಬಂದಿವೆ. 1998 ರಲ್ಲಿ ಇಂದ್ರಜಿತ್ ಗುಪ್ತಾ ರವರ ಸಮಿತಿ ಸುಧಾರಣೆಗಳ ಪ್ರಸ್ತಾವಗಳನ್ನು, ಚುನಾವಣೆಗಳ ವೆಚ್ಚವನ್ನು ಸರಕಾರವೇ ಭರಿಸುವ ಬಗ್ಗೆ ಶಿಫಾರಸುಗಳನ್ನು ನೀಡಿದೆ. 2000 ದಲ್ಲಿ ನ್ಯಾ.ಎಂ.ಎನ್.ವೆಂಕಟಾಚಲಯ್ಯ ನವರು ಸಂವಿಧಾನ ಸುಧಾರಣೆಗೆ ಚುನಾವಣಾ ಪ್ರಕ್ರಿಯೆ, ರಾಜಕೀಯ ಪಕ್ಷಗಳ ಪಾತ್ರ ಕುರಿತು ಶಿಫಾರಸುಗಳನ್ನು ನೀಡಿದ್ದಾರೆ. ಇಂತಹ ಹಲವು ಹತ್ತಾರು ತಜ್ಞರ ಶಿಫಾರಸುಗಳು ನಮ್ಮ ಕಣ್ಣೆದುರಿಗಿದೆ. ಆದರೆ ಪರಿಸ್ಥಿತಿ ಸುಧಾರಿಸುವ ಬದಲು ಮತ್ತಷ್ಟು ಸಿನಿಕತನದಿಂದ ಅಧಃಪತನಕ್ಕೆ ಸಾಗುತ್ತಿದೆ.

ಕರ್ನಾಟಕ ವಿಧಾನಸಭೆಯಲ್ಲಿ ಕೂಡ ಈ ಸುತ್ತಿನಲ್ಲಿ ಸುಧಾರಣೆಗಳ ಬಗ್ಗೆ ಅತ್ಯಂತ ಬಿರುಸಿನ ಮಾಹಿತಿಪೂರ್ಣ ಚರ್ಚೆಗಳು, ವ್ಯಕ್ತಗೊಂಡ ಕಾಳಜಿ ಗಮನಿಸುವಂತಹುದು. ಪ್ರಸಕ್ತ ಪರಿಸ್ಥಿತಿಯ ದುಸ್ಥಿತಿ, ಪರಿಹಾರ, ಪರ್ಯಾಯಗಳನ್ನು ಮನ ಮುಟ್ಟುವಂತೆ ಬಿಜೆಪಿ, ಕಾಂಗ್ರೆಸ್, ಜೆಡಿಎಸ್, ಶಾಸಕರು ಮಾತನಾಡಿದ್ದಾರೆ. ಆಡಿದ



ಮಾತುಗಳಿಗೆ ಈ ಪಕ್ಷಗಳು ಬದ್ಧವೇ ಎಂದಾಗ ಅಂತಹ ಯಾವ ಭರವಸೆಗಳು ಕಾಣುತ್ತಿಲ್ಲ. ಬದಲಾಗಿ ಒಬ್ಬರು ಮತ್ತೊಬ್ಬರನ್ನು ಮೀರಿಸುವ ಸ್ಪರ್ಧೆಗಿಳಿದಂತೆ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ವಿಶೇಷವಾಗಿ, ಬಿಜೆಪಿ ಯಂತಹ ರಾಜಕೀಯ ಪಕ್ಷ ಕಾರ್ಪೊರೇಟ್ ಕಂಪನಿಗಳ ಹಣದ ಹೊಳೆಯಲ್ಲಿಯೇ ಅಧಿಕಾರದ ಗದ್ದುಗೆಯತ್ತ ತೇಲಿ ತಲುಪಿದೆ. ಹಣ, ಅಧಿಕಾರದ ಎಗ್ಗಿಲ್ಲದ ದುರ್ಬಳಕೆ, ಆಪರೇಷನ್ ಕಮಲ ಎನ್ನುವ ಅನೈತಿಕ ಪಕ್ಷಾಂತರ, ದತ್ತಾಂಶಗಳ ಮತ್ತು ತಂತ್ರಜ್ಞಾನದ ದುರ್ಬಳಕೆ, ಮಾಧ್ಯಮಗಳ ಖರೀದಿ, ಸಾಮಾಜಿಕ ದ್ವೇಷ, ಧಾರ್ಮಿಕ ವಿಭಜನೆ ಗೆಲುವಿನ ಹಾದಿ ಎಂದು ಅಂಗೀಕರಿಸಿ ಅನುಸರಿಸುತ್ತಿದೆ. ಬಿಜೆಪಿಯ ಹಣ ಮತ್ತು ತಂತ್ರಗಾರಿಕೆ ಎದುರು ಶತಮಾನಗಳ ಇತಿಹಾಸವಿರುವ ಪಕ್ಷಗಳೇ ಏದುಸಿರು ಬಿಡುವ ಪರಿಸ್ಥಿತಿ ನಿರ್ಮಾಣಗೊಂಡಿದೆ. ಎಡ ಪಕ್ಷಗಳನ್ನು ಹೊರತುಪಡಿಸಿ ಉಳಿದೆಲ್ಲ ಪಕ್ಷಗಳೂ ಸರಿಸುಮಾರು ಅಂತಹ ವರಸೆಗಳನ್ನೇ ಆದರಿಸಿವೆ. ಉದಾರೀಕರಣ, ಜಾಗತೀಕರಣದ ಪ್ರಕ್ರಿಯೆಯಲ್ಲಿ ಅಪಾರ ಸಾರ್ವಜನಿಕ ಸಂಪತ್ತಿನ ಲೂಟಿ ಮಾಡಲು ಅನುವು ಮಾಡಿಕೊಡುವ ರಾಜಕೀಯ ಪಕ್ಷಗಳಿಗೆ ಹಣದ ಹರಿವು ಮತ್ತು ಅದನ್ನು ಅಧಿಕಾರದಲ್ಲಿ ಸ್ಥಾಪಿಸುವ ಪ್ರಯತ್ನಗಳು ನಡೆದಿವೆ. ಕಾರ್ಪೊರೇಟ್ ಹಿಡಿತ ಬಿಗಿಗೊಂಡಿದೆ.

ವಿಧಾನಸಭೆಯಲ್ಲಿ ನ ಆಳುವ ಮತ್ತು ವಿರೋಧ ಪಕ್ಷಗಳ ನಾಯಕರ ಮಾತುಗಳನ್ನು ಪ್ರಮುಖವಾಗಿ, ವಿಧಾನಸಭಾಧ್ಯಕ್ಷರ ಆಶಯ ನುಡಿಗಳನ್ನು ಸಹ ಕೇಳಿದಾಗ ಅಪರಾಧಿಗಳ ಆತ್ಮನಿವೇದನೆ ಈ ಚರ್ಚೆ ಅನಿಸುವುದು ಬಿಟ್ಟರೆ ಚುನಾವಣಾ ಸುಧಾರಣೆಗಳಿಗೆ ಕಟಿಬದ್ಧರಾದ ಯಾವ ಪುಟ 4 ಕ್ಕೆ

ಕರ್ನಾಟಕಕ್ಕೆ ಕೇಂದ್ರ ಗೃಹ ಸಚಿವ, ಬಿಜೆಪಿ ನಾಯಕ ಅಮಿತ್ ಶಾ ಮತ್ತು ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ನಾಯಕ ರಾಹುಲ್ ಗಾಂಧಿ ಇಬ್ಬರೂ ಒಂದೇ ದಿನ ಭೇಟಿ ನೀಡಿದ್ದಾರೆ. ಇಬ್ಬರು ನಾಯಕರು ಪ್ರತ್ಯೇಕವಾಗಿ ಸಿದ್ದಗಂಗಾ ಮಠಕ್ಕೆ ಭೇಟಿ ನೀಡಿ ದಿವಂಗತ ಶ್ರೀಗಳ ಗುಣಗಾನ ಮಾಡಿದ್ದಾರೆ. ಬೆಂಗಳೂರಿನಲ್ಲಿ ಅವರ ಪಕ್ಷಗಳ ಪ್ರಮುಖ ನಾಯಕರುಗಳ ಸಭೆಗಳನ್ನು ಉದ್ದೇಶಿಸಿ ಮಾತನಾಡಿದ್ದಾರೆ. 2023 ರಲ್ಲಿ ನಡೆಯಬೇಕಿರುವ ವಿಧಾನಸಭಾ ಚುನಾವಣೆಯಲ್ಲಿ 150 ಸ್ಥಾನಗಳನ್ನು ಗೆಲ್ಲುವುದಕ್ಕಾಗಿ ಎಲ್ಲಾ ರೀತಿಯ ತಯಾರಿಗಳನ್ನು ಮಾಡಬೇಕೆಂದು ಸೂಚಿಸಿದ್ದಾರೆ.

ಈ ಇಬ್ಬರ ಭೇಟಿ ಮತ್ತು ಅವರ ಪಕ್ಷಗಳ ನಾಯಕರಿಗೆ ಕೊಟ್ಟಿರುವ ನಿರ್ದೇಶನಗಳನ್ನು ಗಮನಿಸಿದರೆ ಇದು ಬಹಳ ಮಹತ್ವದ ಭೇಟಿ. ಹೆಚ್ಚಿದ ಸಂಘಪರಿವಾರದ ಉದ್ರಿಕ್ತತೆಯ ಚಟುವಟಿಕೆಗಳು ಮತ್ತು ಬಿಜೆಪಿ ನಾಯಕರ ವಾಗ್ದಾಳಿ ವರಸೆಗಳು ಚುನಾವಣೆಯ ಸಿದ್ಧತೆಯನ್ನು ಸೂಚಿಸುತ್ತಿದ್ದವು. ಆದರೆ ಅಮಿತ್ ಶಾ ರವರ ಭೇಟಿಯಿಂದಾಗಿ ಈಗಾಗಲೇ ಒಂದು ರೀತಿಯಲ್ಲಿ ಆರಂಭಗೊಂಡಿದ್ದ ಚುನಾವಣಾ ಸಿದ್ಧತೆಗೆ ಅಧಿಕೃತತೆ ಮತ್ತು ವೇಗವರ್ಧಕತೆ ಸಿಕ್ಕಂತಾಗಿದೆ.

ಹಾಗೆ ನೋಡಿದರೆ ಈ ವಾರ ಕರ್ನಾಟಕಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಭೇಟಿ ನೀಡಬೇಕಿತ್ತು. ಆದರೆ ಹೆಚ್ಚಿನ ವಿವರಣೆಗಳಿಲ್ಲದೆ ಅದು ರದ್ದಾಗಿತ್ತು. ಆದರೆ ಅಮಿತ್ ಶಾ ಬೇಟಿ ದಿಡೀರನೆ ನಿಗದಿಯಾಗಿತ್ತು.

ರಾಹುಲ್ ಗಾಂಧಿಯವರು ತಮ್ಮ ಪಕ್ಷದ ನಾಯಕರುಗಳಿಗೆ ಚುನಾವಣೆಯ ಸಿದ್ಧತೆಗೆ ಗುರಿಯನ್ನು ನಿಗದಿಪಡಿಸಿದ್ದು ಒಂದು ಸಹಜ ಪ್ರಕ್ರಿಯೆ ಎನ್ನುವಂತೆ ಕಾಣುತ್ತದೆ. ಆದರೆ ಅಮಿತ್ ಶಾ ರವರು ತಮ್ಮ ಪಕ್ಷದ ನಾಯಕರಿಗೆ 150 ಸ್ಥಾನಗಳನ್ನು ಗೆಲ್ಲಲೇಬೇಕೆಂಬ ಗುರಿಯನ್ನು ನೀಡುವುದರ ಜೊತೆಗೆ ಖಡಕ್ಕಾದ ರಾಜಕೀಯ ನಿರ್ದೇಶನ ಮತ್ತು ಕ್ಷಿಪ್ರ ಬೆಳವಣಿಗೆಗಳ ಸುಳಿವುಗಳನ್ನು ನೀಡಿ ಹೋಗಿದ್ದಾರೆ.

ನಿಗದಿತ ಅವಧಿಯಂತೆ ಅಂದರೆ 2023 ರ ಮೇ ತಿಂಗಳಲ್ಲಿ ವಿಧಾನಸಭೆಯ ಅವಧಿ ಪೂರ್ಣಗೊಳ್ಳಲಿದೆ. ಆ ಮೊದಲು ಚುನಾವಣೆ ನಡೆದು ಹೊಸ ಸರ್ಕಾರ ರಚನೆ ಆಗಬೇಕಿದೆ. ಆದರೆ ಅಮಿತ್ ಶಾ ರವರು 'ಚುನಾವಣೆ ಅವಧಿ ಪೂರ್ಣಗೊಂಡಾಗ ಆಗಲಿ ಅಥವಾ ಅವಧಿಪೂರ್ವ ದಲ್ಲಾಗಲಿ ನಡೆದರೂ ಹೆಚ್ಚಿನ ಪರಿಣಾಮವೇನೂ ಇರುವುದಿಲ್ಲ' ಎಂದು ಹೇಳಿದರಾದರೂ ಒಂದು ರೀತಿಯಲ್ಲಿ ಅವಧಿ ಪೂರ್ವದಲ್ಲಿ ಚುನಾವಣೆಗಳನ್ನು ನಡೆಸಿದರೆ ಹೆಚ್ಚಿನ ಲಾಭ ಬಿಜೆಪಿಗೆ ಬರಬಹುದೇ ಎನ್ನುವ ಬಗ್ಗೆ ಇನ್ನಷ್ಟು ಆಳವಾಗಿ ವಿಶ್ಲೇಷಣೆ ಮತ್ತು ವಿವರಣೆಗಳನ್ನು ಕೊಡುವಂತೆ ಸೂಚಿಸಿದ್ದಾರೆ.

ಈಗಾಗಲೇ ಸಂಘಪರಿವಾರ ರಾಜ್ಯದಲ್ಲಿ ಉಂಟು ಮಾಡಿರುವ ಅಲ್ಪಸಂಖ್ಯಾತರ ಮೇಲಿನ ಧಾಳಿಗಳು ದ್ವೇಷದ ಕೃತ್ಯಗಳಿಂದ ಮತದಾರರು ಕೋಮು ಧೃವೀಕರಣಗೊಳ್ಳುತ್ತಿದ್ದು

ಈ ವಾರ

ಅಮಿತ್ ಶಾ ಭೇಟಿ
ವೇಗ ಪಡೆದ ರಾಜಕೀಯ ತಂತ್ರಗಾರಿಕೆ



ಎಸ್.ವೈ. ಗುರುಶಾಂತ್

ಇದನ್ನು ಮತ್ತಷ್ಟು ವಿಸ್ತರಿಸಿ ಉಳಿಸಿಕೊಂಡರೆ ಆದಷ್ಟು ಹೆಚ್ಚಿನ ಲಾಭವನ್ನು ಪಡೆಯಬಹುದೇ ಎನ್ನುವುದು ಒಂದು ಯೋಚನೆ. ಅಮಿತ್ ಶಾ ಇಷ್ಟು ತರಾತುರಿಯಲ್ಲಿ ರಾಜ್ಯಕ್ಕೆ ಭೇಟಿ ನೀಡಿ ಪ್ರಮುಖರ ಸಭೆ ನಡೆಸಿದ ಔಚಿತ್ಯ ಏನು ಎನ್ನುವ ಕುತೂಹಲ ಇದ್ದೇ ಇದೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರುವ ಸಾಧ್ಯತೆಗಳು ಏನಿದೆ ಎನ್ನುವ ಕುರಿತು ಆರೆಸ್ಸೆಸ್ ತನ್ನದೇ ಆಂತರಿಕ ಸಮೀಕ್ಷೆ ನಡೆಸಿದ ವರದಿಗಳು ಬಹಿರಂಗವಾಗಿವೆ. ಈಗಿನ ಪರಿಸ್ಥಿತಿ ಮುಂದುವರೆದರೆ 2023 ರಲ್ಲಿ ಬಿಜೆಪಿ ಬಹಳ ಶ್ರಮವಹಿಸಿದಲ್ಲಿ 65 ರಿಂದ 70 ಸ್ಥಾನಗಳು, ಕಾಂಗ್ರೆಸ್ 115 ರಿಂದ 120, ಜೆ.ಡಿ.ಎಸ್ 29 ರಿಂದ 34 ಸ್ಥಾನ ಗೆಲ್ಲುವ ಅಂದಾಜನ್ನು ಕಂಡುಕೊಂಡಿದೆ. ಬಿಜೆಪಿಯ ಸದ್ಯದ ಸ್ಥಿತಿಯಿಂದ ಶಕ್ತಿ ಹೆಚ್ಚಿಸಿಕೊಳ್ಳಲು ತನ್ನ 'ಚಾಣಕ್ಯ'(?) ಅಮಿತ್ ಶಾ ರವರನ್ನು ತುರ್ತಾಗಿ ಕರೆಸಿಕೊಂಡಿದೆ.

ಈಗ ರಾಜ್ಯದಲ್ಲಿ ತೀವ್ರಗೊಂಡಿರುವ ಕೋಮು ವಿಭಜಕ ಧ್ರುವೀಕರಣವನ್ನು ಮತ್ತಷ್ಟು ವಿಸ್ತರಿಸುವುದರ ಜೊತೆಗೆ ಕೆಲವು ನಿರ್ದಿಷ್ಟ ಗುರಿಗಳನ್ನು ಅಮಿತ್ ಶಾ ನೀಡಿದ್ದಾರೆ. ಹೆಚ್ಚಿನ ಸ್ಥಾನಗಳನ್ನು ಗಳಿಸಬೇಕೆಂದರೆ ವಿಶೇಷವಾಗಿ ದಕ್ಷಿಣ ಕರ್ನಾಟಕಕ್ಕೆ ಹೆಚ್ಚಿನ ಒತ್ತು ನೀಡಬೇಕೆಂಬುದು ಪ್ರಮುಖವಾದ ಒಂದು ಅಂಶ. ಅಂದರೆ ಒಕ್ಕಲಿಗ ಸಮುದಾಯದ ಪ್ರಾಬಲ್ಯ ಇರುವ ಈ ಭಾಗದಲ್ಲಿ ಶತಾಯಗತಾಯ ಮೇಲುಗೈ ಸಾಧಿಸಲು ಕಾರ್ಯಸೂಚಿಯನ್ನು ನೀಡಲಾಗಿದೆ. ಅದರಂತೆ ಅತ್ಯಂತ ಪ್ರಭಾವಶಾಲಿ ಗಳಾದ 50 ರಿಂದ 60– ವರೆಗೆ ಕಾಂಗ್ರೆಸ್ ಮತ್ತು ಜೆಡಿಎಸ್ ಗಳಲ್ಲಿರುವ ನಾಯಕರನ್ನು ಬಿಜೆಪಿ ಪಕ್ಷಕ್ಕೆ ಸೆಳೆಯುವುದು ಒಂದು ಗುರಿ. ಇದಕ್ಕಾಗಿ ರಾಜ್ಯದ ಅಧ್ಯಕ್ಷರ ನೇತೃತ್ವದಲ್ಲಿ ಒಂದು ವಿಶೇಷ ಸಮಿತಿಯನ್ನು ನೇಮಕ ಮಾಡಲಾಗಿದೆ.

ಈಗಾಗಲೇ ಸಂಘಪರಿವಾರ ಈ ವಿಭಾಗದಲ್ಲಿ ತನ್ನ ಆಪರೇಷನ್ನನ್ನು ತೀವ್ರ ಗೊಳಿಸಿರುವುದು ಮತ್ತು ಒಂದಿಷ್ಟು ಮುನ್ನಡೆ ಸಾಧಿಸುತ್ತಿರುವುದನ್ನು ಗಮನಿಸಬಹುದು. ಈ ಭಾಗದಲ್ಲಿ ರಾಜಕೀಯವಾಗಿ ಬಿಜೆಪಿಗೆ ಅಷ್ಟೊಂದು ಶಕ್ತಿ ಇರುವುದು ಮೇಲ್ನೋಟದಲ್ಲಿ ಕಾಣುವುದಿಲ್ಲ. ಪ್ರಸಕ್ತವಾಗಿ ರಾಜಕೀಯ ಪ್ರಾಬಲ್ಯವನ್ನು ಉಳಿಸಿಕೊಳ್ಳಲು ಮತ್ತು ಸಾಧಿಸಲು ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷಗಳ ನಡುವೆ ಪೈಪೋಟಿ ಇದ್ದೇ ಇದೆ. ಈ ಪ್ರದೇಶ ಮಂಡ್ಯ ಹಾಸನ ರಾಮನಗರ ಮತ್ತು ಬೆಂಗಳೂರನ್ನು ಒಳಗೊಂಡಂತೆ ಒಕ್ಕಲಿಗರ ನಡುವಿನ ರಾಜಕೀಯದಲ್ಲಿ ಎರಡು ಪಕ್ಷಗಳು ಅಸ್ತಿತ್ವ ಪಡೆದುಕೊಂಡಿವೆ.

ವಿಶೇಷವಾಗಿ, ಜೆಡಿಎಸ್ ಗೆ ನೆಲೆ ಇರುವುದು ಈ ಭಾಗದಲ್ಲಿ. ಹೀಗಾಗಿ ಒಂದು ಕಡೆಯಲ್ಲಿ ಕಾಂಗ್ರೆಸ್ ಮತ್ತೊಂದು ಕಡೆಯಲ್ಲಿ ಬಿಜೆಪಿ ಇವೆರಡರ ನಡುವಿನಲ್ಲಿ ಜೆಡಿಎಸ್ ಪಕ್ಷ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾಗಿದೆ. ಇಂತಹ ಒಂದು ಹಣಾಹಣಿಯ ನಡುವಿನಲ್ಲಿ ಬಿಜೆಪಿ ಪ್ರಮುಖ ನಾಯಕರುಗಳನ್ನು ಸೆಳೆದುಕೊಂಡರೆ ತಾನು ಬೇರೂರಲು ಸಾಧ್ಯ ಎನ್ನುವ ಯೋಚನೆಯಲ್ಲಿದೆ. ಇದರ ಜೊತೆಯಲ್ಲಿ ಅಮಿತ್ ಶಾ ಕೊಟ್ಟಿರುವ ಸೂಚನೆ ಕುರುಬರು ಮತ್ತು ಒಕ್ಕಲಿಗರು ಅಲ್ಲದೇ ವಾಲ್ಮೀಕಿ ನಾಯಕರ ನಡುವೆ ಮತ್ತಷ್ಟು ಗಮನವನ್ನು ಕೇಂದ್ರೀಕರಿಸಬೇಕು ಎನ್ನುವುದು. ಅಂದರೆ ಹಿಂದುಳಿದ ವರ್ಗಗಳಲ್ಲಿ ತನ್ನ ಬಲವನ್ನು ಹೆಚ್ಚಿಸಿಕೊಳ್ಳಲು ಜಾತಿವಾರಾಗಿ ಒತ್ತು ನೀಡಬೇಕು ಮತ್ತು ಅದಕ್ಕೆ ತಕ್ಕಂತಹ ಕಾರ್ಯಾಚರಣೆಗೂ ಇಳಿಯಬೇಕು ಎನ್ನುವುದು ನಿರ್ದೇಶನದ ಸ್ಪಷ್ಟ ಸೂಚನೆ. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಈಗಲೂ ಹಿಂದುಳಿದ ವರ್ಗಗಳ ಬೆಂಬಲ ಪ್ರಮುಖವಾಗಿದೆ. ಅದನ್ನು ಕಿತ್ತುಕೊಳ್ಳುವ ಸೂಚನೆ ಅಮಿತ್ ಶಾ ರವರ ಚುನಾವಣಾ ತಂತ್ರಗಾರಿಕೆಯ ಜಾರಿಯ ಪೂರ್ವಭಾವಿ ಸಿದ್ಧತೆಯಾಗಿದೆ. ಈಗ ಮೊದಲಿನಂತೆ ಲಿಂಗಾಯಿತರ ಮೇಲಿನ ಪುಟ 4 ಕ್ಕೆ

1921ರ ಮಲಬಾರ್ ಬಂಡಾಯದ 387 ಹುತಾತ್ಮರ ಹೆಸರುಗಳನ್ನು ತೆಗೆದಿರುವುದು ಒಂದು ಗಂಭೀರ ಅನ್ಯಾಯ, ಇತಿಹಾಸವನ್ನು ತಿರುಚುವ ಪ್ರಯತ್ನ-33 ಗಣ್ಯರ ಖಂಡನೆ

ಭಾರತೀಯ ಇತಿಹಾಸ ಸಂಶೋಧನಾ ಮಂಡಳಿ(ಐಸಿಹೆಚ್‌ಆರ್) ಹುತಾತ್ಮರ ವಿಶ್ವಕೋಶದ ಐದನೇ ಸಂಪುಟದಿಂದ 387 ಮಾಪ್ಪಿಳ ಬಂಡಾಯಗಾರರ ಹೆಸರುಗಳನ್ನು ತೆಗೆದಿರುವುದು ಒಂದು ದುರದೃಷ್ಟಕರ ಕೃತ್ಯ ಎಂದು 33 ಹಿರಿಯ ಇತಿಹಾಸಕಾರರು ಮತ್ತು ಇತರ ಅಧ್ಯಯನಕಾರರು ಖಂಡಿಸಿದ್ದಾರೆ, ಇವರ ಹೆಸರುಗಳನ್ನು ಮತ್ತೆ ಹುತಾತ್ಮರ ಪಟ್ಟಿಯಲ್ಲಿ ಸೇರಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

"ನಾವು ಬ್ರಿಟಿಶ್ ಸಾಮ್ರಾಜ್ಯಶಾಹಿಯಿಂದ ಸ್ವಾತಂತ್ರ್ಯದ ಭಾರತೀಯ ಹೋರಾಟ ಒಂದು ಬಹುಆಯಾಮಗಳ ಹೋರಾಟ ಎಂದು ಭಾವಿಸುತ್ತೇವೆ. ಇದರಲ್ಲಿ ಕಾರ್ಮಿಕರು, ರೈತರು, ಮಧ್ಯಮ ವರ್ಗಗಳವರು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು, ಅಲ್ಪಸಂಖ್ಯಾತರು, ದಲಿತರು ಮತ್ತು ಆಧಿವಾಸಿಗಳು ಸೇರಿದಂತೆ ಜೀವನದ ಎಲ್ಲ ರಂಗಗಳ ಜನವಿಭಾಗಗಳೂ ಸೇರಿವೆ. ಇವರೆಲ್ಲ ಪ್ರತಿಭಟನೆ ಮತ್ತು ಹೋರಾಟಗಳ ಬಹುವಿಧ ಸ್ವರೂಪಗಳನ್ನು ಬಳಸಿದರು. ಸ್ವಾತಂತ್ರ್ಯವನ್ನು ಗೆದ್ದುಕೊಂಡಿರುವುದು ಜನತೆಯ ಹೋರಾಟಗಳ ಉಬ್ಬರಗಳಿಂದ, ಅದರ ಗಳಿಕೆಗಳನ್ನು ಯಾವುದೇ ಸಾಮಾಜಿಕ ಗುಂಪು, ಜಾತಿ ಅಥವ ಮತಕ್ಕೆ ಸೀಮಿತಗೊಳಿಸಲು ಸಾಧ್ಯವಿಲ್ಲ. 1921ರ ಮಲಬಾರ್ ಬಂಡಾಯ ಮಲಬಾರಿನಲ್ಲಿ ದಮನದಿಂದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಶ್ ವಸಾಹತುಶಾಹೀ ಪ್ರಭುತ್ವ ಮತ್ತು ಭೂಮಾಲಕರ ವಿರುದ್ಧ ಒಂದು ಬಂಡಾಯವಾಗಿತ್ತು. ಅದು ಭಾರತದಾದ್ಯಂತ ತುಳಿತಕ್ಕೊಳಗಾದ ಜನಗಳ ಹೋರಾಟಗಳ ಅಲೆಯ ಹರಿಕಾರನಾಯಿತು ಮತ್ತು ಸಾಮ್ರಾಜ್ಯಶಾಹಿಯ ವಿರುದ್ಧ ಜನತಾ ಪ್ರತಿರೋಧಕ್ಕೆ ಬುನಾದಿ ಒದಗಿಸಿತು" ಎಂದು ಈ ಗಣ್ಯವಕ್ತಿಗಳು ಮಾರ್ಚ್ 31 ರಂದು ನೀಡಿರುವ ಹೇಳಿಕೆ ತಿಳಿಸುತ್ತದೆ.

"ಈ ಹೋರಾಟಗಳಲ್ಲಿ ಪ್ರಾಣಾರ್ಪಣೆ ಮಾಡಿದ ಒಂದು ಜನವಿಭಾಗದ ಹೆಸರುಗಳನ್ನು ತೆಗೆಯುವ ಐಸಿಹೆಚ್‌ಆರ್ ನ ಈ ಕೃತ್ಯ ಮಲಬಾರಿನಲ್ಲಿ ಮಾತ್ರವಲ್ಲ, ಭಾರತದಾದ್ಯಂತ ಬ್ರಿಟಿಶ್ ಸಾಮ್ರಾಜ್ಯಶಾಹಿಯ ವಿರುದ್ಧ ಜನತೆಯ ಹೋರಾಟಗಳಲ್ಲಿ ಪ್ರಾಣಾರ್ಪಣೆ ಮಾಡಿದ ಜನಗಳ ವಿರುದ್ಧ ಒಂದು ಗಂಭೀರ ಅನ್ಯಾಯ. ಐಸಿಹೆಚ್‌ಆರ್‌ನ ಈ ಕೃತ್ಯ ಸ್ವಾತಂತ್ರ್ಯ ಹೋರಾಟದಲ್ಲಿ ಅಲ್ಪಸಂಖ್ಯಾತರು ಮತ್ತು ಅಂಚಿಗೆ ತಳ್ಳಲ್ಪಟ್ಟವರ ಪಾತ್ರವನ್ನು ನಗಣ್ಯಗೊಳಿಸುವ ಮತ್ತು ಆಳುವ ಹಿಂದುತ್ವ ಶಕ್ತಿಗಳು ಸ್ವಾತಂತ್ರ್ಯದ ಹೋರಾಟದಲ್ಲಿ ಹುತಾತ್ಮರಾದವರ ನಿಜವಾದ ವಾರಸುದಾರರು ಎಂಬ ಹುಸಿದಾವೆಯನ್ನು ನ್ಯಾಯಬದ್ಧಗೊಳಿಸಲು ಇತಿಹಾಸವನ್ನು ತಿರುಚುವ ಒಂದು ಉದ್ದೇಶಪೂರ್ವಕ ಪ್ರಯತ್ನ ಎಂದು ನಾವು ಭಾವಿಸುತ್ತೇವೆ" ಎಂದು ಹೇಳುತ್ತ ಈ ಗಣ್ಯರು ಈ ನಿರ್ಧಾರವನ್ನು ಮರುಪರಿಶೀಲಿಸಬೇಕು ಮತ್ತು ಪ್ರಸ್ತಾವಿತ ವಿಶ್ವಕೋಶದ ಸಂಪುಟದಲ್ಲಿ ಹುತಾತ್ಮರ ಪಟ್ಟಿಯಲ್ಲಿ ಈ 387 ಹೆಸರುಗಳನ್ನು ಮತ್ತೆ ಸೇರಿಸಬೇಕು ಎಂದು ಐಸಿಹೆಚ್‌ಆರ್‌ಗೆ ಮನವಿ ಮಾಡಿದ್ದಾರೆ.

ಪ್ರೊ.ಇರ್ಫಾನ್ ಹಬೀಬ್, ಡಾ. ಕೆ.ಎನ್. ಪಣಿಕ್ಕರ್ ಮುಂತಾದ ಹಿರಿಯ ಇತಿಹಾಸಕಾರರಲ್ಲದೆ ಡಾ॥ ಕೆ. ಸಚ್ಚಿದಾನಂದನ್, ಅಶೋಕ ವಾಜಪೇಯಿ, ಎನ್.ಎಸ್. ಮಾಧವನ್, ಟಿ.ಎಂ. ಕೃಷ್ಣ, ಶಶಿ ಕುಮಾರ್ ಮುಂತಾದ ಇತರ ರಂಗಗಳ ಒಟ್ಟು 33 ಗಣ್ಯರು ಈ ಮನವಿಗೆ ಸಹಿ ಹಾಕಿದ್ದಾರೆ.

ಅಮೆರಿಕಾದ ಒತ್ತಡಗಳನ್ನು ಧಿಕ್ಕರಿಸಬೇಕು -ಮೋದಿ ಸರಕಾರಕ್ಕೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹ



ಅಮೆರಿಕ ಸಂಯುಕ್ತ ಸಂಸ್ಥಾನದ ಉಪ ರಾಷ್ಟ್ರೀಯ ಭದ್ರತಾ ಸಲಹೆಗಾರ (ಅಂತಾರಾಷ್ಟ್ರೀಯ ಅರ್ಥಶಾಸ್ತ್ರ) ರಷ್ಯಾ ವಿರುದ್ಧದ ಅಮೆರಿಕನ್ ನಿರ್ಬಂಧಗಳನ್ನು ತಪ್ಪಿಸಲು ಮತ್ತು ಮಾಸ್ಕೋದೊಂದಿಗೆ ರಿಯಾಯಿತಿ ದರದಲ್ಲಿ ಇಂಧನ ವ್ಯವಹಾರವನ್ನು ರೂಪಿಸಲು ಭಾರತ ಪ್ರಯತ್ನಿಸಿದರೆ ಆಗುವ "ಪರಿಣಾಮಗಳ" ಬಗ್ಗೆ ಎಚ್ಚರಿಕೆ ಕೊಟ್ಟಿದ್ದಾರೆ. ಇದು ತನ್ನ ಉಪ ರಾಷ್ಟ್ರೀಯ ಭದ್ರತಾ ಸಲಹೆಗಾರನ ಮೂಲಕ ಅಮೆರಿಕಾ ಹೊರಡಿಸಿರುವ ಪರೋಕ್ಷ ಬೆದರಿಕೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಇದನ್ನು ಬಲವಾಗಿ ಖಂಡಿಸಿದೆ. ಅಮೆರಿಕನ್ ಡಾಲರನ್ನು ಬದಿಗಿಟ್ಟು ಯಾವುದೇ ಪಾವತಿ ವೇಳಾಪಟ್ಟಿಯನ್ನು ಮಾಡಿಕೊಳ್ಳಬಾರದು, ಅಂದರೆ ರೂಪಾಯಿ–ರೂಬಲ್ ಮಾರ್ಗವನ್ನು ಅನುಸರಿಸಬಾರದು ಎಂಬ ತೀವ್ರ ಒತ್ತಾಯವನ್ನು ಇದು ಸೂಚಿಸುತ್ತದೆ ಎಂದು ಅದು ಹೇಳಿದೆ.

ಮೋದಿ ಸರ್ಕಾರವು ಈಗಲಾದರೂ ಅಮೆರಿಕಾದೊಂದಿಗೆ ಕ್ವಾಡ್ ನಂತಹ ಸಾಮರಿಕ ಮಿಲಿಟರಿ ಮೈತ್ರಿಯಲ್ಲಿ ಸೇರುವುವದರ ಗಂಡಾಂತರಗಳನ್ನು, ಅದು ಬ್ಲ್ಯಾಕ್‌ಮೇಲ್ ಮತ್ತು ಒತ್ತಡಗಳ ಪ್ರವಾಹದ ಬಾಗಿಲು ತೆರೆದು ಕೊಟ್ಟಿದೆ ಎಂಬುದನ್ನು ಅರಿಯಬೇಕು ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಭಾರತ ಸರ್ಕಾರವು ಭಾರತದ ಸರ್ವೋಚ್ಚ ರಾಷ್ಟ್ರೀಯ ಹಿತಾಸಕ್ತಿಯನ್ನು ಎತ್ತಿಹಿಡಿಯಬೇಕು, ಇಂತಹ ಅಮೆರಿಕನ್ ಒತ್ತಡಗಳಿಗೆ ಶರಣಾಗಬಾರದು ಎಂದು ಆಗ್ರಹಿಸಿದೆ.

ಅಮಿತ್ ಶಾ ಭೇಟಿ ರಾಜಕೀಯ ತಂತ್ರಗಳಿಗೆ ವೇಗವರ್ಧತೆ....... ಪುಟ 3 ರಿಂದ

ಹಿಡಿತ ಯಡಿಯೂರಪ್ಪನವರಿಗೆ ಇಲ್ಲಾ ಎನ್ನುವುದು ಈ ಸಮೀಕ್ಷೆಯ ಒಂದು ಅವಲೋಕನದ ಅಂಶವಂತೆ. ಹಾಗಾಗಿ ಇರುವ ಲಿಂಗಾಯತರ ಜೊತೆಗೆ ಇನ್ನಷ್ಟು ಹೊಸ ಮತದಾರರ ಕಡೆಗೆ ಕೈಹಾಕುವುದು ಅದರ ಲೆಕ್ಕಾಚಾರ. ಆರ್.ಎಸ್.ಎಸ್. ನ ಅಂತರಿಕ ಸಮೀಕ್ಷೆ ವರದಿ ವಾಸ್ತವ ಏನೇ ಇರಲಿ ಒಂದಂತೂ ನಿಜ. ರಾಷ್ಟ್ರದ ಮತ್ತು ರಾಜ್ಯದ ಜನ ಬಿಜೆಪಿಯ ಆಡಳಿತ ದಲ್ಲಿ ಬೇಸರಗೊಳ್ಳುತ್ತಿದ್ದು ಬೆಲೆ ಏರಿಕೆಯಂತಹ ಜೀವನ ನಿರ್ವಹಣೆಯ ಭಾರ ಬಾಧೆಗಳಿಂದ ಜನರಲ್ಲಿ ಅತೃಪ್ತಿ ಹೆಚ್ಚುತ್ತಿದೆ. ಅದು ಯಾವುದೇ ಸ್ವರೂಪದಲ್ಲಿ ಸ್ಫೋಟಗೊಳ್ಳಬಹುದು ಎನ್ನುವ ವಾಸ್ತವಿಕ ಅಂದಾಜು ಬಿಜೆಪಿ ನಾಯಕತ್ವಕ್ಕೆ ಇದೆ. ಹಾಗಾಗಿ, ಅದನ್ನು ಬೇರೆ ಕಡೆಗೆ ತಿರುಗಿಸಿ ದಿಕ್ಕುತಪ್ಪಿಸುವ ಮತ್ತು ಅಧಿಕಾರವನ್ನು ಗಟ್ಟಿಗೊಳಿಸಿಕೊಳ್ಳುವ ರಾಜಕೀಯ ತಂತ್ರಕ್ಕೆ ಮೊರೆ ಹೋಗಿದೆ. ಈ ಕಾರಣದಿಂದ ತಮ್ಮದೇ ಆದ ಲೆಕ್ಕಾಚಾರಗಳ ಯೋಚನಾ ಲಹರಿಯಲ್ಲಿ ಇರುವ ಬಿಜೆಪಿ ನಾಯಕರುಗಳಿಗೆ ಚಾಟಿಯೇಟು ಕೊಟ್ಟು ಪೂರ್ಣಪ್ರಮಾಣದಲ್ಲಿ ಚುನಾವಣೆಯ ಕೆಲಸಕ್ಕೆ ಇಳಿಯಲು ಅಮಿತ್ ಶಾ ಮೂಲಕ ಪ್ರಯತ್ನ ಆರಂಭಗೊಂಡಿದೆ.

ಈ ನಡುವಿನಲ್ಲಿ ಮತ್ತೊಂದು ಬೆಳವಣಿಗೆಯೆಂದರೆ ಸಂಘಪರಿವಾರ ನಡೆಸಿರುವ ಕೋಮು ಉದ್ರೇಕತೆ ಮತ್ತು ಶಾಂತಿ ಕದಡುವ ಕೃತ್ಯಗಳ ವಿರುದ್ಧ ಕೈಗಾರಿಕೋದ್ಯಮಿಗಳು ತೀವ್ರ ಅಸಹನೆಯನ್ನು ವ್ಯಕ್ತಪಡಿಸಿದ್ದಾರೆ. ಇಂತಹ ವಾತಾವರಣ ಕೈಗಾರಿಕಾ ಸ್ನೇಹಿ ಅಭಿವೃದ್ಧಿಗೆ ಮಾರಕವಾಗಲಿದೆ. ಅದನ್ನು ತಡೆಯಲು ರಾಜ್ಯದ ಮುಖ್ಯಮಂತ್ರಿಗಳು, ಸರ್ಕಾರ ಪ್ರಯತ್ನಿಸಬೇಕು ಎಂದು ಬಯೋಟೆಕ್ ಸಂಸ್ಥೆಯ ಮುಖ್ಯಸ್ಥೆ ಕಿರಣ್ ಮಜುಂದಾರ್ ಶಾ ರವರು ಟ್ವೀಟ್ ಮೂಲಕ ವ್ಯಕ್ತಪಡಿಸಿದ್ದಾರೆ. ರಾಜ್ಯದಲ್ಲಿನ ಈಗಿನ ಬೆಳವಣಿಗೆಗಳು ರಾಜ್ಯದಲ್ಲೂ ಮತ್ತು ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟದಲ್ಲಿ ನಕಾರಾತ್ಮಕ ಪರಿಣಾಮಗಳನ್ನು ಬೀರಬಹುದಾಗಿದೆ. ಅಧಿಕಾರಕ್ಕೆ ಬಂದಾಗ ಬಸವರಾಜ ಬೊಮ್ಮಾಯಿ ಅವರು ನವ ಕರ್ನಾಟಕ ನಿರ್ಮಾಣದ ಕನಸನ್ನು ಮುಂದಿಟ್ಟಿದ್ದರು. ಈಗಲೂ ಅಭಿವೃದ್ಧಿಯ ರಾಜಕಾರಣದ ಪ್ರತಿನಿಧಿ ತಾವಾಗಬೇಕು ಎಂಬ ಇಂಗಿತವನ್ನು ಅವರು ವ್ಯಕ್ತಪಡಿಸುತ್ತಾರೆ. ಅದರ ಭಾಗವಾಗಿ ಮುಂದಿನ ಕೆಲ ತಿಂಗಳುಗಳಲ್ಲಿ ಅಂತರಾಷ್ಟ್ರೀಯ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ನಡೆಸಿ ಬಂಡವಾಳವನ್ನು ಸೆಳೆದು ರಾಜ್ಯದಲ್ಲಿ ಅಭಿವೃದ್ಧಿ ಸಾಧಿಸಬೇಕು ಎನ್ನುವ ಅಭಿವೃದ್ಧಿಯ ರೂಪುರೇಷಗಳನ್ನು ಇತ್ತೀಚೆಗೆ ಬಿಡುಗಡೆ ಮಾಡಿದ್ದಾರೆ.

ಯಡಿಯೂರಪ್ಪನವರನ್ನು ಬದಲಾಯಿಸಿ ಬೊಮ್ಮಾಯಿ ಅವರನ್ನು ಅಧಿಕಾರದಲ್ಲಿ ಕುಳ್ಳಿರಿಸಿದ ಬಳಿಕ ಅವರ ಆಜ್ಞೆಗಳು ಜಾರಿಯಾಗುತ್ತಲಿದ್ದರೂ ಸಂಘ ಪರಿವಾರಕ್ಕೆ ತೃಪ್ತಿ ಇಲ್ಲ. ಅಧಿಕಾರದಲ್ಲಿ ಆರೆಸ್ಸೆಸ್ಸಿನ ಕೈಗೊಂಬೆ ಕಟ್ಟಾಳುವನ್ನೇ ಸ್ಥಾಪಿಸಲು ಸತತವಾಗಿ ಪ್ರಯತ್ನಿಸುತ್ತಾ ಬರಲಾಗಿದೆ. ಅಂದರೆ ಬೊಮ್ಮಾಯಿ ಅವರನ್ನು ಬದಲಾಯಿಸುವುದು ಅದರ ಆಂತರಿಕ ನಿರ್ಧಾರವೂ ಇರಬಹುದು. ಅದಕ್ಕೆ ಬೇಕಾಗಿರುವ ಕಾರ್ಯಾಚರಣೆಯೂ ಗುಪ್ತ ಅಜೆಂಡಾಗಳಲ್ಲಿ ಇರಬಹುದು. ಇದಕ್ಕಾಗಿ ಆರೆಸ್ಸೆಸ್ಸಿನ ಬಿ.ಎಲ್. ಸಂತೋಷ್ ಮತ್ತು ಸಿ.ಟಿ. ರವಿ ಜಂಟಿಯಾಗಿ ಕೆಲಸ ಮಾಡುತ್ತಿರುವ ಮಾತುಗಳು ಇವೆ. ಯತ್ನಾಳ್ ಅವರು ಹೇಗೋ ಯಡಿಯೂರಪ್ಪನವರ ಬೆನ್ನು ಬಿದ್ದಿದ್ದಾರೆ.

ಈ ಸನ್ನಿವೇಶದಲ್ಲಿ ಆಂತರಿಕ ಬೇಗುದಿ ಗಳಲ್ಲಿ ಇರುವ ಕಾಂಗ್ರೆಸ್, ಬಹುಮುಖೀಯ ದಾಳಿಗಳಿಗೆ ಒಳಗಾಗಿರುವ ಜೆಡಿಎಸ್ ಪಕ್ಷಗಳು ಹೇಗೆ ಬಿಜೆಪಿಯನ್ನು ಎದುರಿಸಿ ನಿಲ್ಲುತ್ತವೆ, ತಡೆಯುತ್ತವೆ ಎನ್ನುವುದು ಒಂದು ಪ್ರತ್ಯೇಕ ಪ್ರಶ್ನೆ. ಬಿಜೆಪಿಯ ಎಲ್ಲಾ ಒಳಹೊರ ಪಿತೂರಿಯ ಹುನ್ನಾರಗಳನ್ನು ಸೋಲಿಸಿ ಅಧಿಕಾರಕ್ಕೆ ಬರದಂತೆ ತಡೆಯಲು, ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಎಡ ಮತ್ತು ಪ್ರಜಾಸತ್ತಾತ್ಮಕ, ಜಾತ್ಯತೀತ ಶಕ್ತಿಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಮತ್ತು ಒಂದು ನಿಜವಾದ ಜನ ಪರ್ಯಾಯವನ್ನು ಕಟ್ಟುತ್ತವೆ ಎನ್ನುವುದು ಕೂಡ ಬಹಳ ಮಹತ್ವದ ಸಂಗತಿ.

ಚುನಾವಣಾ ಸುಧಾರಣೆಗಳ ಚರ್ಚೆ: ಅಪರಾಧಿಗಳ ಆತ್ಮ ನಿವೇದನೆ ಆಗದಿರಲಿ.... ಪುಟ 3 ರಿಂದ

ಸೂಚನೆಗಳು ಕಾಣಸಿಗುವುದಿಲ್ಲ. ರಾಜಕೀಯ ಪಕ್ಷಗಳಿಂದ ಅತಿ ಅಗತ್ಯ ಇರುವ ಸುಧಾರಣೆಗಳ ಮಾತುಗಳು ಕೇವಲ ಹಳಹಳಿಕೆ ಗಳಾಗಿ ತೋರುತ್ತಿವೆ. ರಾಜಕೀಯ ಇಚ್ಛಾಶಕ್ತಿ, ಬದ್ಧತೆ ಇಲ್ಲದ ಸದನದ ಚರ್ಚೆಗಳು ಜನತೆಯ ಅಮೂಲ್ಯ ಸಮಯದ ವ್ಯರ್ಥಗೊಳಿಸುವಿಕೆಯಂತೆ ಕಾಣುತ್ತದೆ.

ಚುನಾವಣೆಯ ಖರ್ಚುವೆಚ್ಚಗಳನ್ನು ಸರಕಾರವೇ ವ್ಯವಸ್ಥೆಗೊಳಿಸುವುದು, ಬಹುಮುಖ್ಯವಾಗಿ, ಪ್ರಮಾಣಾತ್ಮಕ ಪ್ರಾತಿನಿಧ್ಯದ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು ಸುಧಾರಣೆಗಳಲ್ಲಿ ಅತಿ ಮುಖ್ಯವಾಗಿದೆ. ಇಂದಿನ ಚುನಾವಣಾ ಪದ್ಧತಿಯಲ್ಲಿ ಶೇಕಡವಾರು ಮತ ಕಡಿಮೆ ಪಡೆದಿದ್ದರೂ ಹೆಚ್ಚು ಸ್ಥಾನಗಳನ್ನು ಗಳಿಸಲಾಗುತ್ತಿದೆ. ಸರ್ಕಾರವನ್ನು ರಚಿಸುವುದು ವಾಸ್ತವದಲ್ಲಿ ಜನರ ಆಯ್ಕೆಯ ಬಹುಮತದ ಆಧಾರದಲ್ಲಿ ಇರುವುದಿಲ್ಲ. ಬಹುಮತಗಳು ಅವರ ವಿರುದ್ಧವೇ ಇರುತ್ತದೆ. ಮೇಲಾಗಿ ಪಕ್ಷ ಮತ್ತದರ ನೀತಿಗಳು ಗೌಣವಾಗಿ ಅಭ್ಯರ್ಥಿಗಳ ತೂಕವೇ ನಿರ್ಧಾರಕ ಅಂಶ ಆಗಿರುತ್ತದೆ. ಇದನ್ನು ಕರ್ನಾಟಕ ಒಳಗೊಂಡು ಹಲವಾರು ಕಡೆಗಳಲ್ಲಿ ನೋಡಿದ್ದೇವೆ. ಆದ್ದರಿಂದ ರಾಜಕೀಯ ಪಕ್ಷಗಳಿಗೆ ದೊರೆಯುವ ಮತಗಳನ್ನು ಆದರಿಸಿ ಪ್ರಮಾಣಾತ್ಮಕವಾಗಿ ಸ್ಥಾನಗಳನ್ನು ಒದಗಿಸುವ ವ್ಯವಸ್ಥೆ ತುಲನಾತ್ಮಕವಾಗಿ ವೈಜ್ಞಾನಿಕವಾಗಿದೆ. ಪ್ರಮಾಣಾತ್ಮಕ ಪ್ರಾತಿನಿಧ್ಯದ ವ್ಯವಸ್ಥೆಯು ಜಗತ್ತಿನ ಹಲವು ದೇಶಗಳಲ್ಲಿ ಜಾರಿಯಲ್ಲಿದೆ. ಅದನ್ನು ಭಾರತದ ವಾಸ್ತವಿಕ ಸ್ಥಿತಿಯ ಅನುಭವದ ಹಿನ್ನೆಲೆಯಲ್ಲಿ ಅದನ್ನು ಅಗತ್ಯ ಅನುಸರಿಸಿ ಮರು ವಿನ್ಯಾಸಗೊಳಿಸಬಹುದು. ಈ ಹಿನ್ನೆಲೆಯಲ್ಲಿ ಎಡಪಕ್ಷಗಳು ಪ್ರಮಾಣಾತ್ಮಕ ಪ್ರಾತಿನಿಧ್ಯಕ್ಕೆ ಒತ್ತಾಯಿಸುತ್ತಿರುವುದು ಸೂಕ್ತವೂ ಆಗಿದೆ. ಹಾಗೆಯೇ ಚುನಾಯಿತ ಪ್ರತಿನಿಧಿ ಸಂವಿಧಾನ ಮತ್ತು ಜನತೆಯ ಹಿತಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಅಂತಹವರನ್ನು ವಾಪಸು ಕರೆಸಿಕೊಳ್ಳುವ ಹಕ್ಕು ಕೂಡ ಅಷ್ಟೇ ಪ್ರಮುಖವಾದುದು. ಆದರೆ ಅಂತಹ ಹಲವಾರು ರಚನಾತ್ಮಕ ಸುಧಾರಣೆಗಳ ಪ್ರಸ್ತಾವಗಳನ್ನು ಆಳುವ ಸರ್ಕಾರಗಳು ನಿರಂತರ ನಿರ್ಲಕ್ಷಿಸುತ್ತಲೇ ಬಂದಿವೆ. ಇಂತಹ ವರ್ತನೆಗಳು ಚುನಾವಣಾ ಸುಧಾರಣೆಗಳ ಬಗೆಗಿನ ಚರ್ಚೆಗಳ ಪ್ರಾಮಾಣಿಕತೆಯನ್ನು ಪ್ರಶ್ನಾರ್ಹ ಗೊಳಿಸಿವೆ.

ಶಾಸನ ಸಭೆಗಳಿಗೆ ನೂರಾರು ಕೋಟಿ ರೂ. ಗಳ ಒಡೆಯರ ಪ್ರವೇಶ, ಕಾರ್ಪೊರೇಟ್ ಪ್ರಾಯೋಜಿತ ರಾಜಕೀಯ ಪಕ್ಷಗಳು ಅದರ ಅಭ್ಯರ್ಥಿಗಳು ಕಂಪನಿಗಳ ನಿಧಿ ಪಡೆಯುವುದು, ಸಂವಿಧಾನ ವಿರೋಧಿ ಅಪರಾಧಿ ಹಿನ್ನೆಲೆಯವರು, ಸಂವಿಧಾನ ವಿರೋಧಿ ನಿಲುವುಗಳುಳ್ಳ ಅಭ್ಯರ್ಥಿಗಳು ಶಾಸಕಾಂಗದ ಒಳಗೆ ಪ್ರವೇಶಿಸಿದಂತೆ ತಡೆಯುವುದು ಅತಿ ದೊಡ್ಡ ಸವಾಲು.

ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಅನೈತಿಕ ಮಾರ್ಗಗಳ ಮೂಲಕ ಅಧಿಕಾರದಲ್ಲಿರುವಾಗ ಸಭಾಧ್ಯಕ್ಷರು ಚುನಾವಣಾ ಸುಧಾರಣೆಗಳ ಚರ್ಚೆಗಳಿಗೆ ಚಾಲನೆ ನೀಡಿರುವುದು ಸ್ವಾಗತಾರ್ಹವಾದರೂ ಅದು ನಿಜಕ್ಕೂ ಇಂದಿನ ವಾಸ್ತವಿಕ ಪರಿಸ್ಥಿತಿಯನ್ನು ಬದಲಾಯಿಸುವ ಕ್ರಮವಾಗಬಹುದೇ ಎನ್ನುವ ಪ್ರಶ್ನೆಗಳನ್ನು ಹುಟ್ಟು ಹಾಕಿದೆ. ಸಭಾಧ್ಯಕ್ಷರ ಮಾತೃಪಕ್ಷ ಮೂಲ ಸುಧಾರಣೆಗಳಿಗೆ ಮತ್ತು ಮಾತೃಸಂಸ್ಥೆ ಮನಸು ತೆರೆದೀತೆ? ಮುಖ್ಯವಾಗಿ ಸಭಾಧ್ಯಕ್ಷರು 'ಒಂದು ರಾಷ್ಟ್ರ, ಒಂದು ಚುನಾವಣೆ' ವ್ಯವಸ್ಥೆಯನ್ನು ಬಹುವಾಗಿ ಪ್ರತಿಪಾದಿಸುವುದು ಅವರಿಗೆ ಅದರತ್ತ ತುಂಬಾ ಒಲವು ಇರುವುದು ಕಾಣುತ್ತದೆ. ಅದನ್ನು ಅಳವಡಿಸಿಕೊಂಡಲ್ಲಿ ಸಂವಿಧಾನದ ಒಕ್ಕೂಟ ವ್ಯವಸ್ಥೆಯನ್ನು, ವೈವಿಧ್ಯ ಪ್ರಾದೇಶಿಕ ಸಾಮಾಜಿಕ–ಸಾಂಸ್ಕೃತಿಕ ವೈಶಿಷ್ಟತೆಗಳನ್ನು ಮೂಲೆಗುಂಪಾಗಿಸುವ ಹೆಜ್ಜೆಗಳಾಗುತ್ತವೆ ಮತ್ತು ಅದು ಕೇವಲ ಆಡಳಿತಾತ್ಮಕ ಕೇಂದ್ರೀಕರಣ ಮಾತ್ರವಲ್ಲದೆ ರಾಜಕೀಯ ಯಜಮಾನಿಕೆಯನ್ನು ರೂಢಿಸಿ ಸರ್ವಾಧಿಕಾರವನ್ನು ಸ್ಥಾಪಿಸಲು ಅವಕಾಶ ಕಲ್ಪಿಸುತ್ತವೆ.

ಅಧಿವೇಶನದಲ್ಲಿ ನಡೆಯುವ ಚರ್ಚೆಗಳು, ಕೈಗೊಳ್ಳುವ ತೀರ್ಮಾನಗಳು ಸಕಾರಾತ್ಮಕವಾಗಿರಲಿ .ಪ್ರಜಾಪ್ರಭುತ್ವವನ್ನು ಮತ್ತಷ್ಟು ಬಲಗೊಳಿಸುವ ದಿಕ್ಕಿನಲ್ಲಿ ಇರಲಿ. ಕೇವಲ ಚರ್ಚೆ ವಾಗಾಡಂಬರವಾದರೆ ಜಾರಿಗೆ ಬರುವುದು ಅನುಮಾನಾಸ್ಪದ. ಜನತೆಗೆ ಆರ್ಥಿಕ ಸಾಮಾಜಿಕ ಮತ್ತು ರಾಜಕೀಯ ಪರಮೋಚ್ಚ ಅಧಿಕಾರವನ್ನು ನೀಡುವ, ರಾಜಕೀಯ ಇಚ್ಛಾಶಕ್ತಿ, ಸಂವಿಧಾನಾತ್ಮಕ ಪ್ರಜಾಪ್ರಭುತ್ವವನ್ನು ಬಲಗೊಳಿಸುವ ಬದ್ಧತೆ ಇಲ್ಲದ ಇಂತಹ ಚರ್ಚೆಗಳು ನಿಷ್ಪ್ರಯೋಜಕ ಮತ್ತು ತೋರಿಕೆಯ ವ್ಯರ್ಥ ಕಸರತ್ತುಗಳೇ ಆಗಿವೆ.

ಅಖಿಲ ಭಾರತ ಮುಷ್ಕರದ ಅಂಗವಾಗಿ ಕರಾವಳಿ ಜಿಲ್ಲೆಗಳಲ್ಲಿ
ಕಾರ್ಮಿಕರ ಬೃಹತ್ ಪ್ರತಿಭಟನಾ ಪ್ರದರ್ಶನ

ವರದಿ: ವಾ.ಉ.

ದೇಶದಲ್ಲಿ ಕಾರ್ಮಿಕ ಸಂಘಟನೆಗಳೂ ನೌಕರ ಸಂಘಟನೆಗಳೂ ಒಟ್ಟುಗೂಡಿ ಒಕ್ಕೂಟ ಸರಕಾರದ ಕಾರ್ಮಿಕ ಹಾಗೂ ಆರ್ಥಿಕ ನೀತಿಗಳ ವಿರುದ್ಧವಾಗಿ ಮಾರ್ಚ್ 28, 29 ರಂದು 2 ದಿನಗಳ ಅಖಿಲ ಭಾರತ ಮುಷ್ಕರವನ್ನು ನಡೆಸಬೇಕೆಂದು ಕರೆಕೊಟ್ಟ ಮೇರೆಗೆ, ಕರಾವಳಿ ಜಿಲ್ಲೆಗಳ ಮುಖ್ಯ ಪಟ್ಟಣಗಳಲ್ಲಿ ಮುಷ್ಕರ ಯಶಸ್ವಿಯಾಗಿ ನಡೆದಿದೆ.

ಮಂಗಳೂರು:

ಬ್ಯಾಂಕ್ ನೌಕರರ ಸಂಘಟನೆಗಳು ಎಐಬಿಇಎ, ಬಿಇಎಫ್ಐ ಮತ್ತು ಅ.ಭಾ.ಬ್ಯಾಂಕ್ ಅಧಿಕಾರಿಗಳ ಸಂಘಗಳು ಮಾರ್ಚ್ 28 ರಂದು ಮಿನಿ ವಿಧಾನಸೌಧದ ಎದುರು ಪ್ರತಿಭಟನಾ ಪ್ರದರ್ಶನವನ್ನು ಏರ್ಪಡಿಸಿದಾಗ ಪ್ರಥಮ ಬಾರಿಗೆ ಬ್ಯಾಂಕ್ ನೌಕರರು 500ಕ್ಕೂ ಮೀರಿ ಭಾಗವಹಿಸಿದ್ದು ಕಂಡು ಬಂತು. ಪ್ರತಿಭಟನೆಯನ್ನು ಉದ್ದೇಶಿಸಿ ಮುಖಂಡರಾದ ವಿನ್ಸೆಂಟ್ ಡಿಸೋಜ, ಪುರುಷೋತ್ತಮ, ಕೆ.ರಾಘವ ಮಾತನಾಡಿದರು.

ಮಾರ್ಚ್ 29 ರಂದು ಕಾರ್ಮಿಕ ಸಂಘಟನೆಗಳು ನೌಕರ ಸಂಘಟನೆಗಳು ಜೆಸಿಟಿಯು ಹೆಸರಲ್ಲಿ ಒಟ್ಟಾಗಿ ಮಂಗಳೂರಿನ ಅಂಬೇಡ್ಕರ್ ವೃತ್ತದಿಂದ ಮಿನಿ ವಿಧಾನಸೌಧದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದವು. ಸಿಐಟಿಯು, ಎಐಟಿಯುಸಿ, ಎಐಸಿಸಿಟಿಯು, ಇಂಟಕ್‌ಗಳಿಗೆ ಸಂಯೋಜಿತ ಕಾರ್ಮಿಕ ಸಂಘಟನೆಗಳು, ಬ್ಯಾಂಕ್ ನೌಕರ ಸಂಘಟನೆಗಳು, ವಿಮಾ ನೌಕರ ಸಂಘಟನೆ, ಬಿಎಸ್‌ಎನ್‌ಎಲ್ ನೌಕರ ಸಂಘಟನೆ, ಪ್ರಾಂತ ರೈತ ಸಂಘ, ಡಿವೈಎಫ್ಐ ಪ್ರತಿಭಟನಾ ಪ್ರದರ್ಶನದಲ್ಲಿ ಭಾಗವಹಿಸಿದ್ದವು. ಸಿಐಟಿಯುವಿನ ಜೆ.ಬಾಲಕೃಷ್ಣ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ಎಐಟಿಯುಸಿಯ ಸೀತಾರಾಮ್ ಬೇರಿಂಜೆ, ಇಂಟಕ್‌ನ ಬೊಂಡಾಲ ಚಿತ್ತರಂಜನ್ ಶೆಟ್ಟಿ, ಎಐಸಿಸಿಟಿಯುನ ಮೋಹನ್, ಬ್ಯಾಂಕ್ ಅಧಿಕಾರಿಗಳ ಸಂಘದ ಕೆ.ರಾಘವ, ಬ್ಯಾಂಕ್ ನೌಕರ ಸಂಘಗಳ ವಿನ್ಸೆಂಟ್ ಡಿಸೋಜ, ಪುರುಷೋತ್ತಮ, ವಿಮಾ ನೌಕರ ಸಂಘದ ಆಲ್ವಿನ್ ಮಸ್ಕರೇನಸ್ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು. ಸಿಐಟಿಯು ಮುಖಂಡರಾದ ವಸಂತ ಆಚಾರಿ, ಪದ್ಮಾವತಿ ಶೆಟ್ಟಿ, ಎಐಟಿಯುಸಿ ಮುಖಂಡರಾದ ಎಚ್.ವಿ.ರಾವ್, ವಿ.ಕುಕ್ಯಾನ್, ರೈತ ಮುಖಂಡರಾದ ಕೆ.ಯಾದವ ಶೆಟ್ಟಿ, ಡಿವೈಎಫ್ಐನ ಮುನೀರ್ ಕಾಟಿಪಳ್ಳ ಪ್ರದರ್ಶನದಲ್ಲಿ ಭಾಗವಹಿಸಿದ್ದರು. ಸುಮಾರು 3000 ಮಂದಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಉಡುಪಿ:

ಉಡುಪಿಯಲ್ಲಿ ಕಾರ್ಮಿಕ ನೌಕರರ ಸಂಘಟನೆಗಳು ಜೆಸಿಟಿಯು ಹೆಸರಲ್ಲಿ ಒಟ್ಟಾಗಿ ಮಾರ್ಚ್ 28 ಮತ್ತು 29 ರಂದು ಪ್ರತಿಭಟನಾ ಪ್ರದರ್ಶನ ನಡೆಸಿದವು. 28 ರಂದು ಉಡುಪಿಯ ಸಿಂಡಿಕೇಟ್ ಬ್ಯಾಂಕಿನಿಂದ ಅಜ್ಜರಕಾಡು ಹುತಾತ್ಮ ಸ್ಮಾರಕದ ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದವು. ಜೆಸಿಟಿಯು ಸಂಚಾಲಕ ಸಿಐಟಿಯುನ ಕೆ.ಶಂಕರ್ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು. ವಿಮಾ ನೌಕರರ ಸಂಘಟನೆಯ ಪ್ರಭಾಕರ ಬಿ. ಕುಂದರ್, ವಿಶ್ವನಾಥ, ಎಐಟಿಯುಸಿಯ ಸಂಜೀವ ಶೇರಿಗಾರ್, ಬಿಇಎಫ್ಐನ ರವೀಂದ್ರ, ಎಐಬಿಇಎಯ ನಾಗೇಶ್ ನಾಯ್ಕ್, ಸಿಐಟಿಯುನ ವಿಶ್ವನಾಥ ರೈ, ಕವಿರಾಜ್ ಭಾಗವಹಿಸಿದ್ದರು.

ಮಾರ್ಚ್ 29 ರಂದು ಪ್ರತಿಭಟನಾ ಪ್ರದರ್ಶನ ಮಣಿಪಾಲದಲ್ಲಿ ನಡೆಯಿತು. ಮಣಿಪಾಲದ ಸಿಂಡಿಕೇಟ್ ಬ್ಯಾಂಕ್ ಸರ್ಕಲ್‌ನಿಂದ ಜಿಲ್ಲಾಧಿಕಾರಿ ಕಚೇರಿ ವರೆಗೆ ಮೆರವಣಿಗೆ ನಡೆಸಲಾಯಿತು. ಇದರಲ್ಲಿ ಬ್ಯಾಂಕ್ ವಿಮಾ ನೌಕರರು, ಕಟ್ಟಡ ಹಂಚು ಬೀಡಿ ಕೃಷಿಕೂಲಿ ಕಾರ್ಮಿಕರು ಅಂಗನವಾಡಿ ಬಿಸಿಯೂಟ ನೌಕರರು ಸೇರಿದಂತೆ ಸಾವಿರಾರು ಮಂದಿ ಭಾಗವಹಿಸಿದ್ದರು. ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯುನ ಸುರೇಶ್ ಕಲ್ಲಾಗರ, ಎಐಬಿಇಎಯ ವಿದ್ಯಾ ನಾಯಕ್, ವಿಮಾ ನೌಕರ ಸಂಘಟನೆಯ ಪ್ರಭಾಕರ ಬಿ.ಕುಂದರ್, ಅಂಗನವಾಡಿ ನೌಕರರ ಸಂಘದ ಸುಶೀಲಾ ನಾಡ, ಹಂಚು ಕಾರ್ಮಿಕ ಸಂಘದ ಎಚ್.ನರಸಿಂಹ, ಎಐಟಿಯುಸಿಯ ಶೇಖರ್, ಬ್ಯಾಂಕ್ ನೌಕರರ ಸಂಘದ ರವೀಂದ್ರ, ಅಧಿಕಾರಿ ಸಂಘದ ರವಿಶಂಕರ್ ಮಾತನಾಡಿದರು. ಪ್ರತಿಭಟನೆಯಲ್ಲಿ ಕಾರ್ಮಿಕ ಮುಖಂಡರಾದ ಎಐಟಿಯುಸಿಯ ಸಂಜೀವ ಸೇರಿಗಾರ್, ಸಿಐಟಿಯುನ ಬಾಲಕೃಷ್ಣ ಶೆಟ್ಟಿ, ವಿಶ್ವನಾಥ ರೈ, ಕವಿರಾಜ್, ಮಹಾಬಲ ವಡೇರಹೋಬಳಿ, ವೆಂಕಟೇಶ್ ಕೋಣಿ, ಶಶಿಧರ ಗೊಲ್ಲ ಉಪಸ್ಥಿತರಿದ್ದರು. ಜೆಸಿಟಿಯು ಉಡುಪಿ ಸಂಚಾಲಕ ಕೆ.ಶಂಕರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಉಡುಪಿಯಲ್ಲಿ ಮಾರ್ಚ್ 28 ರಂದು ಅಂಚೆ ನೌಕರರ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯ ಉಡುಪಿ ವಿಭಾಗದ ನೇತೃತ್ವದಲ್ಲಿ ಉಡುಪಿ ಪ್ರಧಾನ ಅಂಚೆ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು. ಉಡುಪಿ ವಿಭಾಗ ಅಧ್ಯಕ್ಷ ಪ್ರವೀಣ್ ಜತ್ತನ್ನ ಮಾತನಾಡಿದರು.

ಕುಂದಾಪುರ:

ಮಾರ್ಚ್ 28 ರಂದು ಕುಂದಾಪುರದಲ್ಲಿ ಸಿಐಟಿಯು ಸಂಯೋಜಿತ ಕಾರ್ಮಿಕ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನವನ್ನು ತಾಲೂಕು ಕಚೇರಿ ಎದುರು ನಡೆಸಲಾಯಿತು. ಸಿಐಟಿಯು ತಾಲೂಕು ಸಂಚಾಲಕ ಎಚ್. ನರಸಿಂಹ, ಉಡುಪಿ ಜಿಲ್ಲಾಧ್ಯಕ್ಷ ಕೆ. ಶಂಕರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುರೇಶ್ ಕಲ್ಲಾಗರ, ಮುಖಂಡರಾದ ಮಹಾಬಲ ವಡೇರಹೋಬಳಿ, ಜಯಶ್ರೀ, ಸಿಂಗಾರಿ, ಬಲ್ಕೀಸ್ ಭಾಗವಹಿಸಿದ್ದರು.

ಸಿಐಟಿಯು ನೇತೃತ್ವದಲ್ಲಿ ಮಾರ್ಚ್ 28 ರಂದು ಕುಂದಾಪುರ ತಾಲೂಕಿನ ಕೋಟೇಶ್ವರ, ಬಸ್ರೂರು, ಹೆಮ್ಮಾಡಿ, ತ್ರಾಸಿ, ಕೋಣಿ, ಗುಲ್ವಾಡಿ, ಹೊಸಂಗಡಿ, ನೇರಳಕಟ್ಟೆ, ವಂಡ್ಸೆ, ಇಡೂರು-ಕುಂಞಾಡಿ, ಆಲೂರು, ಹಕ್ಲಾಡಿ, ಕಟಬೆಲ್ತೂರು, ಕಂದಾವರ, ಹಜೊಂಬಾಡಿ, ಹಾಲಾಡಿ, ಅಂಪಾರು, ಸಿದ್ದಾಪುರ ಗ್ರಾಮ ಪಂಚಾಯತ್ ಕಚೇರಿಗಳ ಎದುರು ಆ ಗ್ರಾಮಗಳ ಕಾರ್ಮಿಕರು ಪ್ರತಿಭಟನೆ ನಡೆಸಿ ಪಿಡಿಓಗಳ ಮೂಲಕ ಕೇಂದ್ರ ಸರಕಾರಕ್ಕೆ ಮನವಿ ಸಲ್ಲಿಸಿದರು.

ಕುಂದಾಪುರ ರಿಕ್ಷಾ ಚಾಲಕರು ಮಾರ್ಚ್ 28 ರಂದು ನಗರದ ಮತ್ತು ಸುತ್ತಲಿನ ವಿವಿಧ ಬಸ್ಸು ನಿಲ್ದಾಣಗಳಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಿದರು.

ಕುಂದಾಪುರ ಹಂಚು ಕಾರ್ಮಿಕರು ಮಾರ್ಚ್ 28 ರಂದು ಅಲ್ಲಿನ ಗ್ರೀನ್‌ಲ್ಯಾಂಡ್, ಪ್ರಭಾಕಿರಣ, ಪ್ರಭಾಕರ ಟೈಲ್ಸ್, ಸೌಪರ್ಣಿಕಾ ಟೈಲ್ಸ್, ರಫುಸನ್ ಕಾರ್ಖಾನೆಗಳ ಎದುರು ಪ್ರತಿಭಟನೆ ನಡೆಸಿದರು.

ಬೈಂದೂರು:

ಮಾರ್ಚ್ 28 ರಂದು ಬೈಂದೂರಿನ ವಿವಿಧ ಕಾರ್ಮಿಕರು ಸಿಐಟಿಯು ನೇತೃತ್ವದಲ್ಲಿ ಬೈಂದೂರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಪ್ರತಿಭಟನಾ ಪ್ರದರ್ಶನ ನಡೆಸಿದರು. ಈ ಪ್ರದರ್ಶನದಲ್ಲಿ ಮುಖಂಡರಾದ ರೊನಾಲ್ಡ್ ರಾಜೇಶ್ ಕ್ವಾಡ್ರಸ್, ಉದಯ ಗಾಣಿಗ ಮೊಗೇರಿ, ಸಿಂಗಾರಿ ನಾವುಂದ, ರಾಜೀವ ಪಡುಕೋಣೆ ಮೊದಲಾದವರು ಭಾಗವಹಿಸಿದ್ದರು.

ಬೆಳ್ತಂಗಡಿ:

ಮಾರ್ಚ್ 28 ರಂದು ಸಿಐಟಿಯುಗೆ ಸಂಯೋಜಿತ ಕಾರ್ಮಿಕರು ಬೆಳ್ತಂಗಡಿಯ ಸಿಐಟಿಯು ಕಚೇರಿಯಿಂದ ಅಲ್ಲಿನ ಮಿನಿ ವಿಧಾನಸೌಧದ ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಪ್ರದರ್ಶನವನ್ನುದ್ದೇಶಿಸಿ ಸಿಐಟಿಯು ರಾಜ್ಯ ಉಪಾಧ್ಯಕ್ಷ ವಸಂತ ಆಚಾರಿ, ತಾಲೂಕು ಸಮಿತಿ ಅಧ್ಯಕ್ಷ ಶಿವಕುಮಾರ್, ಉಪಾಧ್ಯಕ್ಷ ಶೇಖರ ಲಾಯಿಲ ಮಾತನಾಡಿದರು. ಸಿಐಟಿಯು ಮುಖಂಡರಾದ ವಸಂತ ನಡ, ಸುಕನ್ಯಾ, ಲಲಿತ ಉಪಸ್ಥಿತರಿದ್ದರು.

ಸುಳ್ಯ:

ಸಿಐಟಿಯು ಸುಳ್ಯ ತಾಲೂಕು ಸಮಿತಿ ನೇತೃತ್ವದಲ್ಲಿ ಮಾರ್ಚ್ 28 ರಂದು ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು. ಕಾರ್ಮಿಕರು ಮುಖ್ಯ ರಸ್ತೆಯಲ್ಲಿ ಮೆರವಣಿಗೆ ನಡೆಸಿ ಸುಳ್ಯ ತಾಲೂಕು ಕಚೇರಿ ಮುಂಭಾಗದಲ್ಲಿ ಪ್ರದರ್ಶನ ನಡೆಸಿದರು. ಪ್ರದರ್ಶನವನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಮುನೀರ್ ಕಾಟಿಪಳ್ಳ, ಸಿಐಟಿಯು ತಾಲೂಕು ಸಮಿತಿ ಕಾರ್ಯದರ್ಶಿ ರಾಬರ್ಟ್ ಡಿಸೋಜ ಮಾತನಾಡಿದರು. ಕಟ್ಟಡ ಕಾರ್ಮಿಕರು, ಬಿಸಿಯೂಟ ಕಾರ್ಮಿಕರು, ಬ್ಯಾಂಕ್ ಸಿಬ್ಬಂದಿ, ಬೀಡಿ ಕಾರ್ಮಿಕರು ಆಶಾ, ಅಂಗನವಾಡಿ ಕಾರ್ಯಕರ್ತೆಯರು ಭಾಗವಹಿಸಿದ್ದರು.

ಮೂಡಬಿದ್ರಿ:

ಮೂಡಬಿದ್ರಿ ತಾಲೂಕು ಕಚೇರಿ ಎದುರು ಸಿಐಟಿಯು ನೇತೃತ್ವದಲ್ಲಿ ಮಾರ್ಚ್ 28 ರಂದು ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು. ಪ್ರದರ್ಶನವನ್ನುದ್ದೇಶಿಸಿ ಸಿಐಟಿಯು ದ.ಕ. ಜಿಲ್ಲಾ ಕಾರ್ಯದರ್ಶಿ ಸುನೀಲ್ ಕುಮಾರ್ ಬಜಾಲ್ ಮಾತನಾಡಿದರು. ಪ್ರತಿಭಟನೆಯಲ್ಲಿ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ಸಿಐಟಿಯುನ ರಮಣಿ, ರಾಧಾ, ಗಿರಿಜಾ, ಶಂಕರ ವಾಲ್ಪಾಡಿ, ಲಕ್ಷ್ಮಿ, ಕೃಷ್ಣಪ್ಪ ಉಪಸ್ಥಿತರಿದ್ದರು.

ಬಂಟ್ವಾಳ:

ಕಾರ್ಮಿಕ ಸಂಘಟನೆಗಳ ಒಕ್ಕೂಟ ಜೆಸಿಟಿಯು ನೇತೃತ್ವದಲ್ಲಿ ಬಿ.ಸಿ. ರೋಡಿನಲ್ಲಿರುವ ಬಂಟ್ವಾಳ ತಾಲೂಕು ಮಿನಿ ವಿಧಾನಸೌಧದ ಎದುರು ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಯಿತು. ಬೀಡಿ, ಬಿಸಿಯೂಟ, ಕಟ್ಟಡ ಕಾರ್ಮಿಕರು ಈ ಪ್ರದರ್ಶನದಲ್ಲಿ ಭಾಗವಹಿಸಿದ್ದರು. ಪ್ರದರ್ಶನವನ್ನುದ್ದೇಶಿಸಿ ಸಿಐಟಿಯುನ ರಾಮಣ್ಣ ವಿಟ್ಲ, ಜೆ. ಬಾಲಕೃಷ್ಣ ಶೆಟ್ಟಿ, ಎಐಟಿಯುಸಿಯ ಶೇಖರ ಬಂಟ್ವಾಳ, ಸುರೇಶ್ ಬಂಟ್ವಾಳ, ರಾಜ್ಯ ರೈತ ಸಂಘದ ಪ್ರೇಮನಾಥ ಶೆಟ್ಟಿ ಮಾತನಾಡಿದರು.







ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಸಿಪಿಐ(ಎಂ) ಪ್ರತಿಭಟನೆ



ಜನತೆಯ ಜೀವನಾವಶ್ಯಕ ವಸ್ತುಗಳ ಬೆಲೆಗಳು ತೀವ್ರವಾಗಿ ಏರುತ್ತಿದ್ದು, ಇದರಿಂದಾಗಿ ಜೀವನ ನಿರ್ವಹಣೆ ದುಸ್ತರವಾಗಿದೆ. ಸಬ್ ಕಾ ವಿಕಾಸ್ ಎಂಬ ಘೋಷಣೆ ಕೊಟ್ಟು ಜನರ ಜೀವನಾಗತ್ಯ ವಸ್ತುಗಳ ಬೆಲೆಯನ್ನು ಗಗನಕ್ಕೆ ಏರಿಸಲಾಗಿದೆ. ಸರ್ಕಾರದ ಬೆಲೆ ಏರಿಕೆ ನೀತಿಯನ್ನು ಖಂಡಿಸಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–ಸಿಪಿಐ(ಎಂ) ಜಯನಗರ ವಲಯ ಸಮಿತಿಯು ಪ್ರತಿಭಟನೆ ನಡೆಸಿದೆ.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಬಿ.ಎನ್. ಮಂಜುನಾಥ್ ಮಾತನಾಡಿ, ದಿನಂಪ್ರತಿ ಏರುತ್ತಿರುವ ಬೆಲೆಗಳಿಂದ ದುಡಿಯುವ ಜನ ತತ್ತರಿಸಿದ್ದಾರೆ. ಕಳೆದ ಒಂದು ವರ್ಷದಲ್ಲಿ ಅಡುಗೆ ಅನಿಲದ ಬೆಲೆ 350 ರೂಪಾಯಿಗಳಿಗಿಂತ ಹೆಚ್ಚು ಏರಿಸಲಾಗಿದೆ. ವಾಣಿಜ್ಯ ಉಪಯೋಗ ಸಿಲಿಂಡರ್ ದರ ರೂ.2,300/– ರಷ್ಟಾಗಿದೆ. ಸರಕಾರದ ಎಲ್ಲ ನೀತಿಗಳೂ ಉಳ್ಳವರ ಪರವಾಗಿದ್ದು ದುಡಿದು ತಿನ್ನುವ ಜನರ ಕಷ್ಟಕ್ಕೆ ಸರಕಾರ ಕಿವುಡಾಗಿದೆ ಎಂದರು.

ಕೋವಿಡ್ ಕಾಲದ ಸಂಕಷ್ಟಗಳಿಂದ ಇನ್ನೂ ಹೊರಬಾರದೆ ಪರದಾಡುತ್ತಿರುವ ಜನರ ಕಷ್ಟಕ್ಕೆ ಸ್ಪಂದಿಸುವ ಬದಲು, ಪಂಚರಾಜ್ಯಗಳ ಚುನಾವಣೆ ಮುಗಿದ ತಕ್ಷಣವೇ ಪೆಟ್ರೋಲ್, ಡೀಸೆಲ್ ಮತ್ತು ಗ್ಯಾಸ್ ಬೆಲೆಗಳನ್ನು ಏರಿಸಿದೆ. ಇದು ಜನವಿರೋಧಿ ಕೃತ್ಯವಾಗಿದ್ದು, ಸಿಪಿಐ(ಎಂ) ಪಕ್ಷ ವಿರೋಧಿಸುತ್ತದೆ ಎಂದು ಅವರು ಹೇಳಿದರು.

ಜನರ ಜೀವನ ಮತ್ತು ಜೀವನೋಪಾಯಗಳನ್ನು ರಕ್ಷಿಸುವುದು ಸರ್ಕಾರದ ಜವಾಬ್ದಾರಿ. ಅದನ್ನು ಮಾಡದ ನರೇಂದ್ರ ಮೋದಿ ಸರಕಾರದ ಧೋರಣೆಗಳ ವಿರುದ್ಧ ಪ್ರತಿಭಟನಾಕಾರರು ಖಂಡಿಸಿದರು.

ಮಂಗಳೂರು:

ಪೆಟ್ರೋಲ್ ಡೀಸೆಲ್ ಅಡುಗೆ ಅನಿಲ ಔಷಧಿ ಸೇರಿದಂತೆ ಜೀವನಾವಶ್ಯಕ ವಸ್ತುಗಳ ಬೆಲೆಯೇರಿಕೆಯನ್ನು ವಿರೋಧಿಸಿ ಸಿಪಿಐ(ಎಂ) ಕೇಂದ್ರ ಸಮಿತಿ ಕರೆಯ ಮೇರೆಗೆ ಇಂದು ನಗರದ ಕ್ಲಾಕ್ ಟವರ್ ಬಳಿಯಲ್ಲಿ ಪ್ರತಿಭಟನಾ ಪ್ರದರ್ಶನವನ್ನು ನಡಸಿತು. ಬೆಲೆಯೇರಿಕೆಗೆ ಕಾರಣವಾದ ಕೇಂದ್ರ ಸರಕಾರದ ಜನವಿರೋಧಿ ನೀತಿಗಳನ್ನು ಖಂಡಿಸಿ ಘೋಷಣೆಗಳನ್ನು ಕೂಗುವ ಮೂಲಕ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಕೆ.ಯಾದವ ಶೆಟ್ಟಿಯವರು ಮಾತನಾಡುತ್ತಾ, ಅಂತರಾಷ್ಟ್ರೀಯ ಮಟ್ಟದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳು ವಿಪರೀತವಾಗಿ ಕಡಿಮೆಯಾಗಿದ್ದರೂ ಪೆಟ್ರೋಲ್ ಡೀಸೆಲ್ ಬೆಲೆಗಳನ್ನು ಕಡಿಮೆ ಮಾಡುವ ಬದಲು ವಿಪರೀತವಾಗಿ ತೆರಿಗೆ ಹೆಚ್ಚಿಸುವ ಮೂಲಕ ಜನಸಾಮಾನ್ಯರಿಗೆ ಸಂಕಷ್ಟವನ್ನು ತಂದೊಡ್ಡಿದೆ. ಇದರಿಂದಾಗಿ ಜೀವನಾವಶ್ಯಕ ವಸ್ತುಗಳ ಬೆಲೆಗಳೂ ಕೂಡ ಕೈಗೆಟುಕದ ರೀತಿಯಲ್ಲಿ ಹೆಚ್ಚಾಗಿ ಬದುಕು ಸಾಗಿಸಲಾರದ ಪರಿಸ್ಥಿತಿ ಉದ್ಭವವಾಗಿದೆ. ಅಧಿಕಾರಕ್ಕೇರುವ ಮೊದಲು ಬೆಲೆಯೇರಿಕೆಯ ಬಗ್ಗೆ ಭಾರೀ ಬೊಗಳೆ ಬಿಟ್ಟ ಬಿಜೆಪಿಗರು ಇಂದು ಅಧಿಕಾರದಲ್ಲಿದ್ದು ಬೆಲೆಯೇರಿಕೆಯ ಬಗ್ಗೆ ತುಟಿಪಿಟಿಕ್ ಎನ್ನುತ್ತಿಲ್ಲ.ಬದಲಿಗೆ ಜನರ ಗಮನವನ್ನು ಬೇರೆಡೆಗೆ ತಿರುಗಿಸಲು ಜಾತಿ ಧರ್ಮ ದೇವರುಗಳ ಹೆಸರಿನಲ್ಲಿ ಭಾವನಾತ್ಮಕ ವಿಚಾರಗಳನ್ನು ಮುನ್ನೆಲೆಗೆ ತಂದು ನೀಚ ರಾಜಕೀಯ ಮಾಡುತ್ತಿದೆ ಎಂದರು.

ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ. ಬಾಲಕೃಷ್ಣ ಶೆಟ್ಟಿಯವರು ಮಾತನಾಡುತ್ತಾ, *ಉದ್ಯೋಗ ನಷ್ಟ, ನಿರುದ್ಯೋಗ ಸಮಸ್ಯೆಯಿಂದ ಕಂಗಾಲಾದ ದೇಶದ ಜನತೆ ವಿಪರೀತ ತೆರಿಗೆ, ಜಿ.ಎಸ್. ಟಿಯಂತಹ ಕ್ರಮಗಳಿಗೆ ಸೋತು ಸುಣ್ಣವಾಗಿದೆ. ಮತ್ತೆ ವಾಹನ ತಿದ್ದುಪಡಿ ಕಾಯಿದೆಯ ಹೆಸರಿನಲ್ಲಿ ರಸ್ತೆಯಲ್ಲಿ ನಿಂತು ಹಾಡುಹಗಲಲ್ಲೇ ದರೋಡೆ ಮಾಡುತ್ತಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ* ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸುನಿಲ್ ಕುಮಾರ್ ಬಜಾಲ್ ರವರು ಕೇಂದ್ರದ ನರೇಂದ್ರ ಮೋದಿ ಸರಕಾರ ಹೆಜ್ಜೆಹೆಜ್ಜೆಗೂ ತನ್ನ ಜನವಿರೋಧಿ ನೀತಿಗಳಿಂದ ಜನರ ಬದುಕಿನಲ್ಲಿ ಚೆಲ್ಲಾಟವಾಡುವ ವಿಚಾರಗಳನ್ನು ಎಳೆಎಳೆಯಾಗಿ ವಿವರಿಸಿದರು.

ಸಿಪಿಐ(ಎಂ) ದ.ಕ. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸದಾಶಿವದಾಸ್ ರವರು ಮಾತನಾಡಿ, ಕೊರೋನಾ ಸಂಕಷ್ಟದ ಕಾಲದಲ್ಲಿ ದೇಶದ ಜನತೆ ತೀರಾ ಸಂಕಷ್ಟದ ಲ್ಲಿದ್ದರೂ ದೇಶದ ಕಾರ್ಪೋರೇಟ್ ಕಂಪೆನಿಗಳು ವಿಪರೀತವಾಗಿ ಲಾಭ ಗಿಟ್ಟಿಸುವ ಹಿಂದೆ ಕೇಂದ್ರ ಸರಕಾರದ ಹುನ್ನಾರ ಅಡಗಿದೆ ಎಂದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ಜಿಲ್ಲಾ ನಾಯಕರಾದ ಪದ್ಮಾವತಿ ಶೆಟ್ಟಿ, ಜಯಂತ ನಾಯಕ್, ಯೋಗೀಶ್ ಜಪ್ಪಿನಮೊಗರು, ಜಯಂತಿ ಶೆಟ್ಟಿ, ಬಿ.ಕೆ. ಇಮ್ತಿಯಾಜ್, ಮನೋಜ್ ವಾಮಂಜೂರು, ಮಹಾಬಲ ದೆಪ್ಪಲಿಮಾರ್, ನೋಣಯ್ಯ ಗೌಡ, ಭಾರತಿ ಬೋಳಾರ, ಸಿಐಟಿಯು ನಾಯಕರಾದ ಸಂತೋಷ್ ಆರ್.ಎಸ್, ಮುಸ್ತಫಾ, ನಾಗೇಶ್ ಕೋಟ್ಯಾನ್ ಮುಂತಾದವರು ಉಪಸ್ಥಿತರಿದ್ದರು.



ಮಂಗಳೂರು ವಿ.ವಿ.ಗೆ ಕಲ್ಲಡ್ಕಗೆ ಆಹ್ವಾನ – ಎಸ್‌ಎಫ್‌ಐ ಪ್ರತಿಭಟನೆ

ಮಂಗಳೂರು ವಿ.ವಿ.ದ ಸ್ನಾತಕೋತ್ತರ ವಿದ್ಯಾರ್ಥಿ ಪರಿಷತ್ತಿನ ಉದ್ಘಾಟನಾ ಸಮಾರಂಭಕ್ಕೆ ಆರೆಸ್ಸೆಸ್ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ಟರನ್ನು ಉದ್ಘಾಟಕರಾಗಿ ಆಹ್ವಾನಿಸಿರುವುದನ್ನು ಎಸ್‌ಎಫ್‌ಐ ದ.ಕ.ಜಿಲ್ಲಾ ಸಮಿತಿ ಖಂಡಿಸಿ ಪ್ರತಿಭಟನಾ ಹೇಳಿಕೆ ಕೊಟ್ಟಿರುವುದಲ್ಲದೆ, ಮಾರ್ಚ್ 30 ಕಾರ್ಯಕ್ರಮವಿದ್ದ ಸಾಯಂಕಾಲ ಮಂಗಳೂರು ನಗರದ ವಿ.ವಿ.ಕಾಲೇಜಿನ ಎದುರು ಪ್ರತಿಭಟನಾ ಪ್ರದರ್ಶನವನ್ನು ನಡೆಸಿದೆ.

ಬೆಳಗ್ಗೆ ಮಂಗಳ ಗಂಗೋತ್ರಿಯ ವಿ.ವಿ.ಕ್ಯಾಂಪಸ್ಸಿನ ಸಮಾರಂಭದಲ್ಲಿ ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಭಾಗವಹಿಸಿದ್ದಲ್ಲದೆ, ಕಲ್ಲಡ್ಕ ಪ್ರಭಾಕರ ಭಟ್ಟರೂ ಕೂಡಾ ಮುಸ್ಲಿಂ ದ್ವೇಷ ಭಾಷಣವನ್ನೇ ಮಾಡಿದರು ಎಂದು ತಿಳಿದಿದೆ.

ಎಸ್‌ಎಫ್‌ಐ ಸಾಯಂಕಾಲ ನಡೆಸಿದ ಪ್ರತಿಭಟನೆಯನ್ನು ಮಂಗಳುರು ವಿ.ವಿಯನ್ನು ಹಾಗೂ ಕಲ್ಲಡ್ಕ ಪ್ರಭಾಕರ ಭಟ್ಟರನ್ನು ತೀವ್ರ ವಾಗ್ದಾಳಿಗೆ ಗುರಿಪಡಿಸಿ ಪ್ರತಿಭಟಿಸಿತು. ಪ್ರತಿಭಟನೆಯನ್ನುದ್ದೇಶಿಸಿ ಎಸ್‌ಎಫ್‌ಐ ಮಾಜಿ ಜಿಲ್ಲಾ ಮುಖಂಡರಾದ ಮನೋಜ್ ವಾಮಂಜೂರು ಮಾತನಾಡಿದರು. ಹಾಲಿ ಎಸ್‌ಎಫ್‌ಐ ಮುಖಂಡರಾದ ವಿನಿತ್ ದೇವಾಡಿಗ, ವಿನುಶ ರಮಣ, ಮಾಧುರಿ ಬೋಳಾರ್ ಕೂಡಾ ಖಂಡಿಸಿ ಮಾತನಾಡಿದರು.

ಪ್ರತಿಕ್ರಿಯೆ: ಶಾಲಾ ಪಠ್ಯ ಸಮಿತಿಯ ಅಧ್ಯಕ್ಷನಿಗೆ ಟಿಪ್ಪುವಿನ ಬಗೆಗೆ ಇರುವ ಅಜ್ಞಾನ

ಶಾಲಾ ಪಠ್ಯ ಸಮಿತಿಯ ಅಧ್ಯಕ್ಷನಾದ ರೋಹಿತ್ ಚಕ್ರತೀರ್ಥನಿಗೆ ಟಿಪ್ಪು ಸುಲ್ತಾನ್ ಕುರಿತ ಮಾಹಿತಿಗಳು.

ಕರ್ನಾಟದ ಯಾವುದಾದರೂ ಹಳ್ಳಿಯ ಒಂದು ಶಾಲಾ ಸಮಿತಿಯ ಸದಸ್ಯನಾಗಲು ಅರ್ಹತೆ ಇಲ್ಲದ ಈತನಿಗೆ ಈ ವರ್ಷ ಶಾಲಾ ಪಠ್ಯ ಸಮಿತಿಯ ಅಧ್ಯಕ್ಷನಾಗಿ ನೇಮಕ ಮಾಡಲಾಗಿತ್ತು. ಇತಿಹಾಸವನ್ನು ಓದಲಾರದ ಮತ್ತು ಗ್ರಹಿಸಲಾರದ ಈತ ಟಿಪ್ಪುಸುಲ್ತಾನ್ ಗೆ ಮೈಸೂರು ಹುಲಿ ಎಂಬ ಹೆಸರು ಹೇಗೆ ಬಂತು ದಾಖಲೆ ಕೊಡಿ ಎಂದು ಹೇಳುವುದರ ಮೂಲಕ ತನ್ನ ಅಜ್ಞಾನವನ್ನು ಪ್ರದರ್ಶಿಸಿದ್ದಾನೆ.

ಅತನಿಗೆ ಅಲ್ಲದಿದ್ದರೂ ಇತರರಿಗೆ ಈ ಮಾಹಿತಿ ಗೊತ್ತಿರಲಿ ಎಂದು ಇಲ್ಲಿ ಹಂಚಿಕೊಳ್ಳುತ್ತಿದ್ದೇನೆ.

1750 ರ ನವಂಬರ್ ತಿಂಗಳಿನಲ್ಲಿ ಹೈದರಾಲಿಯ ಪುತ್ರನಾಗಿ ಜನಿಸಿದ ಟಿಪ್ಪುವಿನ ಮೂಲ ಹೆಸರು ಪತೇ ಆಲಿ ಸಾಹೇಬ್ ಟಿಪ್ಪು ಎಂದು. ಒಬ್ಬ ಸಾಮಾನ್ಯ ಸಿಪಾಯಿಯಾಗಿದ್ದ ಹೈದರಾಲಿ ಮೈಸೂರು ದೊರೆಗಳ ಆಡಳಿತಗಾರನಾಗಿ ಇಡೀ ಸಾಮ್ರಾಜ್ಯವನ್ನು ವಿಸ್ತರಿಸುತ್ತಿದ್ದನು. ಎಂದೂ ಕೂಡ ಅವನು ಅರಮನೆಯ ಸಿಂಹಾಸನದ ಮೇಲೆ ಕೂರಲಿಲ್ಲ ಹೈದರಾಲಿಯ ಮರಣಾನಂತರ ಅಧಿಕಾರಕ್ಕೆ ಬಂದು ಟಿಪ್ಪು ಯುದ್ಧಗಳ ಮೂಲಕ ನಲವತ್ತುಸಾವಿರ ಚದುರ ಕಿ.ಮಿ. ವಿಸ್ತಾರವಿದ್ದ ಮೈಸೂರು ಸಾಮ್ರಾಜ್ಯವನ್ನು ಎಂಬತ್ತು ಸಾವಿರ ಚದುರ ಕಿ.ಮಿಗೆ ವಿಸ್ತರಿಸಿದ್ದೇವೆ. ನಾನು ಏಕೆ ಸಿಂಹಾಸನದ ಮೇಲೆ ಕೂರಬಾರದು ಮತ್ತು ದೊರೆಯಾಗಬಾರದು ಎಂದು ಪ್ರಶ್ನಿಸಿಕೊಂಡು ಅಧಿಕಾರದ ಸೂತ್ರವನ್ನು ತನ್ನ ಕೈಗೆ ತೆಗೆದುಕೊಂಡನು. ನಂತರ ಆತನ ಹೆಸರು ಟಿಪ್ಪು ಸುಲ್ತಾನ್ ಎಂದು ಬದಲಾಯಿತು.

ಅಪ್ರತಿಮ ಆಡಳಿತಗಾರನಾಗಿದ್ದ ಟಿಪ್ಪುಸುಲ್ತಾನ್ ಹೋರಾಟಕ್ಕೆ ಮತ್ತು ಶೌರ್ಯಕ್ಕೆ ಹೆಸರಾಗಿದ್ದನು. ಅವನಿಗೆ ಜನತೆ ನೀಡಿದ ಬಿರುದು ಮೈಸೂರು ಹುಲಿ ಎಂಬುದಾದರೆ, ಬ್ರಿಟೀಷ್ ಅಧಿಕಾರಿಗಳು ಅವನನ್ನು ಪೂರ್ವದ ಹುಲಿ ಎಂದು ಕರೆದಿದ್ದಾರೆ. ಹುಲಿಗಳ ಬಗ್ಗೆ ಅಪಾರ ಒಲವಿದ್ದ ಟಿಪ್ಪು ಸುಲ್ತಾನ್ ತನ್ನ ಅರಮನೆಯಲ್ಲಿ ಹಲವಾರು ಹುಲಿಗಳನ್ನು ಸಾಕಿಕೊಂಡಿದ್ದ. ಶತೃಗಳ ಕುರಿತಾಗಿ ಅತ್ಯಂತ ಅಮಾನುಷವಾಗಿ ನಡೆದುಕೊಳ್ಳುತ್ತಿದ್ದ ಟಿಪ್ಪು ತಪ್ಪು ಮಾಡಿದವರನ್ನು ಹುಲಿಯ ಬೋನಿಗೆ ಹಾಕಲು ಆದೇಶ ಮಾಡುತ್ತಿದ್ದ. ನಂದಿ ಬೆಟ್ಟದ ಮೇಲೆ ಟಿಪ್ಪು ಡ್ರಾಪ್ ಎಂಬ ಸ್ಥಳವಿದೆ. ಅಲ್ಲಿಂದ ಶತೃ ಸೈನಿಕರನ್ನು ಕೆಳಕ್ಕೆ ದೂಡುತ್ತಿದ್ದ. ಈ ಅಂಶಗಳನ್ನು ಬ್ರಿಟೀಷ್ ಅಧಿಕಾರಿಗಳು ದಾಖಲಿಸುತ್ತಾ, ಅವನ ಸಾಮ್ರಾಜ್ಯದ ಸಾಧನೆಗಳನ್ನು ಮುಕ್ತ ಕಂಠದಿಂದ ಹೊಗಳಿದ್ದಾರೆ. ಭಾರತದ ಇತಿಹಾಸದಲ್ಲಿ ಬ್ರಿಟೀಷರು ಟಿಪ್ಪುವಿನ ಬಗ್ಗೆ ಬರೆದ ಇತಿಹಾಸವನ್ನು ಮತ್ತೆ ಯಾರ ಬಗ್ಗೆಯೂ ಬರೆದಿಲ್ಲ.


1799 ಮೇ 4 ರಂದು ಟಿಪ್ಪು ಮರಣವಾದ ನಂತರ ಇಡೀ ಸಾಮ್ರಾಜ್ಯವನ್ನು ಅವರು ಸಮೀಕ್ಷೆ ಮಾಡಿದ್ದಾರೆ. ಭಾರತಕ್ಕೆ ಪಿರಂಗಿ ಮತ್ತು ಅತ್ಯಾಧುನಿಕ ಬಂದೂಕಗಳನ್ನು ಪ್ರೆಂಚರ ಮೂಲಕ ಪರಿಚಯಿಸಿದ ಕೀರ್ತಿ ಟಿಪ್ಪುವಿನದು. ಕರ್ನಾಟಕಕ್ಕೆ ರೇಷ್ಮೆ, ಬಗೆ ಬಗೆಯ ಹಣ್ಣುಗಿಡಗಳನ್ನು ಭತ್ತ ಮತ್ತು ಕಬ್ಬು ತಳಿಗಳನ್ನು ಪರಿಚಯಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ. 2015 ರಲ್ಲಿ ಲಂಡನ್ ನಗರದ ಬ್ರಿಟೀಷ್ ಲೈಬ್ರರಿಯಲ್ಲಿ ದೊರೆತ ಒಂದು ಕೃತಿಯಲ್ಲಿ ಏಪ್ರಿಲ್ ಮಾಸದ ಯುಗಾದಿ ಹಬ್ಬವನ್ನು ಹೊಸ ವರ್ಷ ಎಂದು ಘೋಷಿಸಿ ಹಿಂದೂ ಕ್ಯಾಲೆಂಡರ್ ಬರೆಸಿರುವ ಮಾಹಿತಿ ಲಭ್ಯವಾಗಿದೆ. (10–9 2021 ರ ಫ್ರಂಟ್ ಲೈನ್ ಮಾಸಪತ್ರಿಕೆಯಲ್ಲಿ ನ್ಯೂ ಸರ್ಚ್ ಆಫ್ ಟಿಪ್ಪುಸುಲ್ತಾನ್ ಎಂಬ ಲೇಖನದಲ್ಲಿ ಈ ಮಾಹಿತಿಯನ್ನು ನೋಡಬಹುದು)


ಕನ್ನಡದ ನೆಲದ ಮಕ್ಕಳಿಗೆ ನಮ್ಮ ನೆಲದ ರಾಣಿ ಅಬ್ಬಕ್ಕ, ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಕೋಟಿ ಚನ್ನಯ್ಯ ಸಹೋದದರು ಮತ್ತು ಗುರು ಗೋವಿಂದ ಭಟ್ಟ –ಶಿಶುನಾಳರು, ಶರಣರ ಇತಿಹಾಸಬೇಕೆ ಹೊರತು ದೂರದ ಕಾಶ್ಮೀರದ ಯಾರೋ ಬ್ರಾಹ್ಮಣ ದೊರೆ ಕಾರ್ಕೋಟ ನಂತೆ ಈಶಾನ್ಯ ಭಾರತದ ಅಹೋಂ ಎಂಬ ದೊರೆಗಳನ್ನು ಪಠ್ಯದಲ್ಲಿ ಪರಿಚಯಿಸಲಾಗುವುದು ಎಂದು ಹೇಳಿದ್ದಾನೆ. ಈತ ಸಧ್ಯಕ್ಕೆ ಕರ್ನಾಟಕದ ಕ್ರಿಮಿನಲ್ ಬುದ್ಧಿಯ ಅಪಾಯಕಾರಿ ವಿಷ ಜಂತು.

–ಜಗದೀಶ್ ಕೊಪ್ಪ

(ಸೋಷಿಯಲ್ ಮೀಡಿಯಾದಲ್ಲಿನ ಬರಹದಿಂದ ಆಯ್ದ ಭಾಗಗಳು)











ಹಿಂದುತ್ವ-ಕಾರ್ಪೋರೇಟ್ ಆಡಳಿತದ ವಿರುದ್ಧ ಹೋರಾಡಲು ಸಿಪಿಐ(ಎಂ) ಬಲವರ್ಧನೆ ಅಗತ್ಯ

ದೇಶಕ್ಕೇ ದಾರಿ ತೋರಲಿರುವ 23ನೇ ಮಹಾಧಿವೇಶನ

*** ಪ್ರಕಾಶ್ ಕಾರಟ್**

ಸಿಪಿಐ(ಎಂ) 23ನೇ ಮಹಾಧಿವೇಶನ (ಕಾಂಗ್ರೆಸ್) ಕೇರಳದ ಕಣ್ಣೂರಿನಲ್ಲಿ ಏಪ್ರಿಲ್ 6 ರಿಂದ 10ರ ವರೆಗೆ ನಡೆಯಲಿದೆ. ಮುಂದಿನ ಮೂರು ವರ್ಷ ಪಕ್ಷ ಸವೆಸಬೇಕಾದ ರಾಜಕೀಯ ಹಾದಿಯನ್ನು ಅದು ನಿರ್ಧರಿಸಲಿದೆ.

ಕೇಂದ್ರ ಸಮಿತಿ ಎರಡು ತಿಂಗಳಿಗೂ ಹಿಂದೆ ಬಿಡುಗಡೆ ಮಾಡಿದ್ದ ಕರಡು ರಾಜಕೀಯ ಗೊತ್ತುವಳಿಯನ್ನು ಪಕ್ಷದ ಎಲ್ಲ ಹಂತಗಳಲ್ಲಿ ಚರ್ಚಿಸಲಾಗಿದೆ. ಪಕ್ಷದ ಮಹಾಧಿವೇಶನದಲ್ಲಿ ಪ್ರತಿನಿಧಿಗಳು ಚರ್ಚಿಸಿದ ನಂತರ ಅದನ್ನು ಅಂತಿಮ ಅಂಗೀಕಾರಕ್ಕಾಗಿ ಕೈಗೆತ್ತಿಕೊಳ್ಳಲಾಗುತ್ತದೆ. ಪಕ್ಷದ ಆಂತರಿಕ ಪ್ರಜಾಪ್ರಭುತ್ವದ ಈ ಪ್ರಕ್ರಿಯೆಯೇ ಪಕ್ಷದ ರಾಜಕೀಯ-ವ್ಯೂಹಾತ್ಮಕ ಧೋರಣೆಯನ್ನು ರೂಪಿಸುವುದಾಗಿದ್ದು ಸಿಪಿಐ(ಎಂ)ಗೆ ಅತಿ ವಿಶಿಷ್ಟ ಪ್ರಕ್ರಿಯೆಯಾಗಿದೆ.

2018ರಲ್ಲಿ ಪಕ್ಷದ ಕಳೆದ ಕಾಂಗ್ರೆಸ್ ನಡೆದ ನಂತರದಲ್ಲಿ, ಬಲಪಂಥೀಯ ಶಕ್ತಿಗಳು ದೇಶದಲ್ಲಿ ತಮ್ಮ ಸ್ಥಾನವನ್ನು ಇನ್ನಷ್ಟು ಗಟ್ಟಿಗೊಳಿಸಕೊಂಡಿವೆ. 2019 ಮೇ ತಿಂಗಳಲ್ಲಿ ನಡೆದ ಲೋಕ ಸಭೆ ಚುನಾವಣೆಗಳಲ್ಲಿ ಮೋದಿ ಸರ್ಕಾರ ಇನ್ನೂ ದೊಡ್ಡ ಬಹುಮತದಿಂದ ಅಧಿಕಾರಕ್ಕೆ ಮರಳಿದ್ದರಲ್ಲಿ ಅದನ್ನು ಕಾಣಬಹುದಾಗಿದೆ. ಅದರ ಪರಿಣಾಮವಾಗಿ, ಹಿಂದೂತ್ವ ಅಜೆಂಡಾವನ್ನು ಜಾರಿ ಮಾಡಲು ಇನ್ನಷ್ಟು ಜೋಷಿನಿಂದ ಪ್ರಯತ್ನ ನಡೆದಿದೆ. ಅದರ ಜೊತೆಜೊತೆಯಲ್ಲೇ ಆರ್ಥಿಕ ನೀತಿಗಳಲ್ಲಿ ಕಾರ್ಪೋರೇಟ್-ಪರ, ನವ-ಉದಾರವಾದಿ ಕ್ರಮಗಳಿಗೆ ಒತ್ತು ನೀಡಲಾಗಿದೆ. ಅದರ ಫಲವಾಗಿ ಆಡಳಿತದ ಬೆಂಬಲ ದೊರೆತ ಬೆರಳೆಣಿಕೆಯಷ್ಟು ದೊಡ್ಡ ಬಂಡವಾಳಶಾಹಿಗಳ ಆಸ್ತಿಪಾಸ್ತಿ ಮತ್ತು ಲಾಭದಲ್ಲಿ ಅಗಾಧ ಬೆಳವಣಿಗೆ ಆಗಿದೆ. ಆದರೆ ಜನಸಾಮಾನ್ಯರ ವಿಚಾರದಲ್ಲಿ ಹೇಳುವುದಾದರೆ ನಿರುದ್ಯೋಗ, ಆದಾಯ ಕುಸಿತ, ಬೆಲೆಯೇರಿಕೆ ಮತ್ತು ಕೃಷಿ ಬಿಕ್ಕಟ್ಟು ಅದರಲ್ಲೂ ಮುಖ್ಯವಾಗಿ ಕೋವಿಡ್ ಸಾಂಕ್ರಾಮಿಕತೆಯ ನಂತರದಲ್ಲಿ ಬೀರಿದ ಪರಿಣಾಮಗಳು ಘನಘೋರವಾಗಿದೆ.

ಈ ಅವಧಿಯಲ್ಲಿ ದುಡಿಯುವ ಜನರ ವಿವಿಧ ವಿಭಾಗಗಳು ಬೃಹತ್ ಸಂಯುಕ್ತ ಹೋರಾಟಗಳನ್ನು ನಡೆಸಿವೆ. ಮೋದಿ ಸರ್ಕಾರದ ಜನ-ವಿರೋಧಿ ನೀತಿಗಳು ಹಾಗೂ ಅವುಗಳು ಜನರ ಮೇಲೆ ಹೊರಿಸಿದ ಹೊರೆಗಳ ವಿರುದ್ಧ ಹೋರಾಟ ನಡೆಸಲಾಗಿದೆ. ಮೂರು ಕೃಷಿ ಕಾನೂನುಗಳ ವಿರುದ್ಧ ಒಂದು ವರ್ಷ ಕಾಲ ನಡೆಸಿದ ದೀರ್ಘ ಹೋರಾಟ ಇದಕ್ಕೊಂದು ಪ್ರಮುಖ ಉದಾಹರಣೆಯಾಗಿದೆ.

ದುಡಿಯುವ ಜನರ ವಿರುದ್ಧವಾದ ಕಾರ್ಮಿಕ ಸಂಹಿತೆ, ಖಾಸಗೀಕರಣ ವಿರುದ್ಧ ಮತ್ತು ಸಾಕಷ್ಟು ಕನಿಷ್ಠ ವೇತನ ನೀಡಲು ಆಗ್ರಹಿಸಿ ಚಳವಳಿಗಳು ನಡೆದಿವೆ. 2018ರಿಂದ 2022ರ ನಡುವೆ ನಾಲ್ಕು ಸಾರ್ವತ್ರಿಕ ಮುಷ್ಕರಗಳು ನಡೆದಿವೆ. ಆ ಪೈಕಿ ಇದೇ ಮಾರ್ಚ್ 28 ಮತ್ತು 29ರಂದು ನಡೆದ ರಾಷ್ಟ್ರವ್ಯಾಪಿ ಮುಷ್ಕರವೂ ಸೇರಿದೆ. ಈ ಎಲ್ಲ ಮುಷ್ಕರಗಳಲ್ಲಿ ಎಲ್ಲ ವಲಯಗಳ ಕೋಟ್ಯಂತರ ಕಾರ್ಮಿಕರು ಮತ್ತು ನೌಕರರು ಭಾಗವಹಿಸಿದ್ದಾರೆ.

ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಸಾಂವಿಧಾನಿಕ ತತ್ವಗಳ ರಕ್ಷಣೆಗಾಗಿಯೂ ಅನೇಕ ಚಳವಳಿ ಮತ್ತು ಹೋರಾಟಗಳು ನಡೆದಿವೆ. ಪೌರತ್ವ ತಿದ್ದುಪಡಿ ಕಾನೂನು (ಸಿಎಎ)-ವಿರೋಧಿ ಚಳವಳಿ ಅವುಗಳಲ್ಲಿ ಪ್ರಮುಖವಾಗಿದ್ದು ದೇಶದಾದ್ಯಂತ ಸಾಮೂಹಿಕ ಪ್ರತಿಭಟನೆಗಳು ಮೇಲೆದ್ದು ಬಂದಿದ್ದವು.

ಈ ಹೋರಾಟಗಳು ಮತ್ತು ಚಳವಳಿಗಳು ಬೆಳೆಯಲು ಹಾಗೂ ತೀವ್ರಗೊಳ್ಳಲು ಸಿಪಿಐ(ಎಂ) ಮತ್ತು ಎಡ ಶಕ್ತಿಗಳು ಪ್ರಮುಖ ಪಾತ್ರ ವಹಿಸಿವೆ.

ಬಿಜೆಪಿ-ಆರ್‌ಎಸ್‌ಎಸ್ ಆಡಳಿತದ ವಿರುದ್ಧದ ಹೋರಾಟವನ್ನು ನವ-ಉದಾರವಾದಿ ನೀತಿಗಳು ಹಾಗೂ ಹಿಂದೂತ್ವ ಶಕ್ತಿಗಳ ವಿರುದ್ಧದ ರಾಜಕೀಯ-ಸೈದ್ಧಾಂತಿಕ ಸಂಘರ್ಷದೊಂದಿಗೆ ಜೋಡಿಸಬೇಕು ಎಂದು ಸಿಪಿಐ(ಎಂ) ಸದಾ ಹೇಳುತ್ತಾ ಬಂದಿದೆ. ಮುಸ್ಲಿಂ-ವಿರೋಧಿ ಥೀಮ್‌ನೊಂದಿಗಿನ ರಾಷ್ಟ್ರೀಯತೆಯ ಹಿಂದೂತ್ವ ಬ್ರಾಂಡ್ ದೇಶದ ಗಣನೀಯ ಪ್ರಮಾಣದ ಜನರ ಮೇಲೆ ಪ್ರಭಾವ ಬೀರಿದೆ ಎನ್ನುವುದನ್ನು ಇಲ್ಲಿ ಗಮನಿಸಬೇಕಿದೆ. ಅದರಲ್ಲೂ ವಿಶೇಷವಾಗಿ ದೇಶದ ಉತ್ತರ ಮತ್ತು ಪಶ್ಚಿಮ ಭಾಗದಲ್ಲಿ ಈ ಪ್ರವೃತ್ತಿ ಕಂಡು ಬಂದಿದೆ. ಹಿಂದೂತ್ವಕ್ಕೆ ರಾಜಕೀಯ-ಸೈದ್ಧಾಂತಿಕ ಕೌಂಟರ್ ಬೆಳೆಸಿ ಅದನ್ನು ಪರಿಣಾಮಕಾರಿಯಾಗಿ ಜನರ ಬಳಿಗೆ ಕೊಂಡೊಯ್ಯದ ಹೊರತು ಹಿಂದೂತ್ವ-ಕಾರ್ಪೋರೇಟ್ ಆಡಳಿತಕ್ಕೆ ಪರಿಣಾಮಕಾರಿಯಾದ ಸವಾಲನ್ನು ಹಾಕಲು ಸಾಧ್ಯವಿಲ್ಲ.

ಕಾಂಗ್ರೆಸ್ ಪಕ್ಷ ಮತ್ತು ಬಹುತೇಕ ಇತರ ಜಾತ್ಯತೀತ ಪ್ರತಿಪಕ್ಷಗಳು ಹಿಂದೂತ್ವದ ವಿರುದ್ಧ ಈ ಸಮರವನ್ನು ಕೈಗೆತ್ತಿಕೊಳ್ಳುವಲ್ಲಿ ವಿಫಲವಾಗಿರುವ ಈ ಸಮಯದಲ್ಲಿ ಅಂಥದ್ದೊಂದು ವೇದಿಕೆ ನಿರ್ಮಿಸಿ ಅದರ ಸುತ್ತ ಜಾತ್ಯತೀತ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿನೆರೆಯಿಸುವುದು ಸಿಪಿಐ(ಎಂ) ಮತ್ತು ಎಡ ಶಕ್ತಿಗಳ ಹೊಣೆಯಾಗಿದೆ.

ಸಿಪಿಐ(ಎಂ)ನ ಸ್ವತಂತ್ರ ಶಕ್ತಿಯನ್ನು ರಾಜಕೀಯವಾಗಿಯೂ ಸಂಘಟನಾತ್ಮಕವಾಗಿಯೂ ಹೇಗೆ ಬೆಳೆಸಬೇಕು ಎಂಬ ಕೇಂದ್ರೀಯ ಥೀಮ್ ಮೇಲೆ ಪಕ್ಷದ ಮಹಾಧಿವೇಶನ ಗಮನ ಕೇಂದ್ರೀಕರಿಸಲಿದೆ. ಪಕ್ಷ ಹಲವು ಹಿನ್ನಡೆಗಳನ್ನು ಅನುಭವಿಸಿದೆ ಹಾಗೂ ಅದರ ಪ್ರಭಾವ ಕುಗ್ಗಿದೆ. ಅದರಲೂ ವಿಶೇಷವಾಗಿ ಎರಡು ಪ್ರಮುಖ ಭದ್ರ ಕೋಟೆಗಳಾದ ಬಂಗಾಳ ಮತ್ತು ತ್ರಿಪುರಾದಲ್ಲಿ ಕಮ್ಯೂನಿಸ್ಟ್-ವಿರೋಧಿ ಶಕ್ತಿಗಳು ನಡೆಸಿದ ದಾಳಿಗಳ ನಂತರ ಹೀಗಾಗಿದೆ ಎನ್ನುವುದರ ಹಿನ್ನಲೆಯಲ್ಲಿ ಈ ಗಮನ ನೀಡಲಾಗುತ್ತಿದೆ. ಬಂಗಾಳದಲ್ಲಿ ಟಿಎಂಸಿ ಹಾಗೂ ತ್ರಿಪುರಾದಲ್ಲಿ ಬಿಜೆಪಿ ಇವೇ ಆ ಕಮ್ಯೂನಿಸ್ಟ್-ವಿರೋಧಿ ಶಕ್ತಿಗಳಾಗಿವೆ. ಕಳೆದ ನಾಲ್ಕು ವರ್ಷಗಳಲ್ಲಿ ಈ ಎರಡು ರಾಜ್ಯಗಳಲ್ಲಿ ಪಕ್ಷದ ಅನೇಕ ಕಾರ್ಯಕರ್ತರು ಹಾಗೂ ಬೆಂಬಲಿಗರ ಹತ್ಯೆಯಾಗಿದೆ. ಸಾವಿರಾರು ಜನರು ಅನೇಕ ರೀತಿಯ ದಾಳಿಗಳಿಗೆ ಈಡಾಗಿದ್ದಾರೆ. ಅಷ್ಟೆಲ್ಲ ಆದರೂ ಪಕ್ಷದ ಕಾರ್ಯಕರ್ತರು ಮತ್ತು ಕೇಡರ್‌ಗಳು ದಬ್ಬಾಳಿಕೆಗಳನ್ನು ದಿಟ್ಟತನದಿಂದ ಎದುರಿಸಿದ್ದಾರೆ. ಮತ್ತೆ ಒಂದಾಗಲು, ಜನರ ಬಳಿ ತೆರಳಲು ಹಾಗೂ ದುಡಿಯುವ ಜನಸಮುದಾಯದ ಚಳವಳಿ-ಹೋರಾಟಗಳನ್ನು ನಡೆಸಲು ಕೆಲಸ ಮಾಡುತ್ತಿದ್ದಾರೆ.


ಹಿಂದಿನ ಕಾಂಗ್ರೆಸ್ ಗೊತ್ತುಪಡಿಸಿದ ಸಂಘಟನಾತ್ಮಕ ಕಾರ್ಯವನ್ನು ಹಾಗೂ ಕಾರ್ಯಭಾರಗಳ ಅನುಷ್ಠಾನವನ್ನು ಪಕ್ಷದ ಮಹಾಧಿವೇಶನ ಪರಿಶೀಲಿಸಲಿದೆ. ಎರಡು ವರ್ಷ ಕಾಲ ಕೋವಿಡ್ ಸಾಂಕ್ರಾಮಿಕತೆ ಹಾಗೂ ಲಾಕ್‌ಡೌನ್‌ಗಳಿಂದಾಗಿ ಸಾಮಾನ್ಯ ಜನಜೀವನದ ಮೇಲೆ ಪರಿಣಾಮ ಉಂಟಾಗಿದೆ. ಬಡ ಜನರಿಗೆ ವರ್ಣಿಸಲಾಗದ ಸಂಕಟ ಎದುರಾಗಿದೆ. ಈ ಕಷ್ಟದ ಕಾಲದುದ್ದಕ್ಕೂ ಪಕ್ಷವು ಜನರ ನಡುವೆ ಇದ್ದು ವಲಸೆ ಕಾರ್ಮಿಕರಿಗೆ ಮಾತ್ರವಲ್ಲದೆ ನಗರ ಹಾಗೂ ಗ್ರಾಮೀಣ ಬಡವರಿಗೆ ನೆರವಾಗಲು ಕೆಲಸ ಮಾಡಿದೆ. ಕೋವಿಡ್ ಐಸೋಲೇಶನ್ ಕೇಂದ್ರಗಳ ಸ್ಥಾಪನೆ, ಪಡಿತರ ನೀಡಿಕೆ, ಆಹಾರ ಕಿಟ್ ವಿತರಣೆ, ಆಮ್ಲಜನಕ ಸಿಲಿಂಡರ್, ಮಾಸ್ಕ್ ಮತ್ತು ಸ್ಯಾನಿಟೈಸರ್ ನೀಡುವ ಕೆಲಸ ಮಾಡಿದೆ. ಪಕ್ಷದ ಸಂಘಟನಾ ಕ್ಷೇತ್ರದಲ್ಲಿ ಯುವ ಕೇಡರ್‌ಗಳನ್ನು ತರುವ ಮೂಲಕ ಪಕ್ಷದ ಸಮಿತಿಗಳನ್ನು ಪುನಶ್ಚೇತನಗೊಳಿಸಲು ಪ್ರಯತ್ನಿಸಲಾಗಿದೆ. ಮಹಿಳೆಯರ ಪ್ರಾತಿನಿಧ್ಯ ಹೆಚ್ಚಿಸಲು ಹಾಗೂ ವರ್ಗ ಮತ್ತು ಸಾಮಾಜಿಕ ಸಂಯೋಜನೆಯನ್ನು ಸುಧಾರಿಸಲೂ ಕ್ರಮ ಕೈಗೊಳ್ಳಲಾಗಿದೆ.


ಈ ಕಾಲಘಟ್ಟದಲ್ಲಿ ಕೇರಳದಲ್ಲಿ ಪಕ್ಷದ ಮಹಾಧಿವೇಶನ ನಡೆಯುತ್ತಿರುವುದಕ್ಕೆ ವಿಶೇಷ ಮಹತ್ವವಿದೆ. ಕಣ್ಣೂರು ಕಮ್ಯೂನಿಸ್ಟ್ ಚಳವಳಿಯ ಒಂದು ಕೋಟೆಯಾಗಿದೆ. ಜನರ ನಡುವೆ ಪಕ್ಷ ಆಳವಾಗಿ ಬೇರೂರಿದೆ. ಕಣ್ಣೂರು ಜಿಲ್ಲೆಯಲ್ಲಿ ಪಕ್ಷದ ಸದಸ್ಯತ್ವ 61,600ಕ್ಕೂ ಹೆಚ್ಚಾಗಿದೆ. ಇಡೀ ದೇಶದಲ್ಲೇ ಯಾವ ಜಿಲ್ಲೆಯಲ್ಲೂ ಇಷ್ಟೊಂದು ಸಂಖ್ಯೆಯಲ್ಲಿ ಸಿಪಿಐ(ಎಂ) ಸದಸ್ಯರಿಲ್ಲ. 2021 ಏಪ್ರಿಲ್‌ನಲ್ಲಿ ನಡೆದ ಅಸೆಂಬ್ಲಿ ಚುನಾವಣೆಯಲ್ಲಿ ಇನ್ನೂ ಹೆಚ್ಚಿನ ಬಹುಮತದೊಂದಿಗೆ ಮರಳಿದ ಎಡ-ಪ್ರಜಾಸತ್ತಾತ್ಮಕ ರಂಗ (ಎಲ್‌ಡಿಎಫ್) ಸರಕಾರ ಕೇರಳದಲ್ಲಿ ಆಡಳಿತದಲ್ಲಿದೆ. ಎಲ್‌ಡಿಎಫ್ ಸರ್ಕಾರದ ನೀತಿಗಳು ಮತ್ತು ಸಾಧನೆಗಳಿಗೆ ಜನರಿಂದ ಭಾರಿ ಅನುಮೋದನೆ ಸಿಕ್ಕಿದೆ. ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ರಂಗಗಳಲ್ಲಿನ ಈ ನೀತಿಗಳು ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅನುಸರಿಸುತ್ತಿರುವ ನೀತಿಗಳಿಗೆ ಪರ್ಯಾಯದ ಭಾಗವಾಗಿವೆ.

ಆದ್ದರಿಂದ, ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ರಾಷ್ಟ್ರೀಯ ಪರ್ಯಾಯವನ್ನು ಪ್ರಸ್ತುತ ಪಡಿಸುವಾಗ ಕೇರಳದಲ್ಲಿ ನಡೆಯುವ ಪಕ್ಷದ ಮಹಾಧಿವೇಶನವು ಎಲ್‌ಡಿಎಫ್ ಸರಕಾರದ ನೀತಿಗಳು ಮತ್ತು ಸಾಧನೆಯನ್ನು ಎತ್ತಿ ಹಿಡಿಯುವುದು ಸಹಜವೇ ಆಗಿದೆ.

ಸಿಪಿಐ(ಎಂ) ಮತ್ತು ಎಡ ಶಕ್ತಿಗಳು ಬಲಪಂಥೀಯ, ನವ-ಉದಾರವಾದಿ ಹಿಂದೂತ್ವ ಶಕ್ತಿಗಳ ವಿರುದ್ಧ ನಿರಂತರವಾಗಿ ಹೋರಾಡುವ ಶಕ್ತಿಗಳಾಗಿವೆ ಎನ್ನುವುದನ್ನು ಕಣ್ಣೂರು ಮಹಾಧಿವೇಶನ ತೋರಿಸಿ ಕೊಡಲಿದೆ. ಈ ಮಹಾಧಿವೇಶನವು ಎಲ್ಲ ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಮುನ್ನಡೆಗೆ ದಾರಿ ತೋರಿಸಲಿದೆ. ಪ್ರಜಾಪ್ರಭುತ್ವ, ಜಾತ್ಯತೀತತೆ, ಒಕ್ಕೂಟವಾದ (ಫೆಡರಲಿಸಂ) ಮತ್ತು ಎಡ-ಜನತಾಂತ್ರಿಕ ಪರ್ಯಾಯಕ್ಕಾಗಿ ಒಗ್ಗಟ್ಟಿನ ಹೋರಾಟ ನಡೆಸಲು ದೇಶಕ್ಕೆ ಮಾರ್ಗದರ್ಶನ ನೀಡಲಿದೆ.

ಅನು: ವಿಶ್ವ













ಭಾರತ ಉಳಿಸಿ-ಜನತೆಯನ್ನು ರಕ್ಷಿಸಿ 28-29 ಮಾರ್ಚ್ 2022 ದೇಶಾದ್ಯಂತ 20 ಕೋಟಿ ಕಾರ್ಮಿಕರ

ಮಹಾ ಮುಷ್ಕರ



ಮಹಾಂತೇಶ್ ಕೆ.

28–29 ಮಾರ್ಚ್ 2022 ರಂದು ಕಾರ್ಮಿಕರ ಎರಡು ದಿನಗಳ ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರ ಭಾರೀ ಯಶಸ್ಸು ಕಂಡಿದೆ ಎರಡು ದಿನಗಳ ಮುಷ್ಕರ ಯಶಸ್ವಿಗೊಳಿಸಲು ಕಾರಣರಾದ ಕಾರ್ಮಿಕರಿಗೆ ಹಾಗೂ ಅವರಿಗೆ ಬೆಂಬಲಿಸಿದ ರೈತರು, ವಿದ್ಯಾರ್ಥಿಗಳು, ಯುವಕರು, ಮಹಿಳೆಯರಿಗೆ ಕೇಂದ್ರ ಕಾರ್ಮಿಕ ಸಂಘಗಳ ಜಂಟಿ ಸಮಿತಿ(ಜೆಸಿಟಿಯು) ಅಭಿನಂದನೆ ಸಲ್ಲಿಸಿದೆ.

ಎರಡು ದಿನಗಳ ಈ ಮುಷ್ಕರವನ್ನು ದೇಶಾದ್ಯಂತ ಎಲ್ಲಾ ವಲಯಗಳ, ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರು ವಿವಿಧ ಸರ್ಕಾರಿ ಇಲಾಖೆಗಳು, ಸಾರ್ವಜನಿಕ ವಲಯ, ಖಾಸಗಿ ಸಂಸ್ಥೆಗಳು, ಸಣ್ಣ–ಮಧ್ಯಮ–ಸೂಕ್ಷ್ಮ ಉದ್ಯಮಗಳು, ಗ್ರಾಮೀಣ ಮತ್ತು ನಗರ ಕಾರ್ಮಿಕರು, ವಿವಿಧ ರೀತಿಯಲ್ಲಿ ಭಾಗವಹಿಸಿ, ಈ ಎರಡು ದಿನಗಳ ಸಾರ್ವತ್ರಿಕ ಮುಷ್ಕರದಲ್ಲಿ ಭವ್ಯವಾದ ಯಶಸ್ಸನ್ನು ಸಾಧಿಸಿದಲು ಕಾರಣರಾಗಿದ್ದಾರೆ ಹಲವು ಕಡೆ ಎಲ್ಲಾ ಎಸ್ಮಾ, ಬೆದರಿಕೆ ಮತ್ತು ನ್ಯಾಯಲಯದ ಮತ್ತು ಇತರೆ ಮತ್ತು ಎಲ್ಲಾ ರೀತಿಯ ಅಡೆತಡೆಗಳನ್ನು ಎದುರಿಸಿಯೂ ಸುಮಾರು 20 ಕೋಟಿ ಶ್ರಮಜೀವಿಗಳು ಈ ಮುಷ್ಕರದಲ್ಲಿ ಭಾಗಿಯಾಗಿಯಾಗಿದ್ದಾರೆ.

ಬ್ಯಾಂಕುಗಳು, ವಿಮಾ ಕಂಪನಿಗಳಲ್ಲಿನ ಕಾರ್ಮಿಕರು ಮತ್ತು ಉದ್ಯೋಗಿಗಳು ಭಾರತದಲ್ಲಿ ಎಲ್ಲಿಯೂ ತಮ್ಮ ಕೆಲಸದ ಸ್ಥಳಗಳಿಗೆ ಪ್ರವೇಶಿಸಲಿಲ್ಲ. ಕಲ್ಲಿದ್ದಲು, ವೈಜಾಗ್ ಸ್ಟೀಲ್, ತೈಲ ಮತ್ತು ಎಲ್ಪಿಜಿ ಸ್ಥಾವರಗಳು, ಪವರ್ಗ್ರಿಡ್, ತಾಮ್ರ, ಟೆಲಿಕಾಂ ವಲಯ, ಸಿಮೆಂಟ್ ವಲಯದ ಕಾರ್ಮಿಕರು ಮಾರ್ಚ್ 28 ರ ಬೆಳಿಗ್ಗೆಯಿಂದ ದೊಡ್ಡ ರೀತಿಯಲ್ಲಿ ಮುಷ್ಕರದಲ್ಲಿ ಭಾಗಿಯಾದರು. ಮಹಾರಾಷ್ಟ್ರ ಸೇರಿದಂತೆ ಎಲ್ಲಾ ರಾಜ್ಯಗಳಲ್ಲಿ ವಿದ್ಯುತ್ ನೌಕರರು ಮುಷ್ಕರ ನಡೆಸಿದರು, ಅಲ್ಲಿ ಸರ್ಕಾರವು ಎಸ್ಮಾವನ್ನು ಜಾರಿಗೊಳಿಸಿತು. ಟುಟಿಕೋರಿನ್ ಮತ್ತು ಪಾರಾದೀಪ್ನಲ್ಲಿ ಬಂದರು ಕಾರ್ಮಿಕರು ಸಹ ಕೆಲಸ ಮಾಡಿದರು. ಕೇರಳ ರಾಜ್ಯ ಒಕ್ಕೂಟಗಳು ಮಾರ್ಚ್ 27–28 ರ ಮಧ್ಯರಾತ್ರಿಯಿಂದಲೇ ಮುಷ್ಕರವನ್ನು ಪ್ರಾರಂಭಿಸಿದವು. ರೈಲ್ವೆ ಮತ್ತು ರಕ್ಷಣಾ ವಲಯದ ಉದ್ಯೋಗಿಗಳು ದೇಶಾದ್ಯಂತ ಒಂದು ಸಾವಿರಕ್ಕೂ ಹೆಚ್ಚು ಸ್ಥಳಗಳಲ್ಲಿ ತೀವ್ರ ಪ್ರದರ್ಶನಗಳನ್ನು ಆಯೋಜಿಸಿದ್ದಾರೆ ಎಂದು ವರದಿಯಾಗಿದೆ. ಅಂಗನವಾಡಿ, ಆಶಾ, ಮಧ್ಯಾಹ್ನದ ಊಟ ಮತ್ತು ಗೃಹ ಕಾರ್ಮಿಕರು, ಕಟ್ಟಡ ನಿರ್ಮಾಣ, ಬೀಡಿ ಮತ್ತು ಕೃಷಿ ಕಾರ್ಮಿಕರು, ಬೀದಿ ಬದಿ ವ್ಯಾಪಾರಿಗಳು ಮುಷ್ಕರದಲ್ಲಿ ಪಾಲ್ಗೊಂಡು ನೂರಾರು ಸ್ಥಳಗಳಲ್ಲಿ ಚಕ್ಕಾ ಜಾಮ್, ರೋಡ್ ರೋಕೋ, ರೈಲ್ ರೋಕ್ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು. ಹರಿಯಾಣದ ರಸ್ತೆ ಸಾರಿಗೆ ನೌಕರರು ಮಾರ್ಚ್ 28 ರಂದು ಮುಂಜಾನೆ ಡಿಪೋಗಳಲ್ಲಿ ಪಿಕೆಟಿಂಗ್ ಮಾಡುವ ಮೂಲಕ ತಮ್ಮ ಮುಷ್ಕರವನ್ನು ಪ್ರಾರಂಭಿಸಿದರು, ಎಸ್ಮಾವನ್ನು ಧಿಕ್ಕರಿಸಿ 29 ರಂದು ಮುಂದುವರೆಸಿದರು. ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು, ತೆಲಂಗಾಣ ಮತ್ತು ಹರಿಯಾಣದಲ್ಲಿ ಎರಡು ದಿನಗಳಲ್ಲೂ ಅನೇಕ ಎಂಎನ್ಸಿಗಳು ಸೇರಿದಂತೆ ಖಾಸಗಿ ವಲಯದ ಕೈಗಾರಿಕಾ ಘಟಕಗಳು ಬೃಹತ್ ಮುಷ್ಕರಕ್ಕೆ ಸಾಕ್ಷಿಯಾದವು. ಅಸ್ಸಾಂ, ಹಿಮಾಚಲ ಪ್ರದೇಶ, ಉತ್ತರಾಖಂಡ ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿ ಜಲವಿದ್ಯುತ್ ಯೋಜನೆಗಳು ಬೃಹತ್ ಮುಷ್ಕರಕ್ಕೆ ಸಾಕ್ಷಿಯಾಗಿದೆ.

ತಮಿಳುನಾಡು, ಕೇರಳ, ಪುದುಚೇರಿ, ಆಂಧ್ರಪ್ರದೇಶ, ತೆಲಂಗಾಣ, ತ್ರಿಪುರಾ, ಅಸ್ಸಾಂ, ಹರಿಯಾಣ, ಜಾರ್ಖಂಡ್ ಮತ್ತು ಇತರ ರಾಜ್ಯಗಳ ಹಲವು ಜಿಲ್ಲೆಗಳಲ್ಲಿ ಬಂದ್ ರೀತಿಯ ಪರಿಸ್ಥಿತಿ ಇದೆ. ಗೋವಾ, ಕರ್ನಾಟಕ, ಮಹಾರಾಷ್ಟ್ರ, ಛತ್ತೀಸ್ಗಢ, ಪಂಜಾಬ್, ಬಿಹಾರ, ರಾಜಸ್ಥಾನ, ಪಶ್ಚಿಮ ಬಂಗಾಳ, ಮೇಘಾಲಯ ಮತ್ತು ಅರುಣಾಚಲ ಪ್ರದೇಶ ರಾಜ್ಯಗಳ ಕೈಗಾರಿಕಾ ಪ್ರದೇಶಗಳಲ್ಲಿ ಮುಷ್ಕರದ ಬಿಸಿ ಗಣನೀಯವಾಗಿತ್ತು ಸಿಕ್ಕಿಂನಲ್ಲೂ ಭದ್ರತಾ ಸಿಬ್ಬಂದಿ ಮುಷ್ಕರ ನಡೆಸಿದ್ದಾರೆ. ದೆಹಲಿ, HP, ಗುಜರಾತ್, J&K, ಕೈಗಾರಿಕಾ ಪ್ರದೇಶಗಳಲ್ಲಿ ಮುಷ್ಕರವಾಗಿರುವ ವರದಿಯಾಗಿದೆ. ತಮಿಳುನಾಡಿನ 300 ಸ್ಥಳಗಳಲ್ಲಿ 50000 ಸರ್ಕಾರಿ ನೌಕರರು ಕೇಂದ್ರ ಸರ್ಕಾರಿ ಕಚೇರಿಗಳನ್ನು ಮುತ್ತಿಗೆ ಹಾಕಿದರು. ಅಂಚೆ ಇಲಾಖೆ, ಆದಾಯ ತೆರಿಗೆ ಲೆಕ್ಕ ಪರಿಶೋಧನೆ, ಜಿಎಸ್ಐ ಮತ್ತಿತರ ಕೇಂದ್ರ ಸರ್ಕಾರಿ ನೌಕರರು ಕೂಡ ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ. ಬೆಳಗ್ಗೆ ಮೀನುಗಾರರು ಕೂಡ ಸಮುದ್ರಕ್ಕೆ ಇಳಿಯಲಿಲ್ಲ.

ಕಾರ್ಮಿಕ ಬೇಡಿಕೆಗಳಿಗೆ ಬೆಂಬಲದೊಂದಿಗೆ ತಮ್ಮ ಆರು ಬೇಡಿಕೆಗಳಿಗೆ ಒತ್ತಾಯಿಸಿ ಮುಷ್ಕರದ ಪರವಾಗಿ, ಸಂಯುಕ್ತ ಕಿಸಾನ್ ಮೋರ್ಚಾದ ನಿರ್ಧಾರದಂತೆ ಗ್ರಾಮೀಣ ಪ್ರದೇಶದಲ್ಲಿ ರೈತರು ಸಜ್ಜುಗೊಂಡಿದ್ದಾರೆ. ರೈತರು ಮತ್ತು ಕೃಷಿ ಕಾರ್ಮಿಕರು ಮುಷ್ಕರ ನಿರತ ಕಾರ್ಮಿಕರೊಂದಿಗೆ ಅನೇಕ ರಾಷ್ಟ್ರೀಯ ಹೆದ್ದಾರಿಗಳು ಸೇರಿದಂತೆ ರಸ್ತೆ ತಡೆ ಮತ್ತು ರೈಲು ತಡೆಯನ್ನು ಸಕ್ರಿಯವಾಗಿ ಸಂಘಟಿಸುವಲ್ಲಿ ಭಾಗವಹಿಸಿದರು.

ಧರಣಿ ನಿರತರ ನೇತೃತ್ವ ವಹಿಸಿದ್ದವರು ಹಾಗೂ ಪ್ರತಿಭಟನಾಕಾರರು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ರಾಷ್ಟ್ರೀಯ ಸಂಪನ್ಮೂಲಗಳು ಮತ್ತು ಮೂಲಸೌಕರ್ಯ ಸೇರಿದಂತೆ ರಾಷ್ಟ್ರೀಯ ಆಸ್ತಿಗಳು ಎಲ್ಲವನ್ನೂ ಬಿಜೆಪಿ ನೇತೃತ್ವದ ಸರ್ಕಾರ ಮಾರಾಟಕ್ಕೆ ಇಟ್ಟಿದೆ ಎಂದು ಅವರು ಆರೋಪಿಸಿದ್ದಾರೆ. ಭಾರತೀಯ ಮತ್ತು ವಿದೇಶಿ ಬ್ರ್ಯಾಂಡ್ನ ಕಾರ್ಪೊರೇಟ್ಗಳ ಪ್ರಯೋಜನಗಳಿಗಾಗಿ ಕೇಂದ್ರದಲ್ಲಿ. ರಾಷ್ಟ್ರೀಯ ಸಂಪತ್ತನ್ನು ಸೃಷ್ಟಿಸುವ ಕಾರ್ಮಿಕ ವರ್ಗವನ್ನು ಕಾರ್ಮಿಕ ಕಾನೂನುಗಳಲ್ಲಿನ ಕಠೋರ ಬದಲಾವಣೆಗಳು, ಅವರ ಟ್ರೇಡ್ ಯೂನಿಯನ್ಗಳನ್ನು ದುರ್ಬಲಗೊಳಿಸುವುದು, ಮುಷ್ಕರ ಮಾಡುವ ಹಕ್ಕನ್ನು ಕಸಿದುಕೊಳ್ಳುವುದು, ಫ್ಯಾಕ್ಟರಿ ತಪಾಸಣೆಗಳನ್ನು ತೆಗೆದುಹಾಕುವುದು ಇತ್ಯಾದಿಗಳೊಂದಿಗೆ ರಕ್ಷಣೆಯಿಲ್ಲದಂತೆ ಮಾಡಲಾಗುತ್ತಿದೆ. ಕಾರ್ಮಿಕರ ಧ್ವನಿಯನ್ನು ಹತ್ತಿಕ್ಕಲಾಗುವುದು. ನಿರುದ್ಯೋಗ ಮಟ್ಟವು ಶೇಕಡಾ 12 ಕ್ಕೆ ತಲುಪಿದೆ ಮತ್ತು ಸರ್ಕಾರದ ಸ್ವಂತ ಅಂಕಿಅಂಶಗಳ ಪ್ರಕಾರ ನಿರುದ್ಯೋಗಿಗಳಲ್ಲಿ 25 ವರ್ಷಕ್ಕಿಂತ ಕಡಿಮೆ ವಯಸ್ಸಿನ ಯುವಕರು ಹೆಚ್ಚಿನವರು ಎಂದು ಅವರು ತಮ್ಮ ಆತಂಕವನ್ನು ವ್ಯಕ್ತಪಡಿಸಿದರು. ಐದು ರಾಜ್ಯಗಳ ಚುನಾವಣೆಯ ನಂತರ ಪೆಟ್ರೋಲ್, ಡೀಸೆಲ್ ಮತ್ತು ಗ್ಯಾಸ್ ಬೆಲೆಗಳು ಮತ್ತೊಮ್ಮೆ ಏರಿಕೆಯಾಗುತ್ತಿವೆ. ಎಲ್ಲಾ ಮೂಲಸೌಕರ್ಯ ಪಿಎಸ್ಯುಗಳನ್ನು ವಾಸ್ತವಿಕವಾಗಿ ಖಾಸಗಿ ಕಾರ್ಪೊರೇಟ್ಗಳಿಗೆ ಹಸ್ತಾಂತರಿಸಲು ರಾಷ್ಟ್ರೀಯ ಹಣಗಳಿಕೆಯ ಪೈಪ್ಲೈನ್ ಯೋಜನೆಯನ್ನು ತಳ್ಳಲಾಗುತ್ತಿದೆ. ಐದು ರಾಜ್ಯಗಳ ಚುನಾವಣೆಯ ಫಲಿತಾಂಶಗಳಿಂದ ಧೈರ್ಯಶಾಲಿಯಾಗಿ ಕೇಂದ್ರ ಸಾರ್ವಜನಿಕ ವಲಯದ ಉದ್ಯಮಗಳ ಭೂಮಿಯನ್ನು ಮಾರಾಟ ಮಾಡುವ ನೀತಿಯನ್ನು ಹೊರತರಲಾಗಿದೆ, ಬಡ್ಡಿದರ ಕಾರ್ಮಿಕರ ಭವಿಷ್ಯ ನಿಧಿಯನ್ನು ಶೇ 8.5 ರಿಂದ 8.1 ಕ್ಕೆ ಇಳಿಸಲಾಗಿದೆ, ಬ್ಯಾಂಕ್ಗಳ ಖಾಸಗೀಕರಣದ ಬಗ್ಗೆ ತೀವ್ರವಾಗಿ ಮಾತನಾಡಲಾಗುತ್ತಿದೆ, ಎಲ್ಐಸಿ ನಿಧಿಯ ಗಣನೀಯ ಭಾಗವನ್ನು ಮಾರಾಟ ಮಾಡಲಾಗುತ್ತಿದೆ, ಕೃಷಿ ಕಾನೂನುಗಳ ಕುರಿತು ಸುಪ್ರೀಂ ಕೋರ್ಟ್ ಸಮಿತಿಯ ವರದಿಯ ಮಾತುಕತೆ ಗಾಳಿಯಲ್ಲಿದೆ.

ದೆಹಲಿಯ ಒಕ್ಕೂಟಗಳು ಜಂತರ್ ಮಂತರ್ನಲ್ಲಿ ಮಾರ್ಚ್ 29, 2022 ರಂದು ಕೇಂದ್ರ ಟ್ರೇಡ್ ಯೂನಿಯನ್ಗಳ (ಅಖಿಗ) ಕೇಂದ್ರ ನಾಯಕರು ಇತರರನ್ನು ಉದ್ದೇಶಿಸಿ ಪ್ರತಿಭಟನಾ ಪ್ರದರ್ಶನವನ್ನು ಆಯೋಜಿಸಿದ್ದವು.

ಸಭೆಯನ್ನು ಉದ್ದೇಶಿಸಿ ಮಾತನಾಡಿದವರಲ್ಲಿ

ಪುಟ 10 ಕ್ಕೆ

ಬೇಡಿಕೆಗಳು

1. ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಅಗತ್ಯ ವಸ್ತುಗಳ ಬೆಲೆಗಳನ್ನು ನಿಯಂತ್ರಿಸಬೇಕು. ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಕೇಂದ್ರೀಯ ಅಬಕಾರಿ ತೆರಿಗೆಯನ್ನು ಕಡಿಮೆ ಮಾಡಬೇಕು.
2. ಆದಾಯ ತೆರಿಗೆ ವ್ಯಾಪ್ತಿಗೆ ಒಳಪಡದ ಪ್ರತಿ ಕುಟುಂಬಕ್ಕೂ ಮಾಸಿಕ ರೂ.7,500 ನೇರ ನಗದು ವರ್ಗಾವಣೆ ಮಾಡಬೇಕು ಹಾಗೂ ಪ್ರತಿ ವ್ಯಕ್ತಿಗೂ ತಲಾ 10 ಕೆಜಿ ಆಹಾರ ಧಾನ್ಯಗಳನ್ನು ನೀಡಬೇಕು.
3. ಕಾರ್ಪೊರೇಟ್ ಬಂಡವಾಳಪರ ರೂಪಿಸಿರುವ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ರದ್ದುಪಡಿಸಬೇಕು. ಕಾರ್ಮಿಕರ ಹಕ್ಕುಗಳನ್ನು ಉಳಿಸಬೇಕು.
4. ಕೇಂದ್ರ ಸರ್ಕಾರ ಕೃಷಿ ಕಾಯ್ದೆಗಳ ಜೊತೆಗೆ ವಿದ್ಯುತ್ (ತಿದ್ದುಪಡಿ) ಮಸೂದೆಯನ್ನು ವಾಪಸ್ಸು ಪಡೆಯಬೇಕು. ಶಾಸನಬದ್ಧ ಬೆಂಬಲ ಬೆಲೆ ಕಾಯ್ದೆರೂಪಿಸಬೇಕು. ರಾಜ್ಯ ಸರ್ಕಾರ ಸಹ ರೈತ ವಿರೋಧಿ, ಜನವಿರೋಧಿ ಕಾಯ್ದೆಗಳನ್ನು ವಾಪಸ್ಸು ಪಡೆಯಬೇಕು.
5. ದೇಶದ ಸಂಪತ್ತಾದ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ನಿಲ್ಲಿಸಬೇಕು.
6. ಅಸಂಘಟಿತ ಕಾರ್ಮಿಕರಿಗೆ ಸಾರ್ವತ್ರಿಕ ಸಾಮಾಜಿಕ ಭದ್ರತೆಒದಗಿಸಬೇಕು. ಕೋವಿಡ್ ಲಾಕ್ಡೌನ್ ಸಂಕಷ್ಟಕ್ಕೆ ಒಳಗಾದ ಅಸಂಘಟಿತರಿಗೆ ಪರಿಹಾರ ಒದಗಿಸಬೇಕು.
7. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ನಗರ ಪ್ರದೇಶಗಳಿಗೂ ವಿಸ್ತರಿಸಬೇಕು. ಕೆಲಸದ ದಿನಗಳನ್ನು 200 ದಿನಗಳಿಗೆ ಹೆಚ್ಚಿಸಬೇಕು. ಹೆಚ್ಚಿನ ಅನುದಾನ ಬಜೆಟ್ನಲ್ಲಿ ನೀಡಬೇಕು.
8. ಕೋವಿಡ್ಎದುರಿಸಲು ಕೆಲಸ ಮಾಡುತ್ತಿರುವ ಮುಂಚೂಣಿ ಕಾರ್ಮಿಕರಿಗೆ ಸೂಕ್ತ ರಕ್ಷಣೆ ಮತ್ತು ವಿಮಾ ಸೌಲಭ್ಯಒದಗಿಸಬೇಕು.
9. ಅಂಗನವಾಡಿ, ಆಶಾ, ಬಿಸಿಯೂಟ ಮತ್ತು ಇತರೆ ಸ್ಕೀಂ ನೌಕರರಿಗೆ ಶಾಸನಬದ್ಧ ಕನಿಷ್ಟ ವೇತನ ಮತ್ತು ಸಾಮಾಜಿಕ ಭದ್ರತೆ ಜಾರಿ ಮಾಡಬೇಕು.
10. ರಾಷ್ಟ್ರೀಯ ಆರ್ಥಿಕತೆಯನ್ನು ಪುನರುಜ್ಜೀವನಗೊಳಿಸಲು ಶ್ರೀಮಂತರಿಗೆ ಆಸ್ತಿ ತೆರಿಗೆ ಇತ್ಯಾದಿಗಳನ್ನು ವಿಧಿಸುವ ಮೂಲಕ ಕೃಷಿ, ಶಿಕ್ಷಣ, ಆರೋಗ್ಯ ಮತ್ತುಇತರೆ ನಿರ್ಣಾಯಕ ಸಾರ್ವಜನಿಕ ಸೇವೆಗಳಿಗೆ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸಬೇಕು.
11. ರಾಷ್ಟ್ರೀಯ ಪಿಂಚಣಿಯೋಜನೆ (ಎನ್.ಪಿ.ಎಸ್) ರದ್ದುಗೊಳಿಸಿ, ಹಳೆ ಪಿಂಚಣಿ ವ್ಯವಸ್ಥೆಯನ್ನು ಪುನರ್ ಸ್ಥಾಪಿಸಬೇಕು.
12. ರೂ.26 ಸಾವಿರ ಸಮಾನ ಕನಿಷ್ಟ ವೇತನಕ್ಕಾಗಿ, ಸಂಘ ಮಾನ್ಯತೆ, ಗುತ್ತಿಗೆ, ಖಾಯಂಯೇತರ ನೌಕರರ ಖಾಯಂಮಾತಿ





ಕರ್ನಾಟಕಲ್ಲಿ ವ್ಯಾಪಕ ಪ್ರಚಾರ... ಅಭೂತಪೂರ್ವ ಯಶಸ್ವಿ


ಎಪಿಎಂಸಿ ಹಳ್ಳಿಕೆರೆ


ಗದಗ

ಎರಡು ದಿನಗಳ ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಕರ್ನಾಟಕದಲ್ಲಿ ವ್ಯಾಪಕ ಸ್ಪಂದನೆ ದೊರೆತಿದೆ. ಆದರೆ ಹಿಬಾಬ್, ಹಲಾಲ್, ಜಟ್ಕಾ ಹಾಗೂ ಹಿಂದು ಮುಸ್ಲಿಂ ವಿಘಟನೆಗಾಗಿ ತಮ್ಮ ಇಡೀ ಸಮಯ ಹಾಗೂ ಪ್ರಚಾರವನ್ನು ಮೀಸಲಿಟ್ಟಿದ್ದ ಕರ್ನಾಟಕದ ಸುದ್ದಿ ಮಾಧ್ಯಮಗಳಿಗೆ ಮಾತ್ರ ಲಕ್ಷಾಂತರ ದುಡಿಯುವ ಜನರು ತಮ್ಮ ಬದುಕಿನ ಸಂಕಷ್ಟಗಳ ಪರಿಹಾರಕ್ಕಾಗಿ ರಾಜ್ಯದ ಜನರ ಅಭಿವೃದ್ಧಿ, ಬೆಲೆ ಏರಿಕೆ ಪ್ರಶ್ನೆಗಳನ್ನು ಎತ್ತಿಕೊಂಡು ನಡೆಸಿದ ಹೋರಾಟಗಳ ವಿಷಯದಲ್ಲಿ ಮಾತ್ರ ಕುರುಡಾಗಿದ್ದವು.


ಧಾರವಾಡ


ಹುಬ್ಬಳ್ಳಿ

ಮುಷ್ಕರವು ರಾಜ್ಯದ ಕೈಗಾರಿಕಾ ಪ್ರದೇಶಗಳಾದ ಬೆಂಗಳೂರಿನ ಪೀಣ್ಯ, ನೆಲಮಂಗಲ, ಬಿಡದಿ, ಕುಂಬಳಗೋಡು, ರಾಮನಗರ, ಜಿಗಣಿ, ಅತ್ತಿಬೆಲೆ, ಆನೇಕಲ್, ಬೊಮ್ಮನಹಳ್ಳಿ, ಮಹಾದೇವಪುರ, ವೈಟ್ ಪೀಲ್ಡ್, ಯಲಹಂಕ ಪ್ರದೇಶಗಳಲ್ಲಿ ಜೆಸಿಟಿಯು ಸಂಯೋಜಿತ ವಿವಿವಿಧ ಕೇಂದ್ರ ಕಾರ್ಮಿಕ ಸಂಘಗಳು ಹಾಗೂ ಸ್ವತಂತ್ರ ಸಂಘಗಳ ಖಾಸಗಿ ವಲಯದ ಯೂನಿಯನ್ ಗಳು ಮುಷ್ಕರ ನಡೆಸಿದವು ಮತ್ತು ಈ ಎಲ್ಲ ಪ್ರದೇಶಗಳಲ್ಲಿ ಬೃಹತ್ ರ್‍ಯಾಲಿ, ಮೆರವಣಿಗೆ ಹಾಗೂ ಪ್ರತಿಭಟನಾ ಪ್ರದರ್ಶನಗಳನ್ನು ಆಯೋಜಿಸಿದ್ದವು.

ಇದರ ಜತೆಯಲ್ಲಿ ಮಂಡ್ಯ, ಮೈಸೂರು, ಹಾಸನ, ಮಂಗಳೂರು, ಉಡುಪಿ, ಉತ್ತರ ಕನ್ನಡದ ದಾಂಡೇಲಿ, ಬೆಳಗಾವಿ, ನಿಪ್ಪಾಣಿ, ಹುಬ್ಬಳ್ಳಿ ಧಾರವಾಡ, ಕೊಪ್ಪಳ, ಕೋಲಾರದ ನರಸಾಪುರ ಹಾಗೂ ಮಾಲೂರು ಹಾಗೂ ಕೆಜಿಎಫ್ ಪ್ರದೇಶಗಳಲ್ಲಿ ಮುಷ್ಕರ ಯಶಸ್ವಿಯಾಗಿದೆ ಮತ್ತು ಸಾವಿರಾರು ಕಾರ್ಮಿಕರು ಪ್ರತಿಭಟನಾ ಪ್ರದರ್ಶನದಲ್ಲಿ ಭಾಗಿಯಾಗಿರುವ ವರದಿಗಳು ಬಂದಿವೆ. ರಾಜ್ಯದಲ್ಲಿ ಸಿಐಟಿಯು ಸೇರಿ ಇತರೆ ಕೇಂದ್ರ ಕಾರ್ಮಿಕ ಸಂಘಟನೆಗಳಿಗೆ ಸಂಯೋಜನೆಗೊಂಡಿರುವ ಅಂಗನವಾಡಿ, ಬಿಸಿಯೂಟ, ಆಶಾ ಮೊದಲಾದ ಸ್ಕೀಂ ನೌಕರರು,ಕನಿಷ್ಟ ವೇತನಕ್ಕಾಗಿ, ಕಾಯಂಮಾತಿ ಮತ್ತು ಸೇವಾ ಭದ್ರತೆಗಾಗಿ ಆಗ್ರಹಿಸಿ ರಾಜ್ಯದೆಲ್ಲಡೆ ಗ್ರಾಮ ಪಂಚಾಯ್ತಿ, ನಾಡಕಚೇರಿ ಹಾಗೂ ತಾಲೂಕು ಕಚೇರಿ ಮತ್ತು ಜಿಲ್ಲಾಧಿಕಾರಿಗಳ ಕಛೇರಿಗಳ ಎದುರು ನಡೆದ ಪ್ರತಿಭಟನಾ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ. ಸಿಐಟಿಯು ನೇತೃತ್ವದಲ್ಲಿ ರಾಜ್ಯದ ಸುಮಾರು 1500 ಕ್ಕೂ ಕೇಂದ್ರಗಳಲ್ಲಿ ಒಂದು ಲಕ್ಷಕ್ಕೂ ಅಧಿಕ ಅಂಗನವಾಡಿ, ಬಿಸಿಯೂಟ ನೌಕರರು ಕೆಲಸ ಸ್ಥಗಿತಗೊಳಿಸಿ ಮನವಿ ಸಲ್ಲಿಸಿದ್ದಾರೆ.

ರಾಜ್ಯದಲ್ಲಿ ಅಸಂಘಟಿತ ವಲಯಗಳ ಕಾರ್ಮಿಕರಾದ ಕಟ್ಟಡ ನಿರ್ಮಾಣ ಕಾರ್ಮಿಕರು, ಹಮಾಲಿ ಕಾರ್ಮಿಕರು, ಆಟೋ, ಟ್ಯಾಕ್ಸಿ ಚಾಲಕರು, ಬೀದಿಬದಿ ವ್ಯಾಪಾರಿಗಳು, ಮನಗೆಲಸ ಕಾರ್ಮಿಕರು,ವಲಸೆ ಕಾರ್ಮಿಕರು, ಸೇರಿದಂತೆ ಲಕ್ಷಾಂತರ ಕಾರ್ಮಿಕರು ಸಾಮಾಜಿಕ ಭದ್ರತೆ, ಪಿಂಚಣಿ, ಭವಿಷ್ಯನಿಧಿ ಮೊದಲಾದ ಬೇಡಿಕೆಗಳಿಗಾಗಿ ಆಗ್ರಹಿಸಿ ರಾಜ್ಯದ ಉದ್ದಗಲಕ್ಕೂ ಎರಡು ದಿನಗಳ ಕಾಲ ಕೂಲಿ, ವೇತನ ಕಳೆದುಕೊಂಡು ಎರಡು ಲಕ್ಷಕ್ಕೂ ಅಧಿಕ ಕಾರ್ಮಿಕರು ಮುಷ್ಕರ ನಡೆಸಿದ್ದಾರೆ. ರಾಜ್ಯದ ಮಂಗಳೂರು, ಹುಬ್ಬಳ್ಳಿ, ಗಂಗಾವತಿ, ಚಳ್ಳಕೆರೆ ಸೇರಿ ಸುಮಾರು 40 ಕ್ಕೂ ಅಧಿಕ ಎಪಿಎಂಸಿ, ಮಾರುಕಟ್ಟೆಗಳು ಹಾಗೂ 245 ವಿವಿಧ ಮಿಲ್‌ಗಳ ಕಾರ್ಮಿಕರು ಮುಷ್ಕರ ನಡೆಸಿದರು, ಇದರ ಜತೆಗೆ ಸಿಐಟಿಯು ಸಂಯೋಜಿತ ಐಟಿ ವಲಯದ ನೌಕರರು ಸಾವಿರಾರು ಸಂಖ್ಯೆಯಲ್ಲಿ ಮುಷ್ಕರಲ್ಲಿ ಭಾಗಿಗಳಾಗಿದ್ದಾರೆ.

ಇದರ ಜತೆಗೆ ವಿವಿಧ ಖಾಸಗಿ ಹಾಗೂ ಸರ್ಕಾರಿ ಇಲಾಖೆಗಳಲ್ಲಿನ ದುಡಿಯುತ್ತಿರುವ ಮುನ್ಸಿಪಲ್, ಗ್ರಾಮಪಂಚಾಯ್ತಿ ನೌಕರರು, ಗುತ್ತಿಗೆ, ಹೊರಗುತ್ತಿಗೆ ನೌಕರರು, ಹೆಂಚು, ಗೋಡಂಬಿ ಕಾರ್ಖಾನೆಗಳ ಕಾರ್ಮಿಕರು, ಕೊಡಗು, ಚಿಕ್ಕ ಮಗಳೂರು, ಹಾಸನ ಜಿಲ್ಲೆಗಳಲ್ಲಿನ ತೋಟ ಕಾರ್ಮಿಕರು, ಕರಾವಳಿ ಪ್ರದೇಶದ ಮೀನು ಕಾರ್ಮಿಕರು, ಹೀಗೆ ವಿವಿಧ ವಿಭಾಗಗಳ ಜನರು ತಮ್ಮ ಹಕ್ಕುಗಳ ಉಳಿವಿಗಾಗಿ

ಪುಟ 10 ಕ್ಕೆ


ಗಂಗಾವತಿ



ಬೊಮ್ಮಸಂದ್ರ


ಉಡುಪಿ





ಭಾರತ ಉಳಿಸಿ-ಜನತೆಯನ್ನು ರಕ್ಷಿಸಿ 28-29 ಮಾರ್ಚ್ 2022 ದೇಶಾದ್ಯಂತ 20 ಕೋಟಿ ಕಾರ್ಮಿಕರ........... ಪುಟ 8 ರಿಂದ

ಅಮರ್ಜೀತ್ ಕೌರ್ (ಎಐಟಿಯುಸಿ), ಹರ್ಭಜನ್ ಸಿಂಗ್ ಸಿಧು (ಎಚ್‌ಎಂಎಸ್), ತಪನ್ ಸೇನ್ (ಸಿಐಟಿಯು), ಆರ್ಕೆ ಶರ್ಮಾ (ಎಐಯುಟಿಯುಸಿ), ಜಿ. ದೇವರಾಜನ್ (ಟಿಯುಸಿಸಿ), ಲತಾ (ಎಸ್‌ಇಡಬ್ಲ್ಯುಎ), ರಾಜೀವ್ ದಿಮ್ರಿ (ಎಐಸಿಸಿಟಿಯು), ಮೋಹನ್ (LPF), ಸುರೇಶ್ ದಾಗರ್ (UTUC), ಸಂತೋಷ್ (MEC), ನರೇಂದರ್ (ICTU).ಮೊದಲಾದವರಿದ್ದರು.

ರಾಜ್ಯಸಭಾ ಸದಸ್ಯ ಬಿನೋಯ್ ವಿಶ್ವಂ ಮತ್ತು ಎಸ್ಕೆಎಂ ಪರವಾಗಿ ಹನ್ನಾನ್ ಮೊಲ್ಲಾ ಕೂಡ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ರಾಷ್ಟ್ರವನ್ನು ವಿಫಲಗೊಳಿಸಿದ್ದಲ್ಲದೆ, ಭಾರತದ ಮೂಲ ಮೌಲ್ಯಗಳಿಗೆ ಹಾನಿಯುಂಟುಮಾಡುವ ಕೆಟ್ಟ ವಿಭಜಕ ಕಾರ್ಯಸೂಚಿಯನ್ನು ಸಡಿಲಿಸಲು ಬಿಡುತ್ತಿರುವ ಕೇಂದ್ರದ ದಬ್ಬಾಳಿಕೆಯ ಆಡಳಿತದ ವಿರುದ್ಧ ತೀವ್ರ ಹೋರಾಟವನ್ನು ಮಾಡಲು ಕಾರ್ಮಿಕ-ರೈತರ ಐಕ್ಯತೆಯನ್ನು ಬಲಪಡಿಸುವುದು ಸಮಯದ ಬೇಡಿಕೆಯಾಗಿದೆ ಎಂದು ಸಂಘಟಕರು ಗುರುತಿಸಿದ್ದಾರೆ. ವೈವಿಧ್ಯಮಯ ಧಾರ್ಮಿಕ ನಂಬಿಕೆಗಳು, ಸಂಸ್ಕೃತಿಗಳು, ಭಾಷೆಗಳನ್ನು ಹೊಂದಿರುವ ಭಾರತೀಯ ಜನರ ಸಂವಿಧಾನ ಮತ್ತು ಸಾಮರಸ್ಯದ ಜೀವನ ಇದನ್ನು ಐಕ್ಯತೆ ಯೊಂದಿಗೆ ಗಟ್ಟಿ ಗೊಳಿಸಲು ಈ ಹೋರಾಟ ಒಂದು ಸ್ಫೂರ್ತಿ ನೀಡಿದೆ.

ಯಾತಕ್ಕಾಗಿ ನಡೆಯಿತು ಈ ಮಹಾ ಮುಷ್ಕರ?

ಕೋವಿಡ್-19 ಸಾಂಕ್ರಾಮಿಕ ರೋಗದ ಮೊದಲೆರಡು ಅಲೆಗಳ ಸಂದರ್ಭದಲ್ಲಿ ಕೇಂದ್ರ-ರಾಜ್ಯ ಸರ್ಕಾರಗಳು ವಿಧಿಸಿದ ಲಾಕ್ಡೌನ್‌ಗಳು ದುಡಿಯುವ ಜನರ ಬದುಕನ್ನು ಸಂಕಷ್ಟಕ್ಕೆ ಸಿಲುಕಿಸಿದ್ದವು. ಎರಡು ಅಲೆಗಳ ಸಂದರ್ಭದಲ್ಲಿ ಕೇಂದ್ರ-ರಾಜ್ಯ ಸರ್ಕಾರಗಳು ನೀಡಿದ ಪರಿಹಾರ ಪ್ಯಾಕೇಜ್‌ಗಳು ಬಡಜನರ ಬದುಕಿಗೆ ಆಸರೆಯಾಗಲಿಲ್ಲ. ಬದಲಾಗಿ ಕಾರ್ಪೋರೇಟ್ ಬಂಡವಾಳಗಾರರ, ಶ್ರೀಮಂತರ ಜೋಬು ತುಂಬಿಸಿದವು.

ಕೇಂದ್ರದ ಮೋದಿ ಸರ್ಕಾರ 'ನವ ಉದಾರೀಕರಣ ನೀತಿ'ಗಳನ್ನು ಅಕ್ರಮಣಕಾರಿಯಾಗಿ ಜಾರಿ ಮಾಡುತ್ತಿದ್ದು, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಐಸಿಡಿಎಸ್ ಯೋಜನೆ, ಸಾರ್ವಜನಿಕ ಆರೋಗ್ಯ, ಶಿಕ್ಷಣ, ಮತ್ತಿತರ ಕ್ಷೇತ್ರಗಳಿಗೆ ನಿರಂತರ ಬಜೆಟ್‌ನಲ್ಲಿ ಹಣಕಾಸಿನ ಕಡಿತ ಮಾಡಲಾಗುತ್ತಿದೆ. ಇದರಿಂದ ನಿರುದ್ಯೋಗ, ಬಡತನ, ಹಸಿವಿನ ಪ್ರಮಾಣ ನಿರಂತರ ಹೆಚ್ಚಾಗುತ್ತಿದೆ. ಕೇಂದ್ರ ಸರ್ಕಾರದ ಜನ ವಿರೋಧಿ ತೆರಿಗೆ ನೀತಿ, ದಿನ ಬಳಕೆಯ ಸರಕು ಮತ್ತು ಸೇವೆಗಳ ಮೇಲಿನ ಬಾರೀ ಪ್ರಮಾಣದ ಪರೋಕ್ಷ ಜಿ.ಎಸ್.ಟಿ. ಯಂತಹ ಕ್ರಮಗಳಿಂದಾಗಿ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಅಗತ್ಯ ವಸ್ತುಗಳ ಬೆಲೆಗಳು ನಿರಂತರ ಹೆಚ್ಚಳಗೊಳ್ಳುತ್ತಲೇ ಇವೆ. ಇವು ಮತ್ತು ಕೋವಿಡ್ ಸಂಕಷ್ಟಗಳು ದೇಶದಲ್ಲಿ ಅರ್ಧದಷ್ಟು ಜನರನ್ನು ಬಡತನ, ಹಸಿವಿಗೆ ತಳ್ಳಲ್ಪಟ್ಟಿತು ಮಾತ್ರವಲ್ಲ, ಭಾರತವನ್ನು ಜಾಗತಿಕ ಹಸಿವು ಸೂಚ್ಯಾಂಕದಲ್ಲಿ 101ನೇ ಸ್ಥಾನಕ್ಕೆ ಇಳಿಸಿದೆ.

ಕೇಂದ್ರ ಸರ್ಕಾರ ಕೋವಿಡ್ ಸಂದರ್ಭವನ್ನೇ ಉಪಯೋಗಿಸಿಕೊಂಡು ಸಂಸದೀಯ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಗಾಳಿಗೆ ತೂರಿ ಯಾವುದೇ ಚರ್ಚೆಯಿಲ್ಲದೆ ಪಾರ್ಲಿಮೆಂಟ್‌ನಲ್ಲಿ ರೈತ ವಿರೋಧಿಯಾದ ಮೂರು ಕೃಷಿ ಕಾಯ್ದೆಗಳನ್ನು ಹಾಗೂ ಅಸ್ತಿತ್ವದಲ್ಲಿದ್ದ 29 ಕಾರ್ಮಿಕ ಕಾನೂನುಗಳನ್ನು ರದ್ದುಗೊಳಿಸುವ ಮೂಲಕ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಕಾರ್ಮಿಕ ವಿರೋಧಿಯಾಗಿ ರೂಪಿಸಿತು. ಅಲ್ಲದೆ ಕಾರ್ಮಿಕ ಸಂಹಿತೆಗಳಿಗೆ ನಿಯಮಗಳನ್ನು ರೂಪಿಸಿ ರಾಜ್ಯ ಸರ್ಕಾರಗಳ ಮೂಲಕ ಜಾರಿ ಮಾಡಲು ಮುಂದಾಗಿದೆ. ಅದೇ ರೀತಿ ರಾಜ್ಯದ ಬಿಜೆಪಿ ಸರ್ಕಾರ ಕೂಡ ರೈತ-ಕಾರ್ಮಿಕ-ಜನ ವಿರೋಧಿ ಕಾಯ್ದೆಗಳನ್ನು ರೂಪಿಸಿದೆ.

ದೇಶದಲ್ಲಿ ರೈತ ಸಂಘಟನೆಗಳು ಮತ್ತು ಅವುಗಳ ಜಂಟಿ ವೇದಿಕೆ ಕಾರ್ಮಿಕ, ಮತ್ತಿತರ ಸಂಘಟನೆಗಳ ಬೆಂಬಲದೊಂದಿಗೆ 'ದೆಹಲಿಯ ಗಡಿಗಳಲ್ಲಿ ನಡೆಸಿದ ಒಂದು ವರ್ಷ ಸುದೀರ್ಘ ಐತಿಹಾಸಿಕ ಹೋರಾಟ ಮತ್ತುದೇಶಾದ್ಯಂತಏಕಕಾಲದಲ್ಲಿ ನಡೆದಜಂಟಿ ಪ್ರತಿಭಟನೆಗಳಿಂದಾಗಿ ಕೇಂದ್ರದ ಮೋದಿ ಸರ್ಕಾರ ರೈತರ ಕ್ಷಮೆಯಾಚಿಸಿ ಪಾರ್ಲಿಮೆಂಟಿನಲ್ಲಿ ಮೂರು ಕೃಷಿ ಕಾಯ್ದೆಗಳನ್ನು ವಾಪಸ್ಸು ಪಡೆದಿದೆ. ಅದೇ ರೀತಿ ಕಾರ್ಮಿಕ ವಿರೋಧಿ ನಾಲ್ಕು ಕಾರ್ಮಿಕ ಸಂಹಿತೆಗಳನ್ನು ರದ್ದತಿ ಮಾಡಬೇಕೆಂದು ಸಿಐಟಿಯು ರಾಷ್ಟ್ರೀಯ ಕಾರ್ಯದರ್ಶಿ ಹಾಗೂ ರಾಜ್ಯಸಭಾ ಸದಸ್ಯರಾದ ಕಾಂ. ಎಳಮಾರಮ್ ಕರೀಮ್‌ರವರು ರಾಜ್ಯಸಭೆಯಲ್ಲಿ ಖಾಸಗಿ ಮಸೂದೆಯನ್ನು ಮಂಡಿಸಿದ್ದಾರೆ. ಇದು ಮುಷ್ಕರದ ಸಂದರ್ಭದಲ್ಲಿ ಪಾರ್ಲಿಮೆಂಟ್‌ನಲ್ಲಿ ಅವರು ಕಾರ್ಮಿಕರ ಪರಿಸ್ಥಿತಿ ಬಗ್ಗೆ ಗಮನ ಸೆಳೆದರು.

ಅಲ್ಲದೆ ದೇಶದ ಸಂಪತ್ತಾಗಿರುವ ಸಾರ್ವಜನಿಕ ಉದ್ದಿಮೆಗಳಾದ ರೈಲ್ವೆ, ವಿಮಾನಯಾನ, ವಿದ್ಯುತ್, ಕಲ್ಲಿದ್ದಲು, ಬ್ಯಾಂಕ್, ವಿಮಾಕ್ಷೇತ್ರ, ದೂರ ಸಂಪರ್ಕ, ಮೂಲಸೌಕರ್ಯ, ಹೆದ್ದಾರಿಗಳು, ರಕ್ಷಣಾ ಸಾಮಾಗ್ರಿ ಉತ್ಪಾದನಾ ಕೈಗಾರಿಕೆ ಹಾಗೂ ಮತ್ತಿತರ ಸಾರ್ವಜನಿಕ ಉದ್ದಿಮೆಗಳನ್ನು ಹಂತ ಹಂತವಾಗಿ ಖಾಸಗೀಕರಣ ಮಾಡಲಾಗುತ್ತಿದೆ. ಇದಕ್ಕಾಗಿ ಕೇಂದ್ರ ಸರ್ಕಾರ ರಾಷ್ಟ್ರೀಯ ಸಂಪತ್ತು ನಗದೀಕರಣ ಯೋಜನೆಯನ್ನು ರೂಪಿಸಿದೆ. ಇಷ್ಟು ಮಾತ್ರವಲ್ಲದೆ ಬಹುತೇಕ ಸರ್ಕಾರಿ ಇಲಾಖೆಗಳು ಮತ್ತು ಆಡಳಿತದಲ್ಲಿ ಬಾರಿ ಪ್ರಮಾಣದ ಗುತ್ತಿಗೀಕರಣ ಮತ್ತು ಕೆಲಸದ ಹೊರಗುತ್ತಿಗೆಯ ಮೂಲಕ ಸಂಪೂರ್ಣ ಆಡಳಿತ ವ್ಯವಸ್ಥೆಯನ್ನು ಖಾಸಗೀಕರಣಗೊಳಿಸಲು ಯೋಜಿಸಲಾಗುತ್ತಿದೆ.

ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ಬದಲಾಗಿ ಅಲ್ಪಸ್ವಲ್ಪ ಇರುವ ಕಾನೂನುಗಳನ್ನು ಬದಲಾಯಿಸಿ ಅವರ ಕಲ್ಯಾಣಕ್ಕೆ ಇರುವ ಮಂಡಳಿಗಳನ್ನು ದುರ್ಬಲಗೊಳಿಸಿ ಇರುವ ಸೌಲಭ್ಯಗಳನ್ನು ಮೊಟಕುಗೊಳಿಸಲು ಮುಂದಾಗಿದೆ. ಇವೆಲ್ಲಗಳನ್ನು ಮರೆಮಾಚಲು ಆಳುವ ವರ್ಗಗಳು ಜನರಲ್ಲಿ ಜಾತಿ, ಧರ್ಮ, ಬಾಷೆ, ಪ್ರಾದೇಶಿಕತೆ ಹೆಸರಿನಲ್ಲಿ ಮತೀಯ ದ್ವೇಷಗಳನ್ನು ಬೆಳೆಸಿ ದುಡಿಯುವ ಜನರ ಐಕ್ಯತೆಯನ್ನು ಮುರಿಯಲು ನಿರಂತರ ಪ್ರಯತ್ನಗಳನ್ನು ನಡೆಸುತ್ತಿವೆ.

ಹಾಗಾಗಿ ಕೇಂದ್ರ ಸರ್ಕಾರದ ರೈತ-ಕಾರ್ಮಿಕ-ಜನ ವಿರೋಧಿ, ಕಾರ್ಪೋರೇಟ್-ಪರ ಮತ್ತು ರಾಷ್ಟ್ರ ವಿರೋಧಿ ವಿನಾಶಕಾರಿ ನೀತಿಗಳ ವಿರುದ್ಧ, ಪಾರ್ಲಿಮೆಂಟ್‌ನಲ್ಲಿ ನಾಲ್ಕು ಕಾರ್ಮಿಕ ಸಂಹಿತೆಗಳ ರದ್ದತಿಗಾಗಿ ಮಂಡಿಸಿರುವ ಖಾಸಗಿ ಮಸೂದೆಯನ್ನು ಅಂಗೀಕರಿಸಬೇಕೆಂದು ಒತ್ತಾಯಿಸಿ ಹಾಗೂ ಸಾಂವಿಧಾನಿಕ ಹಕ್ಕುಗಳ, ಪ್ರಜಾಪ್ರಭುತ್ವೀಯ ಮೌಲ್ಯಗಳ ಉಳಿವಿಗಾಗಿ ಹಾಗೂ ಕಾರ್ಪೋರೇಟ್ ಬಂಡವಾಳಗಾರರ ಕಪಿಮುಷ್ಟಿಯಿಂದ ರಾಷ್ಟ್ರವನ್ನು ಉಳಿಸಿ ಜನತೆಯ ರಕ್ಷಣೆಗಾಗಿ ಕೇಂದ್ರ ಕಾರ್ಮಿಕ ಸಂಘಟನೆಗಳು 2022 ಮಾರ್ಚ್ 28-29 ರಂದು ಎರಡು ದಿನಗಳ ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದ್ದವು

ಕರ್ನಾಟಕಲ್ಲಿ ವ್ಯಾಪಕ ಪ್ರಚಾರ... ಅಭೂತಪೂರ್ವ ಯಶಸ್ವಿ........ ಪುಟ 9 ರಿಂದ



ವಿರೋಧಿ ಹಾಗೂ ರೈತ ವಿರೋಧಿ ಮತ್ತು ದೇಶ ವಿರೋಧಿ ನೀತಿಗಳ ವಿರುದ್ಧ ಹಾಗೂ ಕೇಂದ್ರ ಸರ್ಕಾರ ವಿಭಜನಕಾರಿ ಪ್ರತಿಗಾಮಿ ನೀತಿಗಳ ವಿರುದ್ಧ ವ್ಯಾಪವಾದ ಜಂಟಿಯಾಗಿ ಜತೆಗೆ ಸ್ವತಂತ್ರವಾದ ಪ್ರಚಾರಾಂದೋಲ ನಡೆಸಿ ಈ ನೀತಿಗಳನ್ನು ಬಯಲುಗೊಳಿಸಲು ಸಿಐಟಿಯು ಸಂಯೋಜಿತ ಸಂಘಗಳು ಹಾಗೂ ಬೆಂಬಲಿತ ಸಂಘಗಳು ಶ್ರಮಿಸಲು ಕರೆ ನೀಡಿತ್ತು. ಅದನ್ನು ಅನುಸರಿಸಿದ ರಾಜ್ಯದಲ್ಲಿ ಕೇಂದ್ರ ಸರ್ಕಾರದ ನೀತಿಗಳ ಜತೆಯಲ್ಲೇ ರಾಜ್ಯದ ಬಿಜೆಪಿ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಸ್ವತಂತ್ರವಾದ ಕಾರ್ಯಚರಣೆ ನಡೆಸಿತು ಮತ್ತು ಅದರ ಭಾಗವಾಗಿ ಮಾರ್ಚ್ 4 ರಂದು ಹತ್ತು ಸಾವಿರಕ್ಕೂ ಅಧಿಕ ಕಾರ್ಮಿಕರನ್ನು ಸಂಘಟಿಸಿ ಬಜೆಟ್ ಅಧಿವೇಶನ ಚಲೋ ನಡೆಸಲಾಯಿತು. ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ಮಾರ್ಚ್ 4 ರಂದು ಮಂಡಿಸಿದ ಬಜೆಟ್ ನಲ್ಲಿ ರಾಜ್ಯದಲ್ಲಿ ಕರೋನೋತ್ತರ ಕಾಲದಲ್ಲಿ ಲಕ್ಷಾಂತರ ಕಾರ್ಮಿಕರು, ಜನ ಸಾಮಾನ್ಯರು ನಿರುದ್ಯೋಗಿಗಳಾಗಿ, ಕೃಷಿ ಕೈಗಾರಿಕಾ ರಂಗಗಳು ತೀವ್ರ ಬಿಕ್ಕಟ್ಟಿಗೆ ಒಳಗಾಗಿರುವ ಅಂಶಗಳನ್ನು, ಲಕ್ಷಾಂತರ ಯುವಜನರು ಮುನ್ಸಿಪಲ್, ಆರೋಗ್ಯ ಗ್ರಾಮ ಪಂಚಾಯ್ತಿಗಳು ಮೊದಲಾದ ಸರ್ಕಾರಿ ಇಲಾಖೆಗಳಲ್ಲಿ ದಿನಗೂಲಿಗಳಾಗಿ, ಗುತ್ತಿಗೆ ಹೊರಗುತ್ತಿಗೆ ಆಧಾರದ ಕೆಲಸಗಳನ್ನು ಮಾಡುತ್ತಾ ಅಭದ್ರತೆ ಜೀವನಕ್ಕೆ ದೂಡಲ್ಪಟ್ಟಿದ್ದಾರೆ ಎನ್ನುವ ಅಂಶಗಳನ್ನು ಗಮನಿಸಲಿಲ್ಲ. ರಾಜ್ಯದ ಮೂಲಭೂತ ಕರ್ತವ್ಯಗಳನ್ನು ಜಾರಿಗೊಳಿಸುವ ಇಂತಹ ವಿಭಾಗಗಳಿಗೆ ಯಾವುದೇ ವೇತನ ಪರಿಷ್ಕರಣೆ ಮತ್ತು ಸೇವೆ ಖಾಯಂಯಾತಿಯ ಪ್ರಸ್ತಾಪ ಬಜೆಟ್‌ನಲ್ಲಿ ಇಲ್ಲವಾಗಿತ್ತು ಜತೆಗೆ ಸ್ಕಿಂ ನೌಕರರಿಗೆ ಸ್ವಲ್ಪ ಪ್ರಮಾಣದ ಗೌರವಧನ ಹೆಚ್ಚಿಸಿದ್ದರೂ ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕೆ ಬಿಡಿಗಾಸನ್ನು ನೀಡಲಿಲ್ಲ. ಹೀಗಾಗಿ ಮುಖ್ಯಮಂತ್ರಿಗಳ ಈ ಬಜೆಟ್ ಜನಪರವೂ ಅಲ್ಲದ ಮತ್ತು ಪಸ್ತುತ ಸವಾಲುಗಳನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಸಂಪೂರ್ಣ ವಿಫಲವಾದ ಕೇವಲ ಹಾಲಿ ಜಾರಿಯಲ್ಲಿರುವ ಕಾರ್ಯಕ್ರಮಗಳನ್ನು ಒಳಗೊಂಡ ಮತ್ತು ಮುಂದಿನ ಚುನಾವಣೆಗಳ ಮೇಲೆ ಕಣ್ಣಿಟ್ಟು ರೂಪಿಸಿರುವ ಪ್ರಚಾರದ ಆಯ್ವವ್ಯಯವಾಗಿದೆ ಎನ್ನುವ ಅಂಶಗಳನ್ನು ಈ ಪ್ರಚಾರದಲ್ಲಿ ಸಿಐಟಿಯು ಎತ್ತಿ ತೋರಿಸಿತು ಜತೆಗೆ ಸುಮಾರು 10 ಲಕ್ಷಕ್ಕಿಂತ ಅಧಿಕ ಪತ್ರಗಳನ್ನು 1 ಲಕ್ಷಕ್ಕಿಂತ ಅಧಿಕ ಪೋಸ್ಟರ್ ಗಳನ್ನು ಮುದ್ರಿಸಿ ವಿವಿಧ ಭಾದಿತ ಕಾರ್ಮಿಕರ ನಡುವೆ ಪ್ರಚಾರ ನಡೆಸಲಾಯಿತು ಈ ಎಲ್ಲ ಕಾರಣಗಳ ಮಾರ್ಚ 28-29 ರ ಯಶಸ್ವಿಗೆ ಕಾರಣವಾದವು.

ಮತ್ತು ಸಾಮಾಜಿಕ, ಆರ್ಥಿಕ ಭದ್ರತೆ ಮತ್ತು ಜನವಿರೋಧಿ, ಕಾರ್ಮಿಕ ವಿರೋಧಿ ಹಾಗೂ ರೈತ ವಿರೋಧಿ ನೀತಿಗಳ ವಿರುದ್ಧ ರಾಜ್ಯದಲ್ಲಿ ಯಶಸ್ವಿ ಮುಷ್ಕರ ನಡೆಸಿದ್ದಾರೆ.ಸಿಐಟಿಯು ನೇತೃತ್ವದಲ್ಲಿ ಸುಮಾರು 1.5 ಲಕ್ಷ ವಿವಿಧ ವಿಭಾಗದ ಕಾರ್ಮಿಕರು ಎರಡು ದಿನಗಳ ಈ ಮುಷ್ಕರಲ್ಲಿ ನೇರವಾಗಿ ಭಾಗವಹಿಸಿರುವ ಪ್ರಾಥಮಿಕ ವರದಿಗಳು ಬಂದಿವೆ ಜತೆಗೆಐಎನ್‌ಟಿಯುಸಿ,ಎಐಟಿಯುಸಿ,ಹೆಚ್.ಎಂ.ಎಸ್, ಎಐಸಿಸಿಟಿಯು, ಟಿಯುಸಿಸಿ, ಎಐಯುಟಿಯುಸಿ ಹಾಗೂ ಎನ್‌ಸಿಎಲ್, ಹೆಚ್‌ಎಂಕೆಪಿ ಸಂಯೋಜಿತ ಕಾರ್ಮಿಕರ ಸಂಘಗಳ ಸಾವಿರಾರು ಕಾರ್ಮಿಕರು ಈ ಎರಡು ದಿನಗಳ ಮುಷ್ಕರಲ್ಲಿ ಭಾಗವಹಿಸಿದ್ದರು,

ವ್ಯಾಪಕ ತಯಾರಿ:

ಈ ಹಿಂದೆ ಜೆಸಿಟಿಯು ನೇತೃತ್ವದಲ್ಲಿ ಫೆಬ್ರವರಿ 26 ರಂದು ಆಯೋಜಿಸಲಾಗಿದ್ದ ಕಾರ್ಮಿಕ ಸಂಘಗಳ ರಾಜ್ಯ ಮಟ್ಟದ ಸಮಾವೇಶವನ್ನು ನಾಡಿನ ಹೆಸರಾಂತ ಚಿಂತಕ ಡಾ: ಬರಗೂರು ರಾಮಚಂದ್ರಪ್ಪ ಉದ್ಘಾಟಿಸಿ ಈ ಮುಷ್ಕರದ ತಯಾರಿಗೆ ಚಾಲನೆ ನೀಡಿದ್ದರು ಇದಾದ ಬಳಿಕ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಕಾರ್ಮಿಕರ ಸಮಾವೇಶಗಳನ್ನು ಜೆಸಿಟಿಯು ನೇತೃತ್ವದಲ್ಲಿ ನಡೆದ ತಯಾರಿಗಳು ನಡೆದವು. ಇದಾದ ಬಳಿಕ ರಾಜ್ಯದೆಲ್ಲಡೆ ಮುಖ್ಯವಾಗಿ ಕೈಗಾರಿಕ ಪ್ರದೇಶಗಳಲ್ಲಿ ಹತ್ತಾರು ದಿನಗಳ ಕಾಲ ಆಟೋ ಪ್ರಚಾರ, ಬೈಕ್ ರ್‍ಯಾಲಿ, ಕಾರ್ಮಿಕರ ಸರ್ವಸದಸ್ಯರ ಸಭೆ, ಬೀದಿ ಬದಿ ಹಾಗೂ ದ್ವಾರ ಸಭೆಗಳನ್ನು ಜಂಟಿಯಾಗಿ ಇಲ್ಲವೇ ಸ್ವತಂತ್ರವಾಗಿ ಆಯೋಜಿಸಿ ಮುಷ್ಕರದ ಬೇಡಿಕೆಗಳನ್ನು ಪ್ರಚಾರ ನಡೆಲಾಯಿತು.

ಮೂರು ದಿನಗಳ ರೈತ ಅಧಿವೇಶನ:

ಕರ್ನಾಟಕದ ಬಿಜೆಪಿ ಸರ್ಕಾರ ಜಾರಿ ಮಾಡಿರುವ ಮೂರು ರೈತ ವಿರೋಧಿ ನೀತಿಗಳನ್ನು ವಿರೋಧಿಸಿ ಹಾಗೂ ಕಾರ್ಮಿಕ ಕಾನೂನು ತಿದ್ದುಪಡಿಗಳು ಜತೆಗೆ ದಲಿತರ ಮತ್ತು ಮಹಿಳಾ ವಿರೋದಿ ನೀತಿಗಳು ಮತ್ತು ಯುವಜನರಿಗೆ ಉದ್ಯೋಗ ಮತ್ತು ಶಿಕ್ಷಣ ನೀತಿಗಳಿಗಾಗಿ ಆಗ್ರಹಿಸಿ ಸಂಯುಕ್ತ ಹೋರಾಟ-ಕರ್ನಾಟಕ ನೇತೃತ್ವದಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕನಲ್ಲಿ ನಡೆದ ಮೂರು ದಿನಗಳ ರೈತ ಅಧಿವೇಶನ ಕೂಡ ಈ ಸಾರ್ವತ್ರಿಕ ಮುಷ್ಕರ ಯಶಸ್ವಿಗೊಳಿಸಲು ಕರೆ ನೀಡಿತ್ತು ಅದರಂತೆ ಗ್ರಾಮೀಣ ಪ್ರದೇಶದಲ್ಲಿ ಹರತಾಳಕ್ಕೆ ಕರೆ ನೀಡಿತ್ತು ಅದರ ಭಾಗವಾಗಿ ಮಂಡ್ಯ, ಕಲುಬುರಗಿ, ಕೋಲಾರ, ಚಿಕ್ಕಬಳ್ಳಾಪುರ ಸೇರಿ ಹಲವು ಜಿಲ್ಲೆಗಳಲ್ಲಿ ರೈತ ಕೂಲಿಕಾರರು ಈ ಮುಷ್ಕರ ಬೆಂಬಲಿಸಿ ಪ್ರತಿಭಟನೆ ನಡೆಸಿದ್ದಾರೆ.

ಎಡ ಪಕ್ಷಗಳ ಬೆಂಬಲ:

ರಾಜ್ಯದಲ್ಲಿ ಕಾರ್ಮಿಕ ವರ್ಗದ ಈ ಮುಷ್ಕರವನ್ನು ಬೆಂಬಲಿಸಿ ಸಿಪಿಎಂ, ಸಿಪಿಐ, ಸಿಪಿಐಎಂಎಲ್, ಎಸ್‌ಯುಸಿಐ, ಪಾರ್ವರ್ಡ ಬ್ಲಾಕ್, ರಿಪಬ್ಲಿಕ್ ಆಫ್ ಇಂಡಿಯಾ, ಸ್ವರಾಜ್ ಇಂಡಿಯಾ ಏಳು ಪಕ್ಷಗಳು ಸಂಪೂರ್ಣ ಬೆಂಬಲ ಸೂಚಿಸಿದ್ದವು.

ಸಿಐಟಿಯು ಸ್ವತಂತ್ರವಾದ ಕಾರ್ಯಚರಣೆ:

2021 ರ ನವೆಂಬರ್ ನಲ್ಲಿ ಹೈದ್ರಾಬಾದ ನಲ್ಲಿ ನಡೆದ ಸಿಐಟಿಯು ಅಖಿಲ ಭಾರತ ಜನರಲ್ ಕೌನ್ಸಿಲ್ ಸಭೆಯು ಕೇಂದ್ರ ಸರ್ಕಾರದ ಕಾರ್ಮಿಕರ



"ಇದು ಸ್ಥಳಾಂತರಗೊಂಡ ಮೊದಲ ಕಾಶ್ಮೀರಿಯ ಮನವಿ. ಈಗ ದಯವಿಟ್ಟು ನಿಲ್ಲಿಸಿ; ಸತ್ತ ಪ್ರತಿಯೊಬ್ಬರೂ ಕಾಶ್ಮೀರಿಯೇ, ಜನಗಳ ಕಣ್ಣೀರನ್ನು ಒಡೆಯುವುದನ್ನು ಮತ್ತು ಅವರ ದುರಂತಗಳಿಂದ ದುಡ್ಡು ಮಾಡುವುದನ್ನು ನಿಲ್ಲಿಸಿ .ಕಾಶ್ಮೀರದ ರಕ್ತವನ್ನು ವಿವಿಧ ಮಾರುಕಟ್ಟೆಗಳಲ್ಲಿ ಮಾರುತ್ತಿರುವ ಅಧಿಕಾರಸ್ಥರಿಗೆ ನನ್ನದು ಒಂದೇ ಪ್ರಶ್ನೆ..ಯಾರು ಕೊಂದರು, ಯಾರನ್ನು ಕೊಂದರು ಎಂದು ಕೇಳುವುದನ್ನು ನಿಲ್ಲಿಸಿ!" ಎಂದು ಮಹಮ್ಮದ್ ಯುಸುಫ್ ತರಿಗಾಮಿ 'ಕಾಶ್ಮೀರಿ ಫೈಲ್ಸ್' ಚಿತ್ರದ ಮರೆಯಲ್ಲಿ ವಿಷ ಹರಡುತ್ತಿರುವ ಬಗ್ಗೆ ಶ್ರೀನಗರದಲ್ಲಿ ಪತ್ರಿಕಾಗೋಷ್ಠಿಯೊಂದರಲ್ಲಿ ಮನನೊಂದು ಕಳಕಳಿಯಿಂದ ಮನವಿಮಾಡಿಕೊಂಡರು.

ಕಾಶ್ಮೀರದ ಹಿರಿಯ ಕಮ್ಯುನಿಸ್ಟ್ ಮುಖಂಡರಾದ ಇವರು 1989ರಲ್ಲಿ ಪ್ರತ್ಯೇಕವಾದಿಗಳ ದಾಳಿಗಳಿಂದಾಗಿ ತಮ್ಮ ಊರು ಬಿಟ್ಟು ಹೋಗಬೇಕಾಗಿ ಬಂದ ಮೊದಲ ಕಾಶ್ಮೀರಿ. ಅವರು ಜಮ್ಮುವಿಗೆ ಹೋಗಿ ಪಂಡಿತ್ ಸಮುದಾಯದ ಒಬ್ಬ ಸ್ನೇಹಿತರ ಜತೆಗಿದ್ದರು. ಉಗ್ರಗಾಮಿಗಳ ದಾಳಿಯಿಂದ ತಪ್ಪಿಸಿಕೊಳ್ಳಲು ಪಂಡಿತ್ ಸಮುದಾಯದ ಜನಗಳು ಜಮ್ಮುವಿಗೆ ಬಂದಾಗ ಅವರನ್ನು ಮೊದಲು ಭೇಟಿ ಮಾಡಿದವರು ಇವರೇ. ಪಂಡಿತ ಸಮುದಾಯದ ಪುನರ್ವಸತಿಗಾಗಿ ಹೋರಾಟ ಆರಂಭಿಸಿದ ಮೊದಲಿಗರೂ ಕೂಡ. ತಮ್ಮ ಮಾವ(ಪತ್ನಿಯ ತಂದೆ), ಸೋದರಳಿಯ ಸೇರಿದಂತೆ ಕುಟುಂಬದ ಆರು ಸದಸ್ಯರನ್ನು ಕಳಕೊಂಡರು; ಅವರ ಸಂಬಂಧಿಕರಲ್ಲಿ ಹಲವರು ಹುತಾತ್ಮರಾದರು. ತರಿಗಾಮಿ ನಾಲ್ಕು ಬಾರಿ ಚುನಾಯಿತರಾದ ಶಾಸಕರು ಮತ್ತು ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರು.


1996ರಲ್ಲಿ ಚುನಾವಣಾ ಫಲಿತಾಂಶಗಳು ಘೋಷಣೆಯಾದ ನಂತರ, ಡಿಸೆಂಬರ್ 4 ರಂದು ಕುಲ್ಗಾಮ್ ನಲ್ಲಿ ಒಂದು ಸಾರ್ವಜನಿಕ ಸಭೆಯ ಮೇಲೆ ಉಗ್ರಗಾಮಿಗಳು ಗ್ರೆನೇಡ್ ಎಸೆದರು. ಅದರಲ್ಲಿ ಏಳು ಜನ ಪ್ರಾಣ ಕಳಕೊಂಡರು, ಹತ್ತಾರು ಜನಗಳಿಗೆ ಗಾಯಗಳಾದವು. ಈ ರ್ಯಾಲಿಯನ್ನುದ್ದೇಶಿಸಿ ತರಿಗಾಮಿ ಮಾತಾಡುತ್ತಿದ್ದರು. ಭಾರತ ಕಮ್ಯುನಿಸ್ಟ್ ಪಕ್ಷದ ಹಿರಿಯ ಮುಖಂಡ, ಪ್ರಮುಖ ಲೇಖಕ ಮತ್ತು ಕವಿ ಅಬ್ದುಲ್ ಸತ್ತಾರ್ ರಂಜೂರ್ ಹತ್ಯೆಯಾಯಿತು.

"ಸತ್ತವರೆಲ್ಲರೂ ನನ್ನವರು, ನಮ್ಮವರು ನಷ್ಟವಾದದ್ದು ಕಾಶ್ಮೀರಕ್ಕೆ, ಕಾಶ್ಮೀರದ ಅಸ್ಮಿತೆಗೆ, ಕಾಶ್ಮೀರದ ಜೀವನ ಮಾರ್ಗಕ್ಕೆ ಈ ದುಃಖವು ನಿಮ್ಮದೂ ಅಲ್ಲ ಅಥವಾ ನನ್ನದೂ ಅಲ್ಲ, ಅದು ನಮ್ಮದು ಆತ್ಮೀಯರೇ! ಈ ದುಃಖವು ಕಾಶ್ಮೀರಿ ಪಂಡಿತರಿಗೆ, ಸಿಖ್ಖರಿಗೆ, ಮುಸ್ಲಿಮರಿಗೆ, ಪತ್ರಿಕಾ ಸಂಪಾದಕರುಗಳಿಗೆ, ಪತ್ರಕರ್ತರಿಗೆ, ವಕೀಲರಿಗೆ, ಸಾಮಾನ್ಯ ಕಾರ್ಮಿಕರಿಗೆ, ಸಾಮಾನ್ಯ ಬಡಜನರಿಗೆ, ನನ್ನ ಸೋದರಿಯವರಿಗೆ ಸೇರಿದ್ದು. ನಮ್ಮ ಕಣ್ಣೀರುಗಳ ಒಡೆಯಬೇಡಿ!" ಎಂದು ಕೊನೆಯಲ್ಲಿ ಅವರು ಹೇಳಿದರು. ಶ್ರೀನಗರದ ಈ ಪತ್ರಿಕಾಗೋಷ್ಠಿಯಲ್ಲಿ ಅವರು ಹೇಳಿದ ಮಾತುಗಳನ್ನು ಈ ಮುಂದೆ ಕೊಡಲಾಗಿದೆ:

"ಜನಗಳ ಕಣ್ಣೀರನ್ನು ಒಡೆಯುವುದನ್ನು, ಅವರ ದುರಂತಗಳಿಂದ ದುಡ್ಡು ಮಾಡುವುದನ್ನು ನಿಲ್ಲಿಸಿ"

ಕಣಿವೆಯಿಂದ ಸ್ಥಳಾಂತರಗೊಂಡ ಮೊದಲ ಕಾಶ್ಮೀರಿಯ ಕಳಕಳಿಯ ಮನವಿ





ಈ ಚಿತ್ರಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ನನ್ನ ಅಭಿಪ್ರಾಯದಲ್ಲಿ, ಇಲ್ಲಿನ ಸನ್ನಿವೇಶವನ್ನು, ಇಲ್ಲಿನ ದುರಂತಗಳನ್ನು, ಇಂದಿನ ವರೆಗೆ ಏನೇನು ನಡೆಯಿತೋ ಅವೆಲ್ಲವನ್ನೂ ವಿವರಿಸಬೇಕಾಗಿರುವುದು ಈಗಿನ ಅವಶ್ಯಕತೆ. ಇವನ್ನು ಇಲ್ಲಿನ 'ಮೌರೂಜಿಹಕಾಯಕ್'(ಪಾರಂಪರಿಕ ಸತ್ಯ) ವನ್ನು ಮನಸ್ಸಿನಲ್ಲಿಟ್ಟುಕೊಂಡು ವಸ್ತುನಿಷ್ಟವಾಗಿ ಪ್ರಸ್ತುತ ಪಡಿಸಬೇಕಿತ್ತು. ಈ ಚಿತ್ರ ಹಾಗೆ ಕಾಣುತ್ತಿಲ್ಲ. ಕಳೆದ ಕೆಲವು ದಶಕಗಳಿಂದ ದುರಂತಕಾರೀ ಸನ್ನಿವೇಶಗಳಿಂದ ಹಾದು ಬರಬೇಕಾಗಿರುವುದು ನಮ್ಮ ದುರದೃಷ್ಟ. ಇದರಲ್ಲಿ ಕಾಶ್ಮೀರದ ಅಸ್ಮಿತೆಗೆ ಧಕ್ಕೆ ತಂದಿರುವ ಅತ್ಯಂತ ದುರಂತದ ಘಟನೆಯೆಂದರೆ ವಲಸೆ ಭಯದಿಂದ ಮನೆ ಬಿಟ್ಟು ಹೋಗಬೇಕಾಗಿ ಬಂದಿರುವುದು ನಮ್ಮ ಸಮಾಜದ ಒಂದು ಗಮನಾರ್ಹ ವಿಭಾಗ ಭಯದಿಂದ ಕಣಿವೆ ಬಿಟ್ಟು ಹೋಗಬೇಕಾಗಿ ಬಂತು. ಅವರೆಂದರೆ ಕಾಶ್ಮೀರಿ ಪಂಡಿತರು.

ಇದು ನಮ್ಮ ಚರಿತ್ರೆಯ ಅತ್ಯಂತ ದುರಂತಮಯ ಅಧ್ಯಾಯ, ಅದರಲ್ಲಿ ಸಂಶಯವೇನೂ ಇಲ್ಲ. ಆದರೆ ಅದೇ ವೇಳೆಗೆ, ಸತ್ಯಸಂಗತಿಯೂ ಏನೆಂದರೆ, ಹಿಂಸಾಚಾರದ ಹಿಂದಿದ್ದ ಶಕ್ತಿಗಳು ಯಾರು ಯಾವ ಧರ್ಮಕ್ಕೆ, ಸಮುದಾಯಕ್ಕೆ ಸೇರಿದವರು, ಅಥವ ಯಾವ ನಂಬಿಕೆಯನ್ನು ಪಾಲಿಸುತ್ತಾರೆ ಎಂದು ನೋಡುತ್ತಿರಲಿಲ್ಲ. ಅವರು ಟಿಕ್ಲ ತಪ್ಲುರವರನ್ನು ಕೊಂದರು, ಲಸ್ಸ ಕೌಲ್ ರನ್ನೂ, ಮೊಹಮ್ಮದ್ ಶಬಾನ್ ವಕೀಲ್ ರನ್ನೂ ಕೊಂದರು. ಇನ್ನೊಂದು ದುರಂತಮಯ ಘಟನೆಯಲ್ಲಿ, ಮರಣಶಯ್ಯೆಯಲ್ಲಿದ್ದ ಹಿರಿಯ ವಿದ್ವಾಂಸ ಮೌಲಾನಾ ಮಸೂದಿಯವರನ್ನೂ ಕೊಂದರು. ಕಾಶ್ಮೀರದ ಮೀರ್‌ವಾಜ್ ಮೌಲಾನಾ ಫರೂಕ್‌ರವರ ಹತ್ಯೆಯಾದದ್ದು ಯಾರ ಬುಲೆಟ್ ನಿಂದ? ನಂತರ ಅವರ ಅಂತಿಮ ಯಾತ್ರೆಯಲ್ಲಿ ಭಾಗವಹಿಸಿದ್ದ ಹತ್ತಾರು ಜನಸಾಮಾನ್ಯರನ್ನೂ ಗುಂಡಿಕ್ಕಿ ಕೊಂದರು. ಅದರು ಮಾಡಿದ್ದ ತಪ್ಪಾದರೂ ಏನು? ಇದು ಚಿತ್ರದ ಇನ್ನೊಂದು ಮಗ್ಗಲು.

ಹೆಚ್.ಎಂ.ಟಿ. ಯ ಜನರಲ್ ಮ್ಯಾನೇಜರ್ ಖೇರಾ ಸಾಹೇಬ್ ಮೇಲೆ ಗುರಿಯಿಟ್ಟರು, ಕಾಶ್ಮೀರ ವಿಶ್ವ ವಿದ್ಯಾಲಯದ ಉಪಕುಲಪತಿ ಮುಶಿರುಲ್ ಹಕ್ ಸಾಹೇಬರನ್ನೂ, ಅವರ ಖಾಸಗೀ ಕಾರ್ಯದರ್ಶಿ ಅಬ್ದುಲ್ ಘನಿ ಸಾಹೇಬರನ್ನೂ ಬಿಡಲಿಲ್ಲ. ರಾಜಕೀಯದೊಡನೆ ಯಾವುದೇ ಸಂಬಂಧವಿಲ್ಲದ, ಯಾವುದೇ ಪ್ರಭಾವವಿಲ್ಲದ ಎಷ್ಟೋ ಜನಸಾಮಾನ್ಯರನ್ನೂ ಗುರಿಮಾಡಲಾಯಿತು ಎಂಬುದು ನಿಜ ಸಂಗತಿಯಲ್ಲವೇ? ಶ್ರೀನಗರಕ್ಕೆ ಸೇರಿದ ನಮ್ಮ ಸೋದರಿಯರಲ್ಲಿ ಒಬ್ಬರಾದ ಶೀತಲ ಕೌಲ್‌ರನ್ನು ಅಮಾನುಷವಾಗಿ ಸಾಯಿಸಲಾಯಿತು. ಅನಂತನಾಗ್ ನಲ್ಲಿ ಪ್ರೇಮ್ ನಾಥ್ ಭಟ್‌ರವರನ್ನು ಹತ್ಯೆ ಮಾಡಿದರು, ಅಲ್ಲಿ ಗುಲಾಮ್ ನಭಿ ಕ್ವಾಲರ್ ಸಾಹೇಬರನ್ನೂ ಗುರಿಮಾಡಿದರು.

ನನಗೀಗ ಅಧಿಕಾರದಲ್ಲಿ ಇರುವವರಿಂದ, ಕಾಶ್ಮೀರದ ರಕ್ತವನ್ನು ವಿವಿಧ ಮಾರುಕಟ್ಟೆಗಳಲ್ಲಿ ಮಾರುತ್ತಿರುವವರಿಂದ ಒಂದೇ ಪ್ರಶ್ನೆ– ಯಾರು ಕೊಂದರು, ಯಾರನ್ನು ಕೊಂದರು ಎಂಬುದನ್ನು ನಿಲ್ಲಿಸಿ ಬಿಡಿ; ಸತ್ತವರೆಲ್ಲರೂ ನನ್ನ ಸಂಬಂಧಿಕರು, ನನ್ನ ಪ್ರೀತಿಪಾತ್ರರು ಸತ್ತರು,ನನ್ನ ಹಿರಿಯರು ಸತ್ತರು. ಅವರ ಹೆಸರುಗಳೇನು? ಯಾವ ಪಂಗಡಕ್ಕೆ ಸೇರಿದವರು? ಅವರೆಲ್ಲರೂ ಕಾಶ್ಮೀರಿಗಳೇ! ಮತ್ತು, ಇಂದು ನಾನು ಇದನ್ನು ಮತ್ತೊಮ್ಮೆ ಹೇಳ ಬಯಸುತ್ತೇನೆ, ವಂಥಮಾದ ದುರಂತ ಘಟನೆ ಮುನ್ನೆಲೆಗೆ ಬಂತು, ಅದೇ ವೇಳೆಯಲ್ಲಿ ಗಾವಕದಲ್ ಘಟನೆಯನ್ನು ಸಹ ಮರೆಯಲು ಸಾಧ್ಯವಿಲ್ಲ. ಬುಡ್ಗಾಮ್ ನಲ್ಲಿ ಕೆಲವು ಮುಗ್ಧ ಸಹೋದರ ಸಹೋದರಿಯರು ನಮ್ಮ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರು ಇದ್ದರು ಕೊಲ್ಲಲ್ಪಟ್ಟರು, ಅಲ್ಲಿ ಇನ್ನೊಂದು ಘಟನೆಯೂ ನಡೆದಿತ್ತು. ಕುಪ್ವಾರಕ್ಕೆ ಬರುತ್ತಿದ್ದ ಬಸ್ಸೊಂದರ ಮೇಲೆ ಗುಂಡು ಹಾರಿಸಲಾಯಿತು. ಯಾರು ಕೊಂದರು ಈ ಬಸ್ಸಿನ ಪ್ರಯಾಣಿಕರನ್ನು? ಒಬ್ಬ ಮುಗ್ಧ ಸೋಪೋರ್‌ನ ಸಹೋದರಿ ಅತ್ಯಾಚಾರಕ್ಕೊಳಗಾದಳು, ಕೊಲೆ ಮಾಡಲ್ಪಟ್ಟಳು. ಅವಳು ಒಂದು ಪಂಡಿತ ಕುಟುಂಬಕ್ಕೆ ಸೇರಿದವಳು. ಅದೇ ಸಮಯದಲ್ಲಿ, ದಿಕುನನ್ ಪೋಷ್ಪೋರದ ಘಟನೆಯೂ ನಮ್ಮ ಮುಂದೆ ಇದೆ. ಆ ರಾತ್ರಿಯಲ್ಲಿ ಯಾರ ಮರ್ಯಾದೆಯನ್ನು ದೋಚಲಾಯಿತು?

ಇವತ್ತಿಗೂ ಪ್ರಧಾನ ಮಂತ್ರಿಗಳು ಧೈರ್ಯ ತೋರಿಸ ಬೇಕು ಎಂದು ನಾನು ಬಯಸುತ್ತೇನೆ. ದಕ್ಷಿಣ ಆಫ್ರಿಕಾದಲ್ಲಿ ವರ್ಣದ್ವೇಷದ ಆಳ್ವಿಕೆಯನ್ನು ಕೊನೆಗೊಳಿಸಿದ ನಂತರ ರಚಿಸಿದ 'ಸತ್ಯ ಮತ್ತು ವ್ಯಾಜ್ಯ ಮುಕ್ತಾಯ ಆಯೋಗ'ದಂತಹ ವಿಶ್ವಾಸದ ಮರುಸ್ಥಾಪನೆಯ ಆಯೋಗವನ್ನು ಯಾರು ಸತ್ತರು ಮತ್ತು ಅವರನ್ನು ಯಾರು ಕೊಂದರು ಎಂದು ತಿಳಿಯಲು. ರಚಿಸಬೇಕು. ಸತ್ತವರು ಯಾರೇ ಆಗಲಿ ಅವರು ಮತ್ತೆ ಬದುಕಿ ಬರಲು ಸಾಧ್ಯವಿಲ್ಲ ಆದರೆ ಹೊಣೆಗಾರಿಕೆಯನ್ನಾದರೂ ನಿರ್ಧರಿಸಬೇಕು. ಯಾರು ಸತ್ತರು, ಯಾಕೆ ಸತ್ತರು ಎಂದು ಅವರ ಬಂಧು–ಬಳಗಕ್ಕೆ ತಿಳಿಯಬೇಕು.

ಈ ರಾಜಕೀಯ ಪಕ್ಷ, ಆ ರಾಜಕೀಯ ಪಕ್ಷ ಎಂದು ಏನೇನೋ ಹೇಳಲಾಗುತ್ತಿದೆ... ನನಗೊಂದು ಪ್ರಶ್ನೆ ಇದೆ; ನಮ್ಮ ವಿಧಾನ ಸಭೆಯ ಸಭಾಧ್ಯಕ್ಷರು, ಸದಸ್ಯರು, ನ್ಯಾಷನಲ್ ಕಾನ್ಫರೆನ್ಸ್ ಗೆ ಸೇರಿದವರು, ಕಾಂಗ್ರೆಸಿಗೆ ಸೇರಿದವರು, ಪಿಡಿಪಿಗೆ ಸೇರಿದವರು ಇವರನ್ನೆಲ್ಲ ಕೊಂದವರು ಯಾರು? ಅವರೇಕೆ ಸತ್ತರು? ಎಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಅವರನ್ನು ನಿರ್ದಯವಾಗಿ ಕೊಲ್ಲಲಾಯಿತು. ಅವರು ಏಕೆ ಕೊಲೆಯಾದರು? ಏಕೆಂದರೆ ಅವರು ಆ ಮಾರ್ಗವನ್ನು (ಪ್ರತ್ಯೇಕತಾವಾದಿಗಳ ಮಾರ್ಗವನ್ನು). ಆರಿಸಿಕೊಳ್ಳಲಿಲ್ಲ. ಸಾವಿನ ದುರಂತ ಕಂಡ ಮೊದಲನೆಯವನು ಯಾರು? ಅವನು ನ್ಯಾಷನಲ್ ಕಾನ್ಫರೆನ್ಸಿನ ಶ್ರೀನಗರದ ಕಾರ್ಯಕರ್ತ ಮೊಹಮ್ಮದ್ ಯೂಸುಫ್ ಹಲ್ವಾಯಿ. ಉಗ್ರಗಾಮಿಗಳು ಆಗಸ್ಟ್ 15ರಂದು ಬ್ಲಾಕ್ ಔಟ್ ಮಾಡಬೇಕು ಎಂದಾಗ ಅವನು ಪ್ರತಿಭಟಿಸಿದ ಎಂಬ ಕಾರಣಕ್ಕೇ ಸಾಯಿಸಿದರು. ಇಂದು ಆತನನ್ನು ಯಾವ ಗುಂಪಿನಲ್ಲಿ ಸೇರಿಸುತ್ತೀರಿ?

ಮಾನವ ರಕ್ತವನ್ನು ಇಂದು ರಾಜಕೀಯಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ. ಇದು ದೇಶಕ್ಕೆ ಹಾನಿಕಾರಕ, ಜನರಿಗೆ ಹಾನಿಕಾರಕ ಮತ್ತು ಕಾಶ್ಮೀರಕ್ಕೆ ಹಾನಿಕಾರಕ.

ನಾನು ಇಂದು ಮತ್ತೆ ಹೇಳ ಬಯಸುತ್ತೇನೆ, ಪ್ರಭಾವೀ ಮಂದಿಗೆ, ಆಳುವವರಿಗೆ ಹೇಳ ಬಯಸುತ್ತೇನೆ–ಕಾಶ್ಮೀರ ಕೇವಲ ಒಂದು ತುಂಡು ಭೂಮಿಯಷ್ಟೇ ಅಲ್ಲ. ಕಾಶ್ಮೀರ ಎಂಬುದು ಒಂದು ಜೀವನ ಮಾರ್ಗದ ಹೆಸರು, ಇದು ಒಂದು ನಾಗರಿಕತೆಯ ಹೆಸರು. ನಮಗೆ ಐದು ಸಾವಿರ ವರ್ಷಗಳ ಇತಿಹಾಸವಿದೆ ಅವು ಅಳಿಸಲಾಗದ ವರ್ಷಗಳು – ಯಾವುದೇ ಶಕ್ತಿ, ಹೊರಗಿನಿಂದ ಅಥವಾ ಒಳಗಿನಿಂದ, ನಮ್ಮ ಗುರುತನ್ನು ಅಳಿಸಲು ಸಾಧ್ಯವಿಲ್ಲ.


ನಾನು ಇದನ್ನು ನಿಮಗೆ ನೆನಪಿಸಲು ಬಯಸುತ್ತೇನೆ– ನನ್ನದೇ ಸ್ವಂತ ಪ್ರದೇಶದಲ್ಲಿ ಕಾಶ್ಮೀರಿ ಪಂಡಿತರ ಹತ್ಯೆಯಾಯಿತು, ಅಲ್ಲಿಯೇ ಬಿಜ್ಬೆಹಾರಾದಲ್ಲಿ ಇನ್ನೊಂದು ದುರಂತ ಘಟನೆಯೂ ನಡೆಯಿತು, ಅಲ್ಲಿ ನಮಾಝಿಗಳ ಹತ್ಯೆಗಳೂ ನಡೆದವು. ಎಲ್ಲಿ ಹಿಂದೂಗಳು ಸತ್ತರೋ, ಅಲ್ಲಿ ಮುಸ್ಲಿಮರೂ ಸತ್ತರು; ಚಿಟ್ಟಿಸಿಂಗಪುರದಲ್ಲಿ ನನ್ನ ಸಿಖ್ ಸಹೋದರಿ ಕೂಡ ಸತ್ತಳು, ಸಿಖ್ ಸಹೋದರರು ಸತ್ತರು ಮತ್ತು ಸಿಖ್ ಮಗುವಿನ ಕಣ್ಣುಗಳಲ್ಲಿ ಕಂಡ ನೀರು, ಅದು ಮಾನವೀಯತೆಯ ಕಣ್ಣೀರು, ಯಾರಾದರೂ ಸತ್ತಾಗ ಸುರಿಯುವಂತದ್ದು ... ನಾನು ಚಿತ್ರದ (ಕಾಶ್ಮೀರ್ ಫೈಲ್ಸ್) ತಯಾರಕರಿಗೆ, ಆಳುವ ಮಂದಿಗೆ ಹೇಳುತ್ತೇನೆ– ದಯವಿಟ್ಟು ಹೇಳಿ–ಈ ಕಣ್ಣೀರಿನ ಬಣ್ಣ ಯಾವುದು? ದಯವಿಟ್ಟು ಹೇಳಿ ಯಾವ ಮಾರುಕಟ್ಟೆಯಲ್ಲಿ ಈ ಕಣ್ಣೀರನ್ನು ಮಾರಲಾಗುತ್ತದೆ? ದಯವಿಟ್ಟು ಇದನ್ನು ನಿಲ್ಲಿಸಿ!

ನಾನು ಇದನ್ನು ಹೇಳುತ್ತೇನೆ, ನನ್ನ ಅಶೋಕ (ಕುಮಾರ್ ಭಟ್) ಕುಲ್ಗಾಮ್‌ನಲ್ಲಿ ಸತ್ತ, ಹಜನ್ ಯೂಸುಫ್ ಸಹ ಸತ್ತ, ಬಶೀರ್ ಅಹ್ಮದ್ ಕೂಡ ಸತ್ತ, ಇನ್ನೂ ಹಲವರು ಸತ್ತರು. ಯಾರು ಸತ್ತರು? ನನ್ನ ಆತ್ಮೀಯರು, ನನ್ನ ಸಂಬಂಧಿಗಳನ್ನು ವಿಭಜಿಸಲು ನಾನು ಬಯಸುವುದಿಲ್ಲ. ನನ್ನ ಸಮೀಪವರ್ತಿಗಳನ್ನು, ಆತ್ಮೀಯರನ್ನು ಅವರು ದೇವಸ್ಥಾನಕ್ಕೆ ಹೋಗುತ್ತಾರೆಯೇ ಅಥವಾ ಮಸೀದಿಗೋ ಎಂಬ ಆಧಾರದಲ್ಲಿ ತಿಳಿಯ ಬಯಸುವುದಿಲ್ಲ.

ಚಿತ್ರದಲ್ಲಿ ತೋರಿಸಿರುವುದು ಸತ್ಯವನ್ನಲ್ಲ ಎಂಬುದನ್ನು ನಾನಿಂದು ಹೇಳ ಬಯಸುತ್ತೇನೆ. ಸತ್ಯವನ್ನು ಒಂದು ಕಣ್ಣಿನಿಂದ ನೋಡಲಾಗುವುದಿಲ್ಲ. ಸತ್ಯವನ್ನು ನೋಡಲು ಮತ್ತು ತೀರ್ಮಾನಕ್ಕೆ ಬರಲು ಎರಡೂ ಕಣ್ಣುಗಳನ್ನು ವಿಪುಲವಾಗಿ ಬಳಸಬೇಕಾಗುತ್ತದೆ. ನಾನು ಇದನ್ನು ಮೊದಲೇ ಹೇಳಿದ್ದೇನೆ ಕಾಶ್ಮೀರದ ಆತ್ಮವು ಅಳುತ್ತಿದೆ ನನ್ನ ಸಹೋದರ ಸಹೋದರಿಯರಿಗಾಗಿ, ಕಾಶ್ಮೀರಿ ಪಂಡಿತರಿಗಾಗಿ, ಅವರು ತಮ್ಮ ತಾಯ್ನಾಡಿಗೆ ಮರಳಲು ಗೌರವ ಮತ್ತು ಸುರಕ್ಷತೆಯೊಂದಿಗೆ. ಮರಳಬೇಕು ಎಂದು ಬಯಸುತ್ತಿದೆ. ಬೇರೆ ಇನ್ನೇನು ಹೇಳಲು ಸಾಧ್ಯ?

1989 ರಲ್ಲಿ, ನಾನು ಎಂ.ಎಲ್.ಎ. ಬಿಡಿ, ಒಬ್ಬ ಸರಪಂಚನೂ ಆಗಿರದಿದ್ದಾಗ ಕೆಲವರು ಬಂದರು ಮನೆಗೆ ಘೇರಾವ್ ಹಾಕಿದರು. ನಾನು ಮನೆ ಬಿಡಬೇಕಾಗಿತ್ತು, ಜಮ್ಮುವಿಗೆ ಹೋಗಬೇಕಾಗಿತ್ತು. ನಾನು ಅಲ್ಲಿ ಕಾಶ್ಮೀರಿ ಪಂಡಿತರ ಬಳಿ ಆಶ್ರಯ ಪಡೆದೆ. ಆತ ಸೆಕ್ರೆಟರಿಯೇಟ್ ನಲ್ಲಿ ಉದ್ಯೋಗಿಯಾಗಿದ್ದರು. ಸರ್ಕಾರ ನನಗೆ ಗಾಂಧಿ ನಗರದಲ್ಲಿ ಜಾಗ ಕೊಡುವ ವರೆಗೂ ಅವರ ಜೊತೆಗಿದ್ದೆ. ನಂತರ ರಾಜ್ಯಪಾಲರ ಆಡಳಿತ ಹೇರಿದಾಗ ನನಗೂ ಭದ್ರತೆ ನೀಡಲಾಯಿತು.

ಪುಟ 14 ಕ್ಕೆ



ವ್ಯಂಗ್ಯಚಿತ್ರ: ಸುರೇಂದ್ರನ್, ಟ್ವಿಟರ್


ವ್ಯಂಗ್ಯಚಿತ್ರ: ಮಂಜುಲ್, ವೈಬ್ಸ್ ಆಫ್ ಇಂಡಿಯ

ಸಿಪಿಐ(ಎಂ) 23ನೇ ಮಹಾಧಿವೇಶನದ ಯಶಸ್ವಿಗೆ ಕಣ್ಣೂರು ಸಕಲ ರೀತಿಯಲ್ಲೂ ಸಜ್ಜುಗೊಳ್ಳುತ್ತಿದೆ..... ಪುಟ 16 ರಿಂದ



ಪಕ್ಷದ 23 ನೇ ಮಹಾಧಿವೇಶನವು ಕೇರಳದ ಕಣ್ಣೂರಿನಲ್ಲಿ ಏಪ್ರಿಲ್ 6 ರಿಂದ 10 ವರೆಗೆ ನಡೆಯಲಿದೆ. ಪಕ್ಷದ ಮಹಾಧಿವೇಶನ ನಿಗದಿಯಾಗಿರುವ ಕೇರಳ ರಾಜ್ಯಕ್ಕೆ ಕಮ್ಯೂನಿಸ್ಟ್ ರಾಜಕಾರಣದಲ್ಲಿ ಒಂದು ಚಾರಿತ್ರಿಕ ಹಿನ್ನೆಲೆಯಿದೆ. ಜಗತ್ತಿನಲ್ಲೇ ಮೊಟ್ಟಮೊದಲ ಬಾರಿಗೆ 1957 ರಲ್ಲಿ ಚುನಾವಣೆಗಳ ಮೂಲಕ ಕಾಮ್ರೇಡ್ ಇಎಂಎಸ್ ನಂಬೂದರಿ ಪಾಡ್ ರವರ ನೇತೃತ್ವದ ಎಡರಂಗ ಸರ್ಕಾರ ರಚನೆಯಾಯಿತು. ಇಲ್ಲಿಯವರೆಗೆ ಕೇರಳ ರಾಜ್ಯದಲ್ಲಿ ಪಕ್ಷವು ರಾಜಕೀಯವಾಗಿ ಮತ್ತು ಸಂಘಟನಾತ್ಮಕವಾಗಿ ಬಲಗೊಳ್ಳುತ್ತಾ ಬರುತ್ತಿದೆ. ಕಳೆದ 40 ವರ್ಷಗಳ ನಂತರ ಎರಡಂಗ ಸರ್ಕಾರ ಕೇರಳದಲ್ಲಿ ಎರಡನೇ ಬಾರಿಗೆ ನಿರಂತರವಾಗಿ ಗೆಲುವು ಸಾಧಿಸುವ ಮೂಲಕ ಜನಪರ ಅಧಿಕಾರವನ್ನು ನೀಡುತ್ತಿದೆ. ಪಕ್ಷದ ಪೊಲಿಟ್ ಬ್ಯೂರೋ ಸದಸ್ಯರು ಮತ್ತು ಕೇರಳದ ಮುಖ್ಯಮಂತ್ರಿಗಳಾದ ಕಾಮ್ರೆಡ್ ಪಿಣರಾಯಿ ವಿಜಯನ್ ಸ್ವತಃ ಕಣ್ಣೂರು ಜಿಲ್ಲೆಯವರು ಎನ್ನುವುದು ಮತ್ತೊಂದು ವಿಶೇಷ. ದೇಶದ ಪಕ್ಷ ಸಂಘಟನೆಯಲ್ಲಿ ಕೇರಳ ರಾಜ್ಯದ ಕಣ್ಣೂರು ಜಿಲ್ಲೆ ಅತ್ಯಂತ ಬಲಿಷ್ಟವಾದ ಜಿಲ್ಲೆ. ಜಿಲ್ಲೆಯಲ್ಲಿ 61,668 ಪಕ್ಷದ ಸದಸ್ಯರಿದ್ದು, 4,245 ಶಾಖೆಗಳು, 243 ಸ್ಥಳೀಯ ಸಮಿತಿಗಳು ಮತ್ತು 18 ಪ್ರದೇಶ ಸಮಿತಿಗಳು ಕೆಲಸ ನಿರ್ವಹಿಸುತ್ತಿವೆ. ಮಾತ್ರವಲ್ಲದೆ ಕಣ್ಣೂರು ಜಿಲ್ಲೆಗೆ ಜನ ಚಳುವಳಿಯ, ಸಮರಶೀಲ ಹೋರಾಟದ ಒಂದು ದೊಡ್ಡ ಪರಂಪರೆಯೇ ಇದೆ.

ಪಕ್ಷ ಇಷ್ಟೊಂದು ಬಲಿಷ್ಟವಾಗಿರುವ ಕಣ್ಣೂರು ಜಿಲ್ಲೆಯಲ್ಲಿ ಪಕ್ಷದ 23 ನೇ ಮಹಾಧಿವೇಶನ ನಿಗದಿಯಾದಾಗಿನಿಂದ ದೇಶದೆಲ್ಲೆಡೆ ದೊಡ್ಡ ಮಟ್ಟದ ನಿರಿಕ್ಷೆಗಳು ಪ್ರಾರಂಭವಾಗಿವೆ. ಪಕ್ಷದ ಮಹಾಧಿವೇಶನವನ್ನು ಅತ್ಯಂತ ಯಶಸ್ವಿಯಾಗಿ ಮತ್ತು ಧಾಖಲೆಯಾಗಿ ಉಳಿಸುವ ನಿಟ್ಟಿನಲ್ಲಿ ತಯಾರಿಗಳಿಗೆ ಪೂರಕವಾಗಿ ಸ್ವಾಗತ ಸಮಿತಿಯನ್ನು ರಚಿಸಿಕೊಂಡು ಕೆಲಸಗಳನ್ನು ಸಮರೋಪಾದಿಯಲ್ಲಿ ನಡೆಸಲಾಗುತ್ತಿದೆ. ಸ್ವಾಗತ ಸಮಿತಿ ಅಧ್ಯಕ್ಷರಾಗಿ ಮುಖ್ಯಮಂತ್ರಿಗಳು ಮತ್ತು ಪೊಲಿಟ್ ಬ್ಯೂರೋ ಸದಸ್ಯರಾದ ಪಿಣರಾಯಿ ವಿಜಯನ್, ಪ್ರಧಾನ ಕಾರ್ಯದರ್ಶಿಗಳಾಗಿ ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ ಕೊಡಿಯೇರಿ ಬಾಲಕೃಷ್ಣನ್ ಮತ್ತು ಖಜಾಂಚಿಗಳಾಗಿ ಪಕ್ಷದ ಕಣ್ಣೂರು ಜಿಲ್ಲಾ ಕಾರ್ಯದರ್ಶಿ ಎಂ.ವಿ. ಜಯರಾಜನ್ ರವರ ನೇತೃತ್ವದಲ್ಲಿ 21 ಉಪಸಮಿತಿಗಳನ್ನು ರಚಿಸಿ ತಯಾರಿಯ ಕೆಲಸಗಳನ್ನು ಅಚ್ಚುಕಟ್ಟಾಗಿ ನಡೆಸಲಾಗುತ್ತಿದೆ.

ಕಣ್ಣೂರಿನಲ್ಲಿ ಮಹಾಧಿವೇಶನ ನಡೆಯುತ್ತದೆ ಎಂದರೆ ಹಾಗೆ. ಅಲ್ಲಿಯ ಪಕ್ಷದ ಸದಸ್ಯರನ್ನು ಮಾತ್ರ ಒಳಗೊಳಿಸುವುದಲ್ಲ. ಬದಲಾಗಿ, ಇಡೀ ಜಿಲ್ಲೆಯ ಎಲ್ಲಾ ವಿಭಾಗದ ಜನಸಮುದಾಯಗಳನ್ನು ಒಳಗೊಳಿಸುವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ. ಮಹಾಧಿವೇಶನದ ಅಂಗವಾಗಿ ವಿವಿಧ ವಿಷಯಗಳ ಮೇಲೆ ವಿಚಾರ ಸಂಕಿರಣಗಳು, ಉಪನ್ಯಾಸ ಸರಣಿಗಳು, ವಿವಿಧ ಕ್ರೀಡಾ ಸ್ಪರ್ಧೆಗಳು, ಚಿತ್ರಕಲಾ ಮತ್ತು ಶಿಲ್ಪಕಲಾ ಸ್ಪರ್ಧೆಗಳು, ಪಕ್ಷದ ಇತಿಹಾಸವನ್ನು ಬಿಂಬಿಸುವ ವಸ್ತು ಪ್ರದರ್ಶನ, ಅತ್ಯಾಕರ್ಷಕ ಗೋಡೆಬರಹಗಳು, ಸಾಂಸ್ಕೃತಿಕ ಚಟುವಟಿಕೆಗಳು ಹೀಗೆ ಎಲ್ಲಾ ವಿಭಾಗದ ಜನಸಮುದಾಯವನ್ನು ಪಕ್ಷದ ಮಹಾಧಿವೇಶನದ ಭಾಗವಾಗಿಸಲು ಬೇಕಾದ ಎಲ್ಲಾ ಚಟುವಟಿಕೆಗಳನ್ನು ನಡೆಸುವ ಜೊತೆಗೆ ಇಡೀ ಕಣ್ಣೂರನ್ನು ಕಂಗೊಳಿಸುವ ರೀತಿಯಲ್ಲಿ ಸಿಂಗರಿಸಲಾಗುತ್ತಿದೆ.

ಜನತೆಯಿಂದ ನಿಧಿ ಸಂಗ್ರಹ:

ಪಕ್ಷದ ಹೋರಾಟ ಮತ್ತು ಸಮ್ಮೇಳನಗಳ ಯಶಸ್ವಿಗೆ ಜನತೆಯಿಂದ ನೇರವಾಗಿ ನಿಧಿ ಸಂಗ್ರಹಿಸುವ ಪರಂಪರೆಯೇ ಸಿಪಿಐ(ಎಂ) ಪಕ್ಷಕ್ಕಿದೆ. ಇದರಿಂದಲೇ ಪಕ್ಷ ಈಗಲೂ ಜನತೆಯ ಪಕ್ಷವಾಗಿ ಉಳಿದಿದೆ.

ಪಕ್ಷದ 23 ನೇ ಮಹಾಧಿವೇಶನವನ್ನು ಯಶಸ್ವಿಗೊಳಿಸಲು ಇಡೀ ಜಿಲ್ಲೆಯಲ್ಲಿ ಜನತೆಯಿಂದ ಮತ್ತು ಪಕ್ಷದ ಸದಸ್ಯರಿಂದ ವ್ಯಾಪಕವಾಗಿ ನಿಧಿ ಸಂಗ್ರಹ ಮಾಡಲಾಗಿದೆ. ಸಾರ್ವಜನಿಕರು ಅತ್ಯಂತ ಸಂತೋಷದಿಂದ ಉದಾರವಾಗಿ ಸಹಾಯ ನೀಡುತ್ತಿದ್ದಾರೆ. ಜಿಲ್ಲೆಯಲ್ಲಿ ಇದುವರೆಗು ನೇರವಾಗಿ ಜನತೆಯಿಂದ 4.18 ಕೋಟಿ ರೂ ಸಂಗ್ರಹಿಸಲಾಗಿದೆ. (4,18,41,539) ಪಕ್ಷದ ಕಾರ್ಯಕರ್ತರು ಮತ್ತು ಜನಸಾಮಾನ್ಯರ ಬಳಿ ನಾಯಕರುಗಳು ಖುದ್ದಾಗಿ ಮನೆ ಮನೆಗಳಿಗೆ, ಅಂಗಡಿಗಳಿಗೆ ಭೇಟಿ ನೀಡಿ ಹಣ ಸಂಗ್ರಹಿಸುತ್ತಿದ್ದಾರೆ.

ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಜನತೆಯಿಂದ ಸಂಗ್ರಹವಾದ ನಿಧಿ ಪಯ್ಯನ್ನೂರು:– 2678000, ಎಡಕ್ಕಾಡ್:– 2201480, ಪೆರಿಂಗೊಂ:– 2682430, ಅಂಚರಕಂಡಿ:– 2391686, ಅಲಕ್ಕೋಡ್:– 1724470, ಪಿಣರಾಯಿ:– 2459065, ಶ್ರೀಕಂದಪುರಂ:– 2440270, ತಲಶ್ಶೇರಿ:– 2413545, ತಳಿಪ್ಪರಂಬು:– 2577495, ಪಾನೂರು:– 2856870, ಮಡಾಯಿ:– 2349150, ಕೂತುಪರಂಬು:– 2788735, ಪಪ್ಪಿನಿಸ್ಸೆರಿ:– 1714319, ಮಟ್ಟನ್ನೂರು:– 2583168, ಮಯ್ಯಿಲ್: – 1803113, ಇರಿಟ್ಟಿ: – 2174850, ಕಣ್ಣೂರು: – 2095383, ಪೆರವೂರ್ – 1907510

ಪ್ರಚಾರ:

ಪಕ್ಷದ ಮಹಾಧಿವೇಶನಕ್ಕೆ ಪೂರಕವಾಗಿ ನಡೆಯುವ ಚಟುವಟಿಕೆಗಳು ಮತ್ತು ಮಹಾಧಿವೇಶನದ ಸಂದರ್ಭದಲ್ಲಿ ನಡೆಯುವ ಕಾರ್ಯಕ್ರಮಗಳನ್ನು ಜನರ ನಡುವೆ ಪ್ರಚಾರ ಮಾಡುವ ಉದ್ದೇಶದಿಂದ ಮಾಧ್ಯಮಗಳನ್ನು ಅದರಲ್ಲೂ ಸಾಮಾಜಿಕ ಮಾಧ್ಯಮಗಳನ್ನು ಪಕರಿಣಾಮಕಾರಿಯಾಗಿ ಬಳಸಿಕೊಳ್ಳಲು ನಿರ್ಧರಿಸಿದ ಸ್ವಾಗತ ಸಮಿತಿಯು ಸಿಪಿಐ(ಎಂ) 23 ನೇ ಮಹಾಧಿವೇಶನದ ಹೆಸರಿನಲ್ಲಿ CPIM 23rd Party Congress ವೆಬ್‌ಸೈಟ್, ಯೂಟ್ಯೂಬ್, ಫೇಸ್‌ಬುಕ್ ಪೇಜ್ ಮತ್ತು ಟ್ವಿಟರ್ ಖಾತೆಗಳನ್ನು ಪ್ರಾರಂಬಿಸಿದೆ. ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಸೀತಾರಾಂ ಯೆಚೂರಿ ಟ್ವಿಟರ್ ಖಾತೆಗೆ ಚಾಲನೆ ಕೊಟ್ಟರೆ, ಪೊಲಿಟ್ ಬ್ಯೂರೋ ಸದಸ್ಯರಾದ ಕಾಮ್ರೇಡ್ ಎಸ್. ರಾಮಚಂದ್ರನ್ ಪಿಳ್ಳೆಯವರು ವೆಬ್‌ಸೈಟ್ ಉಧ್ಘಾಟಿಸಿದರು, ಮತ್ತೋರ್ವ ಪೊಲಿಟ್ ಬ್ಯೂರೋ ಸದಸ್ಯರಾದ ಕಾಮ್ರೇಡ್ ಬೃಂದಾ ಕಾರಟ್‌ರವರು ಯೂಟ್ಯೂಬ್‌ಗೆ ಚಾಲನೆ ನೀಡಿದರು, ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ ಕೋಡಿಯೇರಿ ಬಾಲಕೃಷ್ಣನ್‌ರವರು ಫೇಸ್‌ಬುಕ್ ಪೇಜಿಗೆ ಚಾಲನೆ ನೀಡಿದರು. ಸಾಮಾಜಿಕ ಮಾಧ್ಯಮದ ಪರಿಣಾಮಕಾರಿ ಬಳಕೆಗಾಗಿ ಡಿಜಿಟ್ ಪೋಸ್ಟರ್ ಮತ್ತು ಸ್ಟೇಟಸ್ ವೀಡಿಯೋ ಸ್ಪರ್ಧೆಗಳನ್ನು ನಡೆಸಲಾಗಿದೆ. **"ಇತಿಹಾಸದ ಗೋಡೆ"** ಎನ್ನು ಶೀರ್ಷಿಕೆಯಡಿ ಪಕ್ಷದ ಮೊದಲ ಮಹಾಧಿವೇಶನದಿಂದ 22 ನೇ ಮಹಾಧಿವೇಶನದವರೆಗಿನ ಪಕ್ಷದ ಬೆಳವಣಿಗೆಗಳ ಕುರಿತು ವೀಡಿಯೋ ಸರಣಿ ಪ್ರಸಾರವಾಗುತ್ತಿದೆ. **"ಕಣ್ಣೂರು ಪ್ರಣಾಳಿಕೆ"** ಎಂಬ ಶೀರ್ಷಿಕೆಯಲ್ಲಿ ಕಣ್ಣೂರು ಜಿಲ್ಲೆಯಲ್ಲಿ ಪಕ್ಷ ಬೆಳವಣಿಗೆಗೆ ದುಡಿಯುತ್ತಿರುವ ವಿಶೇಷ ಸಂಗಾತಿಗಳನ್ನು ಪರಿಚಯಿಸುವ ವೀಡಿಯೋ ಸರಣಿ ಬಿತ್ತರಗೊಳ್ಳುತ್ತಿದೆ. ಜೊತೆಗೆ ಪ್ರತಿದಿನ ಮಹಾಧಿವೇಶನದ ತಯಾರಿಗಳು ಮತ್ತು ಬೆಳವಣಿಗಗಳ ಕುರಿತು ವಾರ್ತೆಗಳನ್ನು ಪ್ರಸಾರ ಮಾಡಲಾಗುತ್ತಿದೆ. ಇದಕ್ಕಾಗಿ ಪರಿಣಿತ, ಅನುಭವವಿರುವ ಸಂಗಾತಿಗಳನ್ನು ನಿಯೋಜನೆ ಮಾಡಲಾಗಿದೆ.

ಕಲಾಪಗಳು ನಡೆಯುವ ಪ್ರದೇಶದ ಸುತ್ತಮುತ್ತ, ಕಣ್ಣೂರು ನಗರ ಮಾತ್ರವಲ್ಲದೆ ಇಡೀ ಜಿಲ್ಲೆಯನ್ನ ಮಹಾಧಿವೇಶನಕ್ಕಾಗಿ ಸಿಂಗಾರಗೊಳಿಸಲು ಈಗಾಗಲೇ ಅಗತ್ಯವಿರುವ ಎಲ್ಲಾ ತಯಾರಿಗಳನ್ನು ನಡೆಸಲಾಗಿದೆ. ಇದಕ್ಕಾಗಿ ಎಲ್ಲೆಡೆಗಳಲ್ಲಿ ಅತ್ಯಕರ್ಷಕವಾದ ಬಹುವರ್ಣದ ಗೋಡೆಬರಹಗಳು ಚಿತ್ರಿಸಲಾಗಿದೆ, ಮುಗಿಲೆತ್ತರದ ಕಟೌಟ್‌ಗಳನ್ನು ಹಾಗಲಾಗಿದೆ. ಜಿಲ್ಲೆಯಲ್ಲಿರುವ ಪಕ್ಷದ ಪ್ರತಿ ಶಾಖೆಗಳು ತಮ್ಮ ಪ್ರದೇಶದ ವ್ಯಾಪ್ತಿಯಲ್ಲಿ ಸ್ವಾಗತ ಸಮಿತಿಯನ್ನು ರಚಿಸಿಕೊಂಡು ಸಮ್ಮೇಳನದ ಪ್ರಚಾರದ ಕೆಲಸವನ್ನು ಮಾಡುತ್ತಿವೆ. ಅದಕ್ಕಾಗಿ ಆ ಪ್ರದೇಶದಲ್ಲಿ ಪಕ್ಷದ ವಿಚಾರಗಳನ್ನು ಬಿಂಬಿಸುವ ಟ್ಯಾಬ್ಲೋಗಳನ್ನು ನಿರ್ಮಾಣ ಮಾಡಿ ಎಲ್ಲರ ಗಮನವನ್ನು ಸೆಳೆಯಲಾಗುತ್ತಿದೆ.

ವಿಚಾರ ಸಂಕಿರಣಗಳು:

ಸ್ವಾಗತ ಸಮಿತಿ ರಚನೆಯಾದಾಗಿನಿಂದ ಮಹಾಧಿವೇಶನ ಮುಕ್ತಾಯವಾಗುವವರೆಗೂ ನಿರಂತರವಾಗಿ ವಿವಿಧ ವಿಷಯಗಳ ಮೇಲೆ ರಾಜ್ಯ ಮತ್ತು ಜಿಲ್ಲೆಯಾದ್ಯಂತ ಮತ್ತು ಆನ್‌ಲೈನ್‌ಗಳಲ್ಲಿ ವಿಚಾರ ಸಂಕಿರಣಗಳು ಮತ್ತು ಉಪನ್ಯಾಸ ಸರಣಿಗಳನ್ನು ನಡೆಸಲಾಗುತ್ತಿದೆ. ಫೆಬ್ರವರಿ 23 ರಂದು ಡಾ. ಸುನಿಲ್ ಪಿ ಇಳೈದಂರವರು "ಮಾರ್ಕ್ಸ್ ಮರು ಓದು" ಉಪನ್ಯಾಸವನ್ನು ನೀಡುವ ಮೂಲಕ ಆನ್ ಲೈನ್ ಉಪನ್ಯಾಸ ಸರಣಿಗೆ ಚಾಲನೆ ನೀಡಿದರು. ಹಲವು ವಿಷಯಗಳ ಮೇಲೆ ವಿಚಾರ ಸಂಕಿರಣಗಳು ನಡೆಯುತ್ತಿದ್ದು ಅವುಗಳಲ್ಲಿ ಪ್ರಮುಖವಾಗಿ "ಮಾಧ್ಯಮ ಮತ್ತು ಸಾಮಾಜಿಕ ಬದ್ಧತೆ" "ನಿರುದ್ಯೋಗ ಮತ್ತು ಕೇಂದ್ರ ರಾಜ್ಯ ಸರ್ಕಾರದ ನೀತಿಗಳು" "ಕೋಮುವಾದ ಹುಟ್ಟುಹಾಕಿರುವ ಸವಾಲುಗಳು" "ಸ್ವಾತಂತ್ರ್ಯ ಮತ್ತು ಕಮ್ಯೂನಿಸ್ಟರು" "ಮಾರ್ಕ್ಸ್‌ವಾದದ ಪ್ರಸ್ತುತತೆ" "ಕೇಂದ್ರ ಮತ್ತು ರಾಜ್ಯ ಬಜೆಟ್" "ಇಎಂಎಸ್ ದಿನದ ಹಂಗವಾಗಿ ಭೂಮಿಯ ಹಕ್ಕಿನ ಕುರಿತು" "ಕೇರಳದ ಅಧಿಕಾರ ವಿಕೇಂದ್ರೀಕರಣ ಮಾದರಿ" "ಕೇಂದ್ರ ಸರ್ಕಾರದ ಉದ್ಯೋಗ ವಿರೋಧಿ ನೀತಿಗಳು ಮತ್ತು ಕಾನೂನುಗಳು" "ಜಾಗತೀಕರಣ ನೀತಿ ಮತ್ತು ಎಡ ಪರ್ಯಾಯ" "ಕೇಂದ್ರದ ಕಾರ್ಮಿಕ ವಿರೋಧಿ ನೀತಿಗಳು ಮತ್ತು ಕಾನೂನುಗಳು" "ಸಾಮಾಜಿಕ ಅಭಿವೃದ್ಧಿಯಲ್ಲಿ ಗ್ರಂಥಾಲಯಗಳ ಪಾತ್ರ" "ಲಿಂಗ ಸಮಾನತೆ" "ಮೋದಿ ಸರ್ಕಾರದ ವಿಜ್ಞಾನ ವಿರೋಧಿ ನೀತಿಗಳು" ಕೃಷಿ ಬಿಕ್ಕಟ್ಟು ಮತ್ತು ಪರಿಹಾರ" ಹೀಗೆ ಹಲವು ವಿಷಯಗಳ ಮೇಲೆ ವಿಚಾರ ಸಂಕಿರಣ, ಉಪನ್ಯಾಸ ಸರಣಿಗಳನ್ನು ಸಂಘಟಿಸಲಾಗಿದೆ. ಇವುಗಳಲ್ಲಿ ಪಕ್ಷದ ಕೇಂದ್ರ ಮುಖಂಡತ್ವ, ಚಿಂತಕರು, ಸಾಹಿತಿಗಳು, ವಿಷಯ ತಜ್ಞರು ಭಾಗವಹಿಸಿ ಮಾತನಾಡಿದ್ದಾರೆ. ಅಪಾರ ಸಂಖ್ಯೆಯಲ್ಲಿ ಪಕ್ಷದ ಕಾರ್ಯಕರ್ತರು ಮತ್ತು ಸಾರ್ವಜನಿಕರು ಭಾಗವಹಿಸಿದ್ದಾರೆ.

ಕ್ರೀಡೆ, ಸಾಂಸಕೃತಿಕ ಸ್ಪರ್ಧೆ ಮತ್ತು ಇತರ ಚಟುವಟಿಕೆಗಳು:

ಮಹಾಧಿವೇಶನದ ಅಂಗವಾಗಿ ವಿವಿಧ ರೀತಿಯ ಕ್ರೀಡಾ ಸ್ಪರ್ಧೆಗಳನ್ನು ಸಂಘಟಿಸಲಾಗಿದೆ. ವಾಲಿಬಾಲ್, ಫುಟ್‌ಬಾಲ್, ಬಾಸ್ಕೆಟ್‌ಬಾಲ್, ಕ್ರಿಕೇಟ್, ಶೆಟಲ್ ಕಾಕ್, ಚೆಸ್, ಹಗ್ಗ ಜಿಗಿತ, ಕಬಡಿ, ಅಥ್ಲೆಟಿಕ್ಸ್, ಗಾಳಿಪಟ ಸ್ಪರ್ಧೆ ಹೀಗೆ ವಿವಿಧ ರೀತಿಯ ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸಿ, ಗೆದ್ದ ತಂಡಗಳಿಗೆ ಆಕರ್ಷಕ ಬಹುಮಾನಗಳನ್ನು ವಿತರಿಸಲಾಗಿದೆ. ಪ್ರತಿ ದಿನ ಜಿಲ್ಲೆಯ ಒಂದಲ್ಲಾ ಒಂದು ಪ್ರದೇಶದಲ್ಲಿ ಮಹಾಧಿವೇಶನದ ಅಂಗವಾಗಿ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತಿರುತ್ತವೆ. ಅವುಗಳಲ್ಲಿ ಹಾಡುಗಾರಿಕೆ, ನೃತ್ಯಪ್ರದರ್ಶನ, ನಾಟಕ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. 'ಭಾರತದಲ್ಲಿ ನೂರು ವರ್ಷಗಳ ಕಮ್ಯುನಿಸ್ಟ್ ಚಳವಳಿ' ವಿಷಯದ ಕುರಿತು ಅಂತಾರಾಷ್ಟ್ರೀಯ ರಸಪ್ರಶ್ನೆ ಸ್ಪರ್ಧೆ ಆಯೋಜಿಸಲಾಗಿದೆ. ಇದರಲ್ಲಿ ಜಗತ್ತಿನಾದ್ಯಂತ ಇರುವ ಮಲೆಯಾಳಿಗಳು ಭಾಗವಹಿಸುವ ರೀತಿಯಲ್ಲಿ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಜೊತೆಗೆ ಚಿತ್ರಕಲೆ, ಬೀದಿ ನಾಟಕ, ಕ್ರಾಂತಿಗೀತೆ, ಲೇಖನ, ಕವಿತೆ, ಸಣ್ಣಕಥೆ, ಕಾರ್ಟೂನ್ ಬರಹ, ಶಿಲ್ಪಕಲೆ, ಕಿರುಚಿತ್ರ, ಛಾಯಾಗ್ರಹಣ, ಡಿಜಿಟಲ್ ಪೇಂಟಿಂಗ್ ಹೀಗೆ ನಾನಾ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಕಲೆ ಮತ್ತು ಸಾಹಿತ್ಯದ ಕೃತಿಗಳು ಕೋಮುವಾದ, ಜಾತ್ಯತೀತ ಮೌಲ್ಯಗಳು, ಮಾನವೀಯತೆ, ವೈಜ್ಞಾನಿಕ ಪ್ರಜ್ಞೆ, ಕೇರಳದ ಸಾಮಾಜಿಕ ಅಭಿವೃದ್ಧಿಯಲ್ಲಿ ಎಡಪಂಥೀಯ ಚಳುವಳಿಗಳ ಪಾತ್ರ ಮತ್ತು ಜನರ ಅಭಿವೃದ್ಧಿಯ ವಿಚಾರಗಳನ್ನು ಪ್ರತಿಬಿಂಬಿಸುತ್ತವೆ.

ಪ್ರದರ್ಶನಗಳು:

ಮಹಾಧಿವೇಶನದ ಅಂಗವಾಗಿ ಪಕ್ಷದ ಇತಿಹಾಸವನ್ನು ಬಿಂಬಿಸುವ **"ಹಿಸ್ಟರಿ ವಾಲ್"** ಹೆಸರಿನ ಐತಿಹಾಸಿಕ ವಸ್ತು ಪ್ರದರ್ಶನ, ಪಕ್ಷದ ಕೇರಳ ರಾಜ್ಯದ ಇತಿಹಾಸ ಮತ್ತು ಜನತೆಯ ಹೋರಾಟಗಳನ್ನು ಬಿಂಬಿಸುವ ಚಿತ್ರಕಲಾ ಪ್ರದರ್ಶನ, ಶಿಲ್ಪಕಲಾ ಪ್ರದರ್ಶನ, ಪುಸ್ತಕ ಪ್ರದರ್ಶನ ಮತ್ತು ಮಾರಾಟ, ವಿಜ್ಞಾನ ವಸ್ತು ಪ್ರದರ್ಶನ ಹೀಗೆ ವಿವಿಧ ರೀತಿಯ ಪ್ರದರ್ಶನಗಳನ್ನು ಏಪ್ರಿಲ್ 1 ರಿಂದ 10 ರವರೆಗೆ ನಡೆಸಲಾಗುತ್ತಿದೆ. ಹತ್ತು ದಿನಗಳು ನಡೆಯುವ ಈ ಪ್ರದರ್ಶನಗಳಲ್ಲಿ ಲಕ್ಷಾಂತರ ಜನ ಭೇಟಿ ನೀಡಿ ವೀಕ್ಷಿಸುವ ನಿರೀಕ್ಷೆಗಳಿವೆ. ಈ ಪ್ರದರ್ಶನಗಳನ್ನು ನಡೆಸಲು ನೂರಾರು ಜನ ಕಲಾವಿದರು ಹಗಲು ರಾತ್ರಿ ಎನ್ನದೆ ದುಡಿಯುತ್ತಿದ್ದಾರೆ.

ಮಹಾಧಿವೇಶನ ನಡೆಯುವ ಸಂಭಾಂಗಣ ಮತ್ತು ಅದರ ಸುತ್ತಮುತ್ತಲ ಪ್ರದೇಶ ಹಾಗೂ ಏಪ್ರಿಲ್ 10 ರಂದು ನಡೆಯುವ ಕೆಂಪು ಸ್ವಯಂ ಸೇವಕರ ಆಕರ್ಷಕ ಮೆರವಣಿಗೆ, ಬಹಿರಂಗ ಸಭೆ ಇವುಗಳ ವೇದಿಕೆ ಮತ್ತು ಸುತ್ತಮುತ್ತಲ ಪರಿಸರವನ್ನು ಪಕ್ಷದ ಇತಿಹಾಸ, ಹೋರಾಟದ ಪರಂಪರೆಯನ್ನು ಬಿಂಬಿಸುವ ರೀತಿಯಲ್ಲಿ ಆಕರ್ಷಕವಾಗಿ ಸಿದ್ದಪಡಿಸಲು ಅನುಭವಿ ಕಲಾವಿದರುಗಳನ್ನು ಒಳಗೊಂಡು ವೇದಿಕೆ ನಿರ್ಮಾಣದ ಕೆಲಸಗಳನ್ನು ಸ್ವಾಗತ ಸಮಿತಿ ಆರಂಭಿಸಿದೆ. ಮಹಾಧಿವೇಶನಕ್ಕೆ ಭಾಗವಹಿಸುವ ಪ್ರತಿನಿಧಿಗಳು, ವೀಕ್ಷಕರು, ಮತ್ತು ನಾಯಕತ್ವಕ್ಕೆ, ಸುಗಮ ಕಲಾಪಗಳಿ ಯಾವುದೇ ರೀತಿಯ ಅಡ್ಡಿಗಳಾಗದಂತೆ ಕೋವಿಡ್‌ನ ಎಲ್ಲಾ ನಿಯಮಗಳನ್ನು ಅನುಸರಿಗೆ ಅಗತ್ಯ ತಯಾರಿಗಳನ್ನು ನಡೆಸಲಾಗುತ್ತಿದೆ. ಈ ಮಹಾಧಿವೇಶನದ ಕಲಾಪಗಳಲ್ಲಿ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಂಘಟನಾತ್ಮಕ ಪ್ರಶ್ನೆಗಳ ಮೇಲೆ ಎಷ್ಟು ಗಬೀರವಾದ ಚರ್ಚೆಗಳು ನಡೆಯುತ್ತವೆಯೋ ಅಷ್ಟೇ ಆಕರ್ಷಕವಾಗಿ ಕಣ್ಣೂರನ್ನು ಕಮ್ಯೂನಿಸ್ಟ್ ಪಕ್ಷದ ನೂರು ವರ್ಷಗಳ ಇತಿಹಾಸ ಬಿಂಬಿಸುವ ರೀತಿಯಲ್ಲಿ ಸಿಂಗರಿಸಿ ಸಜ್ಜುಗೊಳಿಸಲಾಗುತ್ತಿದೆ. ಇವೆಲ್ಲವನ್ನು ನೋಡಿ ಕಣ್ತುಂಬಿಕೊಳ್ಳುವುದೇ ಒಂದು ಆನಂದ ಮತ್ತು ವಿಶೇಷ ಅನುಭವ.





ರಷ್ಯಾದ ಮೇಲಿನ ದಿಗ್ಬಂಧನಗಳ ವಿಪರ್ಯಾಸ



ಉಕ್ರೇನ್ ನ್ಯಾಟೋ ಸೇರುವ ಸಂಬಂಧವಾಗಿ ಉಂಟಾಗಿದ್ದ ರಷ್ಯಾ ಮತ್ತು ಉಕ್ರೇನ್ ನಡುವಿನ ತಿಕ್ಕಾಟವನ್ನು ತಿಳಿಗೊಳಿಸುವ ಸಲುವಾಗಿ, ಫ್ರಾನ್ಸ್ ಮತ್ತು ಜರ್ಮನಿಯ ಮಧ್ಯಸ್ತಿಕೆಯಲ್ಲಿ ಒಂದು ಸಮಾಧಾನಕರ ಒಪ್ಪಂದಕ್ಕೆ ಬಂದಿದ್ದರೂ ಸಹ, ಇವೆರಡರ ನಡುವಿನ ಹಗೆತನ ಮುಂದುವರೆಯುವಂತೆ ನೋಡಿಕೊಳ್ಳುವ ಉದ್ದೇಶದಿಂದ ಅಮೆರಿಕಾ ಈ ಒಪ್ಪಂದವನ್ನು ಬುಡಮೇಲು ಮಾಡಿತು ಎಂದು ವರದಿಯಾಗಿದೆ. ಆದರೂ ಈಗ ಪರಿಸ್ಥಿತಿಯ ವಿಪರ್ಯಾಸ ಹೇಗಿದೆ ಎಂದರೆ, ಅದು ತನ್ನ ತಕ್ಷಣದ ದೊಡ್ಡ ಶತ್ರು ರಷ್ಯಾದ ಗರ್ವಭಂಗಕ್ಕಾಗಿ ತಾನು ನಿರ್ಬಂಧ ಹೇರಿದ್ದ ಇರಾನ್ ಮತ್ತು ವೆನೆಜುವೆಲಾ ದೇಶಗಳೊಂದಿಗೇ ಶಾಂತಿ ಸಂಧಾನಕ್ಕೆ ಮುಂದಾಗುವ ಪರಿಸ್ಥಿತಿಗೆ ಒಳಗಾಗಿದೆ. ಸಾಮ್ರಾಜ್ಯಶಾಹಿ ಅಮೆರಿಕಾ ಹೊಂದಿದ್ದ ವಿಶ್ವ ಪ್ರಾಬಲ್ಯವು ಅವನತಿಯತ್ತ ಸಾಗುತ್ತಿರುವುದನ್ನು ನಾವು ಇಂದು ಕಾಣುತ್ತಿದ್ದೇವೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: **ಕೆ.ಎಂ. ನಾಗರಾಜ್**

ತನ್ನ ಅಧಿನಾಯಕತ್ವವನ್ನು ಉಳಿಸಿಕೊಳ್ಳಲು ಸಾಮ್ರಾಜ್ಯಶಾಹಿ ಅಮೆರಿಕಾ ದಿನ ಬೆಳಗಾದರೆ ಒಂದೊಂದು ಹೊಸ ಜಾದೂ ಮಾಡುತ್ತಿದೆ. ಮೊದಲನೆಯದು, ಉಕ್ರೇನ್‌ಅನ್ನು ನ್ಯಾಟೋ ಮಿಲಿಟರಿ ಕೂಟಕ್ಕೆ ಸೇರಿಸಿಕೊಳ್ಳುವುದನ್ನು ರಷ್ಯಾ ಸುತರಾಂ ಒಪ್ಪುವುದಿಲ್ಲ ಎಂಬುದು ಚೆನ್ನಾಗಿ ಗೊತ್ತಿದ್ದರೂ ಸಹ, ಅಮೆರಿಕಾ ತನ್ನ "ಪಾಶ್ಚಾತ್ಯ ಮೈತ್ರಿಕೂಟದ ಪರವಾಗಿ" ರಷ್ಯಾದ ಗಡಿಯವರೆಗೂ ನ್ಯಾಟೋವನ್ನು ವಿಸ್ತರಿಸುವ ಮೂಲಕ ರಷ್ಯಾವನ್ನು ರೇಗಿಸುತ್ತಲೇ ಬಂತು ("ಕರಡಿಯನ್ನು ಪ್ರಚೋದಿಸಿತು"). ತಮ್ಮ ಇಂಧನದ ಅಗತ್ಯಗಳನ್ನು ಪಶ್ಚಿಮ ಯುರೋಪ್ ದೇಶಗಳು ರಷ್ಯಾದಿಂದ ಪೂರೈಸಿಕೊಳ್ಳುತ್ತಿರುವ ಕಾರಣದಿಂದ ರಷ್ಯಾದೊಂದಿಗಿನ ತಮ್ಮ ಸಂಬಂಧಗಳನ್ನು ಅವು ಬಲಪಡಿಸಿಕೊಳ್ಳುತ್ತಿದ್ದವು. ಇದನ್ನು ತಡೆಯುವುದೇ ಅಮೆರಿಕಾದ ಉದ್ದೇಶವಾಗಿತ್ತು. ಉಕ್ರೇನ್ ನ್ಯಾಟೋ ಸೇರುವ ಸಂಬಂಧವಾಗಿ ಉಂಟಾಗಿದ್ದ ರಷ್ಯಾ ಮತ್ತು ಉಕ್ರೇನ್ ನಡುವಿನ ತಿಕ್ಕಾಟವನ್ನು ತಿಳಿಗೊಳಿಸುವ ಸಲುವಾಗಿ, ಫ್ರಾನ್ಸ್ ಮತ್ತು ಜರ್ಮನಿಯ ಮಧ್ಯಸ್ತಿಕೆಯಲ್ಲಿ ರಷ್ಯಾ ಮತ್ತು ಉಕ್ರೇನ್ ಒಂದು ಸಮಾಧಾನಕರ ಒಪ್ಪಂದಕ್ಕೆ ಬಂದಿದ್ದರೂ ಸಹ, ರಷ್ಯಾ ಮತ್ತು ಉಕ್ರೇನ್ ನಡುವಿನ ಹಗೆತನ ಮುಂದುವರೆಯುವಂತೆ ನೋಡಿಕೊಳ್ಳುವ ಉದ್ದೇಶದಿಂದ ಅಮೆರಿಕಾ ಈ ಒಪ್ಪಂದವನ್ನು ಬುಡಮೇಲು ಮಾಡಿತು ಎಂಬುದೂ ಸಹ ವರದಿಯಾಗಿದೆ.

ರಷ್ಯಾ ಮತ್ತು ಉಕ್ರೇನ್ ನಡುವಿನ ಈ ತಿಕ್ಕಾಟವು ಅಂತಿಮವಾಗಿ ಉಕ್ರೇನ್ ಮೇಲೆ ರಷ್ಯಾ ಆಕ್ರಮಣ ಮಾಡುವಲ್ಲಿ ಪರಿಣಮಿಸಿತು ಮತ್ತು ರಷ್ಯಾದ ಮೇಲೆ ಆರ್ಥಿಕ ದಿಗ್ಬಂಧನಗಳನ್ನು ಅಮೆರಿಕಾ ವಿಧಿಸಿತು. ಈ ನಿರ್ಬಂಧಗಳಿಂದಾಗಿ ರಷ್ಯಾವು ತನ್ನದೇ ರಫ್ತು ಗಳಿಕೆಯನ್ನು ಡಾಲರ್ ಕರೆನ್ಸಿಯ ಮೂಲಕ ಪಡೆಯುವುದು ಅಸಾಧ್ಯವಾಯಿತು. ತನ್ನ ಒಟ್ಟು ಅಗತ್ಯದಲ್ಲಿ ಸುಮಾರು 8% ಇಂಧನವನ್ನು ರಷ್ಯಾದಿಂದ ಆಮದು ಮಾಡಿಕೊಳ್ಳುವ ಅಮೆರಿಕ ತನ್ನ ಆಮದುಗಳನ್ನು ನಿರ್ಬಂಧಿಸಿತೇ ವಿನಃ, ಪಶ್ಚಿಮ ಯುರೋಪ್ ದೇಶಗಳು ಮಾಡಿಕೊಳ್ಳುವ ರಷ್ಯಾದ ತೈಲ ಮತ್ತು ಅನಿಲದ ಆಮದಿನ ಮೇಲೆ ನಿರ್ಬಂಧಗಳನ್ನು ಹೇರಲಿಲ್ಲ. ಇದಕ್ಕೆ ಕಾರಣವೇನೆಂದರೆ, ಈ ದೇಶಗಳು ತಮ್ಮ ಅಗತ್ಯದ 40% ಇಂಧನವನ್ನು ರಷ್ಯಾದಿಂದ ಆಮದು ಮಾಡಿಕೊಳ್ಳುತ್ತವೆ. ಹಾಗಾಗಿ, ಪಶ್ಚಿಮ ಯುರೋಪ್ ದೇಶಗಳು ಆಮದು ಮಾಡಿಕೊಳ್ಳುತ್ತಿರುವ ರಷ್ಯಾದ ತೈಲ ಮತ್ತು ಅನಿಲದ ಮೇಲೆ ಒಂದು ವೇಳೆ ನಿರ್ಬಂಧಗಳನ್ನು ಹೇರಿದರೆ, ಈ ಕ್ರಮವು ಯುರೋಪಿಯನ್ ಜನತೆಯ ಮೇಲೆ ಬೀರುವ ತೀವ್ರ ಪರಿಣಾಮದಿಂದಾಗಿ, ಅದು "ಪಾಶ್ಚಾತ್ಯ ಮೈತ್ರಿ"ಯ ವಿಭಜನೆಗೂ ಕಾರಣವಾಗಬಹುದು.

ದಿನಕ್ಕೆ ಸುಮಾರು 5 ಮಿಲಿಯನ್ ಬ್ಯಾರೆಲ್ ತೈಲವನ್ನು ರಫ್ತು ಮಾಡುವ ಪ್ರಮುಖ ತೈಲ ಉತ್ಪಾದಕ ಮತ್ತು ರಫ್ತುದಾರ ರಷ್ಯಾದ ತೈಲ ಆಮದಿನ ಮೇಲೆ ನಿರ್ಬಂಧಗಳು ಇಲ್ಲದುದರಿಂದ ಈ ನಿರ್ಬಂಧಗಳು ಹಲ್ಲಿಲ್ಲದ ಹಾವಿನಂತಾಗಿವೆ. ಅಷ್ಟಕ್ಕೂ, ಒಂದು ದೇಶವನ್ನು ಮಂಡಿಯೂರುವಂತೆ ಮಾಡುವ ಉದ್ದೇಶಕ್ಕಾಗಿಯೇ ನಿರ್ಬಂಧಗಳನ್ನು ಹೇರುತ್ತಿರುವಾಗ, ಒಂದು ದೇಶದ ಅತ್ಯಂತ ಪ್ರಮುಖ ರಫ್ತು ವಸ್ತುವನ್ನೇ ನಿರ್ಬಂಧಗಳಿಗೆ ಒಳಪಡಿಸದಿದ್ದರೆ, ಈ ನಿರ್ಬಂಧಗಳ ಅರ್ಥವಾದರೂ ಏನು? ರಷ್ಯಾದ ಮೇಲೆ ನಿರ್ಬಂಧ ಹೇರಿದ ಅಮೆರಿಕಾ, ರಷ್ಯಾದ ತೈಲವಿಲ್ಲದೆ ಜಗತ್ತು ನಡೆಯಬಲ್ಲದು ಎಂದು ತೋರಿಸುವ ಸಲುವಾಗಿ, ಇತರ ತೈಲ ಉತ್ಪಾದಕ ದೇಶಗಳು ತಮ್ಮ ತೈಲ ಉತ್ಪಾದನೆ ಮತ್ತು ರಫ್ತುಗಳನ್ನು ಹೆಚ್ಚಿಸುವಂತೆ ಅವುಗಳ ಮನ ಒಲಿಸುವ ಪ್ರಯತ್ನದಲ್ಲಿ ಈಗ ನಿರತವಾಗಿದೆ. ತನ್ನ ತೈಲ ಉತ್ಪಾದನೆಯನ್ನು ಹೆಚ್ಚಿಸುವಂತೆ ಸೌದಿ ಅರೇಬಿಯಾದ ಮೇಲೆ ಒತ್ತಡ ಹೇರುತ್ತಿದೆ. ಜೊತೆಗೆ ಇರಾನ್ ಮತ್ತು ವೆನಿಜುವೆಲಾ ದೇಶಗಳೊಂದಿಗೂ ಮಾತನಾಡುತ್ತಿದೆ.

ಇರಾನ್ ಮತ್ತು ವೆನಿಜುವೆಲಾ ದೇಶಗಳ ಅರ್ಥವ್ಯವಸ್ಥೆಯನ್ನು ದುರ್ಬಲಗೊಳಿಸಿದ ಮತ್ತು



ಅಗತ್ಯ ಔಷಧಿಗಳನ್ನೂ ಸಹ ಅವು ಆಮದು ಮಾಡಿಕೊಳ್ಳಲಾಗದೆ ಮಕ್ಕಳೂ ಸೇರಿದಂತೆ ಅಲ್ಲಿನ ಸಾವಿರಾರು ಜನರ ಸಾವಿಗೆ ಕಾರಣವಾದ ಅಮೆರಿಕಾದ ಕಠಿಣ ನಿರ್ಬಂಧಗಳು ಇಂದಿಗೂ ಜಾರಿಯಲ್ಲಿವೆ. ವಾಸ್ತವವಾಗಿ, ತನ್ನ "ದಿಗ್ಬಂಧನ ಆಳ್ವಿಕೆಯನ್ನು" ರಷ್ಯಾದ ವಿರುದ್ಧ ಬಳಸುವ ಮೊದಲು ಇಂತಹ ನಿರ್ಬಂಧಗಳನ್ನು ಈ ಎರಡು ದೇಶಗಳ ಮೇಲೆ ವಿಧಿಸಿ ಅವುಗಳ ಪರಿಣಾಮವನ್ನು ಅಮೆರಿಕಾ ಪರೀಕ್ಷಿಸಿತು. ಆದರೆ, ಪರಿಸ್ಥಿತಿಯ ವಿಪರ್ಯಾಸ ಹೇಗಿದೆ ಎಂದರೆ, ತನ್ನ ತಕ್ಷಣದ ದೊಡ್ಡ ಶತ್ರು ರಷ್ಯಾದ ಗರ್ವಭಂಗಕ್ಕಾಗಿ ತಾನು ನಿರ್ಬಂಧ ಹೇರಿದ್ದ ದೇಶಗಳೊಂದಿಗೇ ಶಾಂತಿ ಸಂಧಾನಕ್ಕೆ ಮುಂದಾಗಿರುವ ಅಮೆರಿಕವು ಆ ದೇಶಗಳನ್ನು ಸಂಪರ್ಕಿಸಿ ಅವು ಹೆಚ್ಚು ತೈಲವನ್ನು ರಫ್ತು ಮಾಡುವಂತೆ ಕೋರಿದೆ.

ವೆನಿಜುವೆಲಾದ "ಬೊಲಿವೇರಿಯನ್" ಆಡಳಿತದ ಬಗ್ಗೆ ಅಮೆರಿಕದ ಹಗೆತನ ಎಷ್ಟು ಅಗಾಧವಾಗಿತ್ತು ಎಂದರೆ, ಚುನಾಯಿತ ಅಧ್ಯಕ್ಷ ನಿಕೋಲಸ್ ಮದುರೊ ಅವರ ಸ್ಥಾನದಲಿ ಜುಆನ್ ಗುಯಿಡೋ ಎಂಬ ಒಬ್ಬ ಸೋಗುಕಾರನನ್ನು ಉತ್ತೇಜಿಸುವ ಮೂಲಕ ಅಧ್ಯಕ್ಷ ನಿಕೋಲಸ್ ಮದುರೊ ಅವರ ಆಡಳಿತವನ್ನು ಉರುಳಿಸುವ ಪ್ರಯತ್ನವನ್ನು ಅಮೆರಿಕಾ ಇಂದಿಗೂ ಕೈಬಿಟ್ಟಿಲ್ಲ. ಅಮೆರಿಕ ಮತ್ತು ಅದರ ಮೈತ್ರಿ ಪಾಲುದಾರರು ವೆನಿಜುವೆಲಾದ ಅಧ್ಯಕ್ಷರಾಗಿ ಗುಯಿಡೋ ಅವರನ್ನು ಮಾನ್ಯ ಮಾಡಿರುವುದೇ ಅಲ್ಲದೆ, ಇತರರೂ ಇದೇ ಕ್ರಮವನ್ನೇ ಅನುಸರಿಸುವಂತೆ ಪ್ರತಿಯೊಂದು ದೇಶದ ಮೇಲೂ ಒತ್ತಡ ಹೇರುತ್ತಿದ್ದಾರೆ. ಅಷ್ಟಾಗಿಯೂ, ತೈಲ ಉತ್ಪಾದನೆಯನ್ನು ಹೆಚ್ಚಿಸುವ ಬಗ್ಗೆ ಅಮೆರಿಕ ತನ್ನ ಕೃಪಾಪೋಷಿತ ಗುಯಿಡೋ ಬಳಿ ಹೋಗಲಿಲ್ಲ. ಆತನ ಆಜ್ಞೆಗಳನ್ನು ಪಾಲಿಸುವವರಾರೂ ವೆನಿಜುವೆಲಾದಲ್ಲಿಲ್ಲ. ಬದಲಿಗೆ, ವೆನಿಜುವೆಲಾದ ನಿಜ ಅಧಿಕಾರ ನೆಲೆಸಿರುವ ಸ್ಥಳಕ್ಕೆ, ಅಂದರೆ, ಮದುರೊ ಸರ್ಕಾರದ ಬಳಿಗೆ ಹೋಯಿತು. ಈ ಬಗ್ಗೆ ಮದುರೊ ಸರ್ಕಾರವು ಅಮೆರಿಕಾ ಆಡಳಿತದ ಮುಂದೆ ಇರಿಸಿರುವ ಒಂದು ಷರತ್ತು ಸರಿಯಾಗಿಯೇ ಇದೆ: ವೆನಿಜುವೆಲಾದಿಂದ ತೈಲವನ್ನು ಪಡೆಯ ಬಯಸಿದರೆ, ಮದುರೊ ಸರ್ಕಾರವನ್ನು ಅಧಿಕೃತವಾಗಿ ಮಾನ್ಯ ಮಾಡಬೇಕು. ಹೀಗೆ ಸಾಮ್ರಾಜ್ಯಶಾಹಿಯು ಪರರ ನಾಶಕ್ಕಾಗಿ ಸಿಡಿಸಿದ ಸಿಡಿಗುಂಡು ಸಾಮ್ರಾಜ್ಯಶಾಹಿನ್ನೇ ಸುಡುತ್ತಿದೆ. ಈ ಪರಿಸ್ಥಿತಿಯಿಂದ ಪಾರಾಗುವುದು ಸುಲಭದ ಮಾತಲ್ಲ.

ಇರಾನ್ ವಿರುದ್ಧ ಬಹಳ ಹಿಂದಿನಿಂದಲೂ ವಿವಿಧ ತೀವ್ರತೆಯ ದಿಗ್ಬಂಧನಗಳನ್ನು ಹೇರಲಾಗಿದೆ. ಒತ್ತೆಯಾಳು ಪ್ರಕರಣದ ಬಿಕ್ಕಟ್ಟಿನ ಸಂದರ್ಭದಲ್ಲಿ ಈ ನಿರ್ಬಂಧಗಳನ್ನು ಮೊದಲ ಬಾರಿಗೆ 1979 ರಲ್ಲಿ ಹೇರಲಾಯಿತು. ಇರಾನಿ ವಿದ್ಯಾರ್ಥಿಗಳು ಟೆಹರಾನ್‌ನಲ್ಲಿ ಅಮೆರಿಕಾದ 52 ಮಂದಿ ಸಿಬ್ಬಂದಿಯನ್ನು 4-11-1979 ರಿಂದ 444 ದಿನಗಳ ಕಾಲ ಅಲ್ಲಿನ ದೂತಾವಾಸದಲ್ಲಿ ಹಿಡಿದಿಟ್ಟಿದ್ದ ಒತ್ತೆಯಾಳುಗಳನ್ನು 1981 ರಲ್ಲಿ ಬಿಡುಗಡೆ ಮಾಡಿದ ನಂತರ ಈ ನಿರ್ಬಂಧಗಳನ್ನು ತೆಗೆದುಹಾಕಲಾಯಿತು. 1984 ರಲ್ಲಿ ಮತ್ತೆ ಹೇರಿದ ನಿರ್ಬಂಧಗಳನ್ನು 1987 ಮತ್ತು 1995 ರಲ್ಲಿ ಬಲಪಡಿಸಲಾಯಿತು. ಆ ದೇಶದ ಪರಮಾಣು ಕಾರ್ಯಕ್ರಮದಿಂದಾಗಿ ವಿಶ್ವಸಂಸ್ಥೆಯು ಇರಾನ್ ವಿರುದ್ಧ 2006 ರಲ್ಲಿ ವಿಧಿಸಿದ್ದ ನಿರ್ಬಂಧಗಳನ್ನು ಇರಾನ್ ಪರಮಾಣು ಒಪ್ಪಂದದ ನಂತರ 2016 ರಲ್ಲಿ ತೆಗೆದುಹಾಕಲಾಯಿತು. ಡೊನಾಲ್ಡ್ ಟ್ರಂಪ್ ನೇತೃತ್ವದ ಅಮೆರಿಕಾ ಏಕಪಕ್ಷೀಯವಾಗಿ ಪರಮಾಣು ಒಪ್ಪಂದದಿಂದ ಹಿಂದೆ ಸರಿದಿತು ಮತ್ತು ಇರಾನ್ ವಿರುದ್ಧ 2019 ರಲ್ಲಿ ಮತ್ತೆ ನಿರ್ಬಂಧಗಳನ್ನು ವಿಧಿಸಿತು. ಜೋ ಬೈಡನ್ ಅಮೆರಿಕಾದ ಅಧ್ಯಕ್ಷರಾದ ನಂತರ, 2021ರ ಫೆಬ್ರವರಿಯಲ್ಲಿ ಇರಾನ್ ವಿರುದ್ಧದ ನಿರ್ಬಂಧಗಳು ತಮ್ಮ ಅಧ್ಯಕ್ಷೀಯ ಅವಧಿಯಲ್ಲಿ ಮುಂದುವರಿಯುತ್ತವೆ ಎಂದು ಘೋಷಿಸಿದ್ದರು. ಇದೇ ಬೈಡನ್ ಆಡಳಿತವು ಈಗ ರಷ್ಯಾವನ್ನು ಒಬ್ಬಂಟಿಯಾಗಿ ಮಾಡುವ ಒಂದು ಸಾಧನವಾಗಿ ಇರಾನಿನೊಂದಿಗೆ ಮಾತನಾಡುತ್ತಿರುವುದು ಒಂದು ವಿಶೇಷ ವಿಪರ್ಯಾಸವೇ.


ನಿರ್ಬಂಧಗಳಿಂದಾಗಿ ಅತಿ ಕಡಿಮೆ ಪ್ರಮಾಣದ ತೈಲ ರಫ್ತು ಮಾಡಿದ ವೆನಿಜುವೆಲಾ ಮತ್ತು ಇರಾನ್ ದೇಶಗಳು ಹೇಳ ತೀರದ ಆರ್ಥಿಕ ಸಂಕಷ್ಟಗಳನ್ನು ಅನುಭವಿಸಿವೆ ಮತ್ತು ಇಂದಿಗೂ ಬಳಲುತ್ತಿವೆ. ಸ್ವಲ್ಪ ಸಮಯದವರೆಗೆ ತನ್ನ ಮಾಮೂಲು ಮಟ್ಟದ ತೈಲ ಉತ್ಪಾದನೆಯನ್ನು ಮುಂದುವರಿಸಿದ ಇರಾನ್, ರಫ್ತು ಮಾಡಲು ಸಾಧ್ಯವಾಗದೇ ಉಳಿದ ತೈಲವನ್ನು ದೇಶದೊಳಗೇ ಇಟ್ಟುಕೊಂಡಿತ್ತು. ಏಕೆಂದರೆ, ಉತ್ಪಾದನೆಯನ್ನು ಕಡಿತ ಮಾಡುವ ಉದ್ದೇಶದಿಂದ ಒಮ್ಮೆ ತೈಲ-ಬಾವಿಗಳನ್ನು ಮುಚ್ಚಿದರೆ ಅವುಗಳನ್ನು ಪುನಃ ತೆರೆಯುವುದು ಕಷ್ಟವೂ ಹೌದು ಮತ್ತು ದುಬಾರಿಯೂ ಹೌದು. ಜೊತೆಗೆ, ಇತ್ತೀಚೆಗೆ ವೆನಿಜುವೆಲಾದಲ್ಲಿ ಆಗಿರುವಂತೆ, ಇರಾನಿನಲ್ಲೂ ತೈಲ ಮೂಲಗಳೂ ಒಣಗುತ್ತಿವೆ ಎಂದು ತೋರುತ್ತದೆ.

ಅಮೆರಿಕದ ಕೋರಿಕೆಗೆ ಸ್ಪಂದಿಸಿ ಇರಾನ್ ಮತ್ತು ವೆನಿಜುವೆಲಾ ದೇಶಗಳು ತಮ್ಮ ತೈಲ ರಫ್ತನ್ನು ಹೆಚ್ಚಿಸಲು ಒಪ್ಪಿದರೂ ಸಹ, ತೈಲ ಪೂರೈಕೆದಾರ ರಷ್ಯಾವನ್ನು ಬದಲಾಯಿಸುವ ವಿಷಯಕ್ಕೆ ಬಂದಾಗ ಇನ್ನೂ ಎರಡು ಸಮಸ್ಯೆಗಳು ಉಳಿಯುತ್ತವೆ. ಮೊದಲನೆಯದಾಗಿ, ಈ ದೇಶಗಳು ರಫ್ತು ಮಾಡಬಹುದಾದ ತೈಲದ ಪ್ರಮಾಣವು ರಷ್ಯಾದ ರಫ್ತುಗಳನ್ನು ಬದಲಿಸುವಷ್ಟು ದೊಡ್ಡದಾಗಿಲ್ಲ. ನಿರ್ಬಂಧಗಳಿಗೆ ಒಳಗಾಗುವ ಮೊದಲು ಪ್ರತಿ ದಿನ ಉತ್ಪಾದಿಸುತ್ತಿದ್ದ ಸುಮಾರು 4 ಮಿಲಿಯನ್ ಬ್ಯಾರೆಲ್ ಮಟ್ಟದಿಂದ ಇರಾನಿನ ತೈಲ ಉತ್ಪಾದನೆಯು ಈಗ ಅರ್ಧದಷ್ಟು ಕೆಳಗಿದೆ. ವೆನೆಜುವೆಲಾದ ಉತ್ಪಾದನೆಯು ನಿರ್ಬಂಧಗಳಿಗೆ ಮೊದಲಿನ 4 ಮಿಲಿಯನ್ ಬ್ಯಾರೆಲ್‌ಗಳಿಂದ ಈಗ ದಿನಕ್ಕೆ ಕೇವಲ 1 ಮಿಲಿಯನ್ ಬ್ಯಾರೆಲ್‌ಗಳಿಗೆ ಇಳಿದಿದೆ. ಈ ಎರಡೂ ದೇಶಗಳಲ್ಲಿ ಇಷ್ಟು ಕೆಳ ಮಟ್ಟದ ಉತ್ಪಾದನೆಯನ್ನು ನಿರ್ಬಂಧ-ಪೂರ್ವ ಮಟ್ಟಕ್ಕೆ ತರುವುದು ಸುಲಭವಲ್ಲ ಮತ್ತು ರಷ್ಯಾದ ದೈನಿಕ ಸುಮಾರು 5 ಮಿಲಿಯನ್ ಬ್ಯಾರೆಲ್‌ಗಳ ತೈಲ ರಫ್ತುಗಳನ್ನು ಬದಲಿಸಲು ಸಾಕಾಗುವುದಿಲ್ಲ. ಎರಡನೆಯದಾಗಿ, ಮತ್ತು ಹೆಚ್ಚು ಮುಖ್ಯವಾಗಿ, ವಿಶ್ವ ಮಾರುಕಟ್ಟೆಯಲ್ಲಿ ಲಭ್ಯವಿರುವ ಯಾವುದೇ ದೇಶದ ತೈಲಕ್ಕಿಂತ ರಷ್ಯಾದ ತೈಲ ಬೆಲೆಗಳು ಪ್ರತಿ ಬ್ಯಾರೆಲ್‌ಗೆ 25-30 ಡಾಲರ್ ಗಳಷ್ಟು ಕಡಿಮೆ ಇವೆ. ಆದ್ದರಿಂದ, ರಷ್ಯಾದ ತೈಲ ರಫ್ತುಗಳನ್ನು ಬದಲಿಸುವಷ್ಟು ಹೆಚ್ಚುವರಿ ತೈಲವು ಭೌತಿಕವಾಗಿ ಲಭ್ಯವಿದ್ದರೂ, ಅದು ಹೆಚ್ಚು ದುಬಾರಿಯಾಗುತ್ತದೆ. ಈ ಕಾರಣದಿಂದಾಗಿ ದೇಶ ದೇಶಗಳು, ವಿಶೇಷವಾಗಿ ಯುರೋಪಿಯನ್ ಒಕ್ಕೂಟದ ದೇಶಗಳು, ರಷ್ಯಾದ ತೈಲವನ್ನು ತ್ಯಜಿಸಲು ಹಿಂಜರಿಯುತ್ತವೆ.

ರಷ್ಯಾದ ತೈಲದ ಬೆಲೆಯು ಬಹಳ ಕಡಿಮೆ ಇರುವ ಕಾರಣದಿಂದಾಗಿ ಭಾರತವೂ ಸಹ ರಷ್ಯಾದಿಂದ ತನ್ನ ತೈಲ ಆಮದಿನ ಪ್ರಮಾಣವನ್ನು ಹೆಚ್ಚಿಸಿಕೊಂಡಿದೆ. ರಷ್ಯಾದಿಂದ ಭಾರತವು ಮಾಡಿಕೊಳ್ಳುತ್ತಿರುವ ತೈಲದ ಆಮದುಗಳು ಕಳೆದ ಕೆಲವು ದಿನಗಳಲ್ಲಿ ನಾಲ್ಕು ಪಟ್ಟು ಹೆಚ್ಚಿ, ಈಗ ಆಮದಿನ ಪ್ರಮಾಣ ದಿನಕ್ಕೆ ಸುಮಾರು 360,000 ಬ್ಯಾರೆಲ್‌ಗಳವರೆಗೆ ಏರಿದೆ ಎಂದು ತೋರುತ್ತದೆ. ಇಷ್ಟು ಪ್ರಮಾಣದಲ್ಲಿ ತೈಲವನ್ನು ರಷ್ಯಾದಿಂದ ಆಮದು ಮಾಡಿಕೊಳ್ಳುವುದು ಎಂದರೆ, ತೈಲ ಆಮದು ವೆಚ್ಚವು ತಿಂಗಳಿಗೆ ಕನಿಷ್ಠ 200 ಮಿಲಿಯನ್ ಡಾಲರ್‌ನಷ್ಟು ಕಡಿಮೆಯಾಗುತ್ತದೆ ಎಂದರ್ಥ. ಆಮದು ವೆಚ್ಚಗಳನ್ನು ಕಡಿತಗೊಳಿಸುವ ಇಂತಹ ಅವಕಾಶವನ್ನು ಯಾವುದೇ ದೇಶವು ಬಳಸಿಕೊಳ್ಳದಿರುವುದು ಶುದ್ಧ ಮೂರ್ಖತನವಾಗುತ್ತದೆ. ರಷ್ಯಾದ ತೈಲ ರಫ್ತುಗಳನ್ನು ಬದಲಿಸಲು ಕೆಲವು ದೇಶಗಳು ತಮ್ಮ ತೈಲ ಉತ್ಪಾದನೆಯನ್ನು ಮತ್ತು ರಫ್ತುಗಳನ್ನು ಹೆಚ್ಚಿಸುವಂತೆ ಮಾಡುವಲ್ಲಿ ಅಮೆರಿಕಾ ಒಂದು ವೇಳೆ ಯಶಸ್ವಿಯಾದರೂ ಸಹ, ರಷ್ಯಾದ ಬೆಲೆಗಳೊಂದಿಗೆ ಸ್ಪರ್ಧಾತ್ಮಕವಾಗಿರುವಂತೆ ನೋಡಿಕೊಳ್ಳಲು ತೈಲ ಬೆಲೆಗಳಿಗೆ ವಿಶ್ವ ಮಟ್ಟದ ಸಬ್ಸಿಡಿ ಒದಗಿಸುವುದಂತೂ ಸಾಧ್ಯವಿಲ್ಲ. ರಷ್ಯಾದ ತೈಲ ರಫ್ತುಗಳನ್ನು ಬದಲಿಸುವ ಪ್ರಯತ್ನವನ್ನು ಅಮೆರಿಕಾ ಒಂದು ವೇಳೆ ಮುಂದುವರಿಸಿದರೆ, ಆಗ, ತಮ್ಮ ತಮ್ಮ ತೈಲ ಆಮದುಗಳಿಗೆ ಹೆಚ್ಚು ಬೆಲೆ ತೆರುವಂತೆ ದೇಶ ದೇಶಗಳನ್ನು ಒತ್ತಾಯಿಸಬೇಕಾಗುತ್ತದೆ. ಜರ್ಮನಿ ಮತ್ತು ಫ್ರಾನ್ಸ್‌ನಂತಹ ದೊಡ್ಡ ಶಕ್ತಿಶಾಲಿ ದೇಶಗಳ ವಿಷಯದಲ್ಲಿ ಇದು ಅಸಾಧ್ಯವಾಗುತ್ತದೆ. ಇತರ ದೇಶಗಳೂ ಇಂತಹ ದಬ್ಬಾಳಿಕೆಯನ್ನು ವಿರೋಧಿಸುತ್ತವೆ.

ಉಕ್ರೇನ್‌ಅನ್ನು ಶಸ್ತ್ರಸಜ್ಜಿತಗೊಳಿಸುವ ಮೂಲಕ ಯುದ್ಧವನ್ನು ಮುಂದುವರಿಸ ಬಯಸುವ ಅಮೆರಿಕಾದ ಆಶಯಗಳಿಗೆ ಬದಲಾಗಿ ಮಾತುಕತೆಯ ಮೂಲಕ ಯುದ್ಧವನ್ನು ಕೊನೆಗಾಣಿಸ ಬಯಸುವ ಮಾತುಗಳು ಈಗಾಗಲೇ ಐರೋಪ್ಯ ಒಕ್ಕೂಟ ದೇಶಗಳಲ್ಲಿ ಕೇಳಿಬರುತ್ತಿವೆ. ಇತ್ತೀಚೆಗೆ, ಒಂದು ಮಹತ್ವದ ಪ್ರಸಂಗದಲ್ಲಿ, "ಮಾನವೀಯ ನೆರವು" ನೀಡುವ ನೆಪದಲ್ಲಿ ವಿವಿಧ ರೀತಿಯ ಶಸ್ತ್ರಾಸ್ತ್ರಗಳನ್ನು "ಸಹಾಯ" ಎಂದು

ಪುಟ 14 ಕ್ಕೆ



ವ್ಯಂಗ್ಯಚಿತ್ರ: ಕಾರ್ಲೊಸ್ ಲತುಫ್, ಮಿಂಟ್‌ಪ್ರೆಸ್‌ನ್ಯೂಸ್

ಬೆಂಗಳೂರು ಚಿತ್ರೋತ್ಸವದಲ್ಲಿ ನಾನು ನೋಡಿದ ರಾಜಕೀಯ ಫಿಲಂಗಳು – 3: ಬ್ಯಾಡ್ ಲಕ್ ಬ್ಯಾಂಗಿಂಗ್”

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ನಾನು ನೋಡಿದ 12 ಫಿಲಂಗಳಲ್ಲಿ 6 ರಾಜಕೀಯ ಫಿಲಂಗಳು ಎನ್ನಬಹುದು. ನಾನು ನೋಡಿದ 6 ರಾಜಕೀಯ ಫಿಲಂಗಳಲ್ಲಿ “ದೆರ್ ಇಸ್ ನೋ ಇವಿಲ್” ಕುರಿತು ಭಾಗ–1 ರಲ್ಲಿ ನಿರೂಪಿಸಲಾಗಿದೆ. ಎರಡನೆಯ ಭಾಗದಲ್ಲಿ “ಅಹದ್' ಸ್ ನೀ”, “ಬ್ರದರ್ಸ್ ಕೀಪರ್” ಮತ್ತು “ಪ್ಯಾರಲಲ್ ಮದರ್ಸ್” ಕುರಿತು ಅನಿಸಿಕೆಗಳನ್ನು ಕೊಡಲಾಗಿದೆ. ಈ ಮೂರನೆಯ ಮತ್ತು ಕೊನೆಯ ಭಾಗದಲ್ಲಿ “ಬ್ಯಾಡ್ ಲಕ್ ಬ್ಯಾಂಗಿಂಗ್” ಕುರಿತು ಚರ್ಚಿಸಲಾಗಿದೆ.

ವಸಂತರಾಜ ಎನ್.ಕೆ.

ರಾದು ಜೂದ್ ಅವರ ‘ಬ್ಯಾಡ್ ಲಕ್ ಬ್ಯಾಂಗಿಂಗ್ ಆರ್ ಲೂನಿ ಪೋರ್ನ್'” ಎಂಬುದು ‘ರೊಮೇನಿಯನ್ ಕಾಮಿಡಿ’ ಫಿಲಂ. ಎಮಿ ಎಂಬ ಶಾಲಾಶಿಕ್ಷಕಿಯ ಗಂಡನೊಂದಿಗೆ ಕಾಮಕೇಳಿಯ ವಿಡಿಯೊವೊಂದು ನೆಟ್ ನಲ್ಲಿ ಅಪ್ ಲೋಡ್ ಆಗಿ ರಾದ್ಧಾಂತಕ್ಕೆ ಕಾರಣವಾಗುತ್ತದೆ. ವಿದ್ಯಾರ್ಥಿಗಳ ಪೋಷಕರ ದೂರಿನ ಮೇಲೆ ಆಕೆಯ ವಿಚಾರಣೆಗೆ ಶಾಲಾ ಪ್ರಿನ್ಸಿಪಾಲ್ ನಿರ್ಧರಿಸುತ್ತಾರೆ. ಪೋಷಕರ ಸಭೆಯಲ್ಲಿ ಶಾಲಾಶಿಕ್ಷಕಿಯ ಮಿಲಿಟರಿ ‘ಕೋರ್ಟ್ ಮಾರ್ಶಲ್’ ರೀತಿಯ ವಿಚಾರಣೆ ಮಾಡಿ ಆಕೆಯನ್ನು ಉಳಿಸಿಕೊಳ್ಳುವುದನ್ನು ಅಥವಾ ವಜಾ ಮಾಡುವುದನ್ನು ಅವರ ಬಹುಮತದ ನಿರ್ಧಾರಕ್ಕೆ ಬಿಡಲಾಗುತ್ತದೆ. ಪೋಷಕರ ಸಭೆಯ ನಿರ್ಧಾರ ಅಥವಾ ನಿರ್ಧಾರಗಳು ಏನಿರಬಹುದು ಎಂಬುದರ ಬಗ್ಗೆ ಕುತೂಹಲಕಾರಿ ಕೊನೆಯಿರುತ್ತದೆ. ಈ ಇಡೀ ಕಥನ ನಡೆಯುವುದು ಕೊವಿಡ್ ಮಹಾಸೋಂಕಿನ ಅವಧಿಯಲ್ಲಿ. ಇದು ಫಿಲಂನ ಕಥಾಹಂದರ.

ರಾದು ಜೂದ್ ಇದನ್ನು ನಿರ್ವಹಿಸುವ ಬಗೆಯೇ ವಿಶಿಷ್ಟವಾಗಿದ್ದು ಹಲವು ಆಯಾಮಗಳನ್ನು ಹೊಂದಿರುತ್ತದೆ. ಇದರ ಶೈಲಿ ನೇರ ಕಥನದ ರೀತಿಯಲ್ಲಿ ಇರದೆ, ಒಂದು ಕಡೆ ಅದು ಕಾಮಿಡಿ ಶೈಲಿಯಲ್ಲಿದ್ದರೆ, ಇನ್ನೊಂದು ಕಡೆ ಅಸಂಗತ ಶೈಲಿಯಲ್ಲೂ ಇದೆ. ಫಿಲಂ ನಲ್ಲಿ ಮೂರು ಭಾಗಗಳಿವೆ.

ಫಿಲಂ ಶುರುವಾಗುವುದು ನೆಟ್ ನಲ್ಲಿ ಅಪ್ ಲೋಡ್ ಆದ ಕಾಮಕೇಳಿಯ ಪೂರ್ಣ ವಿಡಿಯೊದಿಂದಲೇ. ಶಾಲಾ ಪ್ರಿನ್ಸಿಪಾಲ್ ಮನೆಗೆ ಮತ್ತು ಪೋಷಕರ ಸಭೆಗೆ ಶಿಕ್ಷಕಿ ಎಮಿ ರೊಮೇನಿಯದ ರಾಜಧಾನಿ ಬುಕರೆಸ್ಟ್ ನಲ್ಲಿ ನಡೆದುಕೊಂಡು ಹೋಗುವ ದೀರ್ಘ ಭಾಗದೊಂದಿಗೆ ಮೊದಲ ಭಾಗ ಕೊನೆಯಾಗುತ್ತದೆ. ನಡೆದಾಟದ ನಡುವೆ ಶಾಲಾ ಪ್ರಿನ್ಸಿಪಾಲ್ ಮತ್ತು ಗಂಡನ ಜತೆಗೆ ಫೋನ್ ಸಂಭಾಷಣೆಯ ಮೂಲಕ ವಿಡಿಯೊ ವಿದ್ಯಾರ್ಥಿ ಮತ್ತು ಪೋಷಕರಿಗೆ ದೊರಕಿ ರಾದ್ಧಾಂತವಾಗಿದ್ದು, ಅದರ ಬಗ್ಗೆ ಪೋಷಕರ ಸಭೆ ನಡೆಯಲಿದೆ ಎಂಬುದು ತಿಳಿಯುತ್ತದೆ. ಈ ದೀರ್ಘ ನಡೆಯಲ್ಲಿ ಮೊದಲ ನೋಟಕ್ಕೆ ಬುಕರೆಸ್ಟ್ ನಗರದ



ಈ ಕಥನಕ್ಕೆ ಸಂಬಂಧವಿರದ ದೈನಂದಿನ ಜೀವನದ ಘಟನೆಗಳಂತೆ ದೃಶ್ಯಗಳಂತೆ ಕಂಡು ಬರುತ್ತವೆ. ಹಲವು ಅನಗತ್ಯ ಉತ್ಪನ್ನಗಳ ‘ಅಶ್ಲೀಲ’ ಜಾಹೀರಾತುಗಳು, ಕೊಳ್ಳುಬಾಕತನ ಪ್ರತಿನಿಧಿಸುವ ದೃಶ್ಯಗಳು, ‘ಅಶ್ಲೀಲ’ ಫಿಲಂಗಳನ್ನು ನಾಚಿಸುವ ಬೈಗಳು, ‘ಅನಾಗರಿಕ’ ವರ್ತನೆಗಳ ಮುಂದೆ ಶಾಲಾಶಿಕ್ಷಕಿಯ ‘ಅಪರಾಧ’ ಏನೂ ಅಲ್ಲವೆಂಬಂತೆ ಸೂಚಿಸುವಂತೆ ಕಾಣುತ್ತದೆ.

ಎರಡನೆಯ ಭಾಗದಲ್ಲಿ ಕಥನ ಶೈಲಿ ಗಕ್ಕನೆ ಬೇರೆ ರೀತಿಯದ್ದಾಗುತ್ತದೆ. ಮೊದಲ ನೋಟಕ್ಕೆ ಕಾಣುವಂತೆ ಈ ಕಥನಕ್ಕೆ ಸಂಬಂಧವೇ ಇರದ ಪ್ರತಿ ರೋಮನ್ ಅಕ್ಷರಕ್ಕೊಂದರಂತೆ ಶಬ್ದದ ದೃಶ್ಯ ನಿಘಂಟು ತೋರಿಸಲಾಗುತ್ತದೆ. ಮುಂದೆ ಮೂರನೆಯ ಭಾಗ ಮುಂದಕ್ಕೆ ಹೋದಂತೆ ಸಂಬಂಧ ಗೋಚರವಾಗಲಾರಂಭಿಸುತ್ತದೆ. ಈ ದೃಶ್ಯ ನಿಘಂಟಿನಲ್ಲಿ ಶಾಲಾ ಶಿಕ್ಷಕಿಯ ಮೂರನೆಯ ಭಾಗದ ‘ಕೋರ್ಟ್ ಮಾರ್ಶಲ್'ಗೆ ಕಾರಣವಾಗುವ ಪ್ರಾಚೀನದಿಂದ ಆಧುನಿಕದ ವರೆಗಿನ, ಮಿಲಿಟರಿಯಿಂದ ಫ್ಯಾಸಿಸಂ, ಬಂಡವಾಳವಾದದಿಂದ ಕಮ್ಯುನಿಸಂ, ರೊಮೇನಿಯನ್ ಚರ್ಚ್ ನಿಂದ ಪೊರ್ನೋಗ್ರಫಿಯ ವರೆಗಿನ ಎಲ್ಲ ಚಾರಿತ್ರಿಕ ಶಕ್ತಿಗಳು, ಸಿದ್ಧಾಂತಗಳು, ವಿಷಯಗಳು ಬರುತ್ತವೆ. ಅದರ ವಿಡಂಬನಾ ಶೈಲಿಯ ನಿರ್ವಚನೆ ಇರುತ್ತದೆ.

ಮೂರನೆಯ ಭಾಗದಲ್ಲಿ ಸಾಮಾನ್ಯ ಕಥನಶೈಲಿಯಂತೆ ಕಾಣುವ ಪೋಷಕರ ಸಭೆಯಲ್ಲಿ ದೀರ್ಘ ‘ಕೋರ್ಟ್ ಮಾರ್ಶಲ್’ ದೃಶ್ಯವಿದೆ. ಇದರಲ್ಲಿ ಬರುವ ಪೋಷಕರಲ್ಲಿ – ಮಿಲಿಟರಿ ಅಧಿಕಾರಿ, ಪಾದ್ರಿ, ಉದಾರವಾದಿ, ವಿಚಾರವಾದಿ, ಮಹಿಳಾವಾದಿ, ಸಾಂಪ್ರದಾಯಿಕ ಗೃಹಿಣಿ, ವಲಸೆಗಾರ – ಹೀಗೆ ರೊಮೇನಿಯನ್ ಸಮಾಜದ ಎಲ್ಲ ಜನವಿಭಾಗಗಳ, ಸಾಂಪ್ರದಾಯಿಕರಿಂದ ಹಿಡಿದು ಪ್ರಗತಿಪರರ ವರೆಗೆ ಎಲ್ಲ ರಾಜಕೀಯ ಸೈದ್ಧಾಂತಿಕ ಧೋರಣೆಗಳ ಪ್ರತಿನಿಧಿಗಳನ್ನು ನಿರ್ದೇಶಕ ಜೂದ್ ಪ್ಯಾಕ್ ಮಾಡಿದ್ದಾರೆ, ಹಾಗಾಗಿ ಸಭೆಯಲ್ಲಿ ಚರ್ಚೆ ಶಾಲಾ ಶಿಕ್ಷಕಿಯ ವರ್ತನೆ ತಪ್ಪೆ? ತಪ್ಪಾದರೆ ಯಾವ ಶಿಕ್ಷೆ ಕೊಡಬೇಕು? ಎಂಬುದರ ಸುತ್ತ ಇದ್ದರೂ, ಎರಡನೆಯ ಭಾಗದಲ್ಲಿ ಇರುವ ಎಲ್ಲ ವಿಷಯಗಳತ್ತ ಆಗಾಗ ಹೋಗುತ್ತಾ ಬಿಸಿ ಬಿಸಿ ಚರ್ಚೆಯಾಗುತ್ತದೆ. ಶಿಕ್ಷಕಿಯ ಜತೆಗೆ ಇವೆಲ್ಲ ಚಾರಿತ್ರಿಕ ಶಕ್ತಿಗಳ, ಸಿದ್ಧಾಂತಗಳ, ವಿಷಯಗಳ ‘ಕೋರ್ಟ್ ಮಾರ್ಶಲ್’ ಸಹ ಆಗುತ್ತಿದೆ ಅಂತ ಅನಿಸುತ್ತದೆ. ಶಿಕ್ಷಕಿ ತನ್ನ ವರ್ತನೆಯನ್ನು ವೈಯಕ್ತಿಕ ಆಯ್ಕೆ ಎಂದು ಬಲವಾಗಿ ಸಮರ್ಥಿಸಿಕೊಳ್ಳುವುದಲ್ಲದೆ, ಪೋಷಕರ ವರ್ತನೆಗಳನ್ನೂ ಪ್ರಶ್ನಿಸುತ್ತಾಳೆ. ವಯಸ್ಕರಿಗೆ ಮೀಸಲಾದ ಅಷ್ಟೇನೂ ವ್ಯಾಪಕವಾಗಿ ಗೊತ್ತಿರದ ಪೊರ್ನೋ ಸೈಟ್ ನ್ನು ವಿದ್ಯಾರ್ಥಿಗಳು ಅಥವಾ ಪೋಷಕರು ಯಾಕೆ ಹೇಗೆ ನೋಡಿದರು ಅಂತ ಪ್ರಶ್ನಿಸುತ್ತಾಳೆ. ರೊಮೇನಿಯನ್ ಪ್ರಸಿದ್ಧ ಕವಿಯ ಕವನವೊಂದು ಓದಿ, ಯಾವುದು ‘ಅಶ್ಲೀಲ’ ಎಂಬುದು ಹೇಗೆ ನಿರ್ಧರಿಸುವುದು ಎಂಬುದರ ಬಗ್ಗೆ ಸವಾಲು ಎಸೆಯುತ್ತಾಳೆ. ತಮ್ಮ ಮಕ್ಕಳು ನೆಟ್ ನಲ್ಲಿ ಏನನ್ನು ನೋಡಬೇಕು ನೋಡಬಾರದು ಎಂಬುದು ಪೋಷಕರ ಜವಾಬ್ದಾರಿಯಲ್ಲವೇ? ಎಂದು ಪ್ರಶ್ನಿಸುತ್ತಾಳೆ. ವಿದ್ಯಾರ್ಥಿಗಳಿಗೆ ಏನನ್ನು ಕಲಿಸಬೇಕು ಹೇಗೆ ಕಲಿಸಬೇಕು ಎಂಬುದರ ಮತ್ತು ಇತರ ವಿಷಯಗಳ ಕುರಿತು ಪೋಷಕರ ಹಲವು ಅಭಿಪ್ರಾಯಗಳು ವ್ಯಕ್ತವಾಗುತ್ತವೆ. ಪೋಷಕರಿಗೆ ಹಲವು ಅಭಿಪ್ರಾಯಗಳಿರಬಹುದು. ಶಿಕ್ಷಕರು ಪಠ್ಯಕ್ರಮ ಮತ್ತು ತಮ್ಮ ಕೌಶಲ್ಯದ ಆಧಾರದ ಮೇಲೆ ಯಾವುದೇ ವಿಷಯವನ್ನು ಕಲಿಸುತ್ತಾರೆ. ತಾನು ಅದರಲ್ಲಿ ಯಾವ ಚ್ಯುತಿಯ ತಂದಿಲ್ಲ ಎಂದು ವಾದಿಸುತ್ತಾಳೆ. ಆಗಾಗ ಚರ್ಚೆಯಲ್ಲಿ ಪೋಷಕರಲ್ಲಿ ಒಂದು ಶಿಕ್ಷಕಿಯನ್ನು ಬೆಂಬಲಿಸುವ, ಇನ್ನೊಂದು ಟೀಕಿಸುವ ಎರಡು ಬಣಗಳಾಗಿ ಬಿಡುತ್ತವೆ. ಚರ್ಚೆ ಕೈ ಮಿಲಾಯಿಸುವರೆಗೆ ಹೋಗುತ್ತದೆ. ಕೊನೆಗೆ ಪ್ರಿನ್ಸಿಪಾಲರ ಸೂಚನೆಯ ಮೇರೆಗೆ ಶಿಕ್ಷಕಿಯ ‘ಅಪರಾಧ'ದ ಕುರಿತು ಏನು ಮಾಡಬೇಕು ಎಂಬುದರ ಬಗ್ಗೆ ಮತದಾನ ನಡೆಯುತ್ತದೆ. ಇಷ್ಟು ಹೊತ್ತಿಗೆ ನಿರ್ದೇಶಕ ಮತ್ತೆ ಕಥನಶೈಲಿ ಬದಲಿಸಿ ಮೂರು ಸಂಭಾವ್ಯ ಫಲಿತಾಂಶಗಳನ್ನು ತೋರಿಸಿ, ಇದನ್ನು ‘ಗಂಭೀರವಾಗಿ ತಗೊಳ್ಳೋದ್ರಪ್ಪಾ, ಬರಿಯ ತಮಾಷೆಗಾಗಿ’ ಅಂತಾನೆ. ಆದರೆ ಮೂರೂ ಫಲಿತಾಂಶಗಳು ಒಂದಕ್ಕಿಂತ ಇನ್ನೊಂದು ಹೆಚ್ಚಿನ ಗಾಂಚಾಲಿತನದಿಂದ ಕೂಡಿವೆ.

ಇಲ್ಲಿ ಪ್ರಮುಖವಾಗಿ ಲೈಂಗಿಕ ಮಡಿವಂತಿಕೆಯ ಗೋಸುಂಬೆತನದ ಸೋಗುಗಳ ವಿಡಂಬನೆಯಿದೆ, ಹಾಗೂ ಈ ಕುರಿತ ತಪ್ಪು ತಿಳಿವಳಿಕೆಗಳನ್ನು ಬಯಲುಗೊಳಿಸಲಾಗಿದೆ. ಕೊವಿದ್ ಕಾಲದಲ್ಲಿ ಸಮಾಜದಲ್ಲಿ ವ್ಯಾಪಕವಾಗಿದ್ದ ಆಚರಣೆಗಳ, ಧೋರಣೆಗಳ ಕುರಿತು ಸೇರಿದಂತೆ, ಹಲವು ರೀತಿಯ ರಾಜಕೀಯ–ಸೈದ್ಧಾಂತಿಕ ಮಡಿವಂತಿಕೆ–ಗೋಸುಂಬೆತನ–ಸೋಗುಗಳ ವಿಡಂಬನೆಯೂ, ಈ ಕುರಿತ ತಪ್ಪುತಿಳುವಳಿಕೆಗಳನ್ನು ಬಯಲುಗೊಳಿಸುವುದೂ ಅಷ್ಟೇ ಢಾಳಾಗಿ ಬರುತ್ತದೆ. ಇದು ಕಾಮಿಡಿಯ ರೂಪದಲ್ಲಿ ಇದ್ದರೂ ‘ಗಂಭೀರವಾದ್ದು’ ಎಂದು ಪರಿಗಣಿಸಲಾದವುಗಳ ‘ಕ್ಷುಲ್ಲಕತನ’ವನ್ನೂ, ‘ಕ್ಷುಲ್ಲಕ’ ವೆಂದು ಪರಿಗಣಿಸಲಾದವುಗಳ ‘ಗಂಭೀರತೆ’ಯನ್ನೂ ಫಿಲಂ ಎತ್ತಿ ತೋರಿಸುತ್ತದೆ. ಇವೆಲ್ಲವುಗಳ ಮೂಲಕ ಫಿಲಂ ಗಹನವಾದ ಸಾಮಾಜಿಕ–ರಾಜಕೀಯ ವಿಮರ್ಶೆಯನ್ನು ಮಾಡುತ್ತದೆ. ಮೊದಲಿಗೆ ಕಾಮಕೇಳಿಯ ಪೂರ್ಣ ದೃಶ್ಯ ಅಗತ್ಯವಿತ್ತೇ ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಆದರೆ ಪೂರ್ಣ ಫಿಲಂ ನೋಡಿದ ಮೇಲೆ, ‘ಅದನ್ಯಾಕೆ ದೊಡ್ಡ ಸಂಗತಿ ಮಾಡ್ತೀರಿ! ಸಮಾಜದಲ್ಲಿರುವ ಇದಕ್ಕಿಂತ ಹೆಚ್ಚಿನ ‘ಅಶ್ಲೀಲ'ಗಳು ‘ಕೆಡುಕು'ಗಳತ್ತ ಗಮನ ಹರಿಸಿ ಅಂತ ನಿಮ್ಮ ತಲೆ ಮೇಲೆ ಹೊಡೆದ ಹಾಗೆ ಹೇಳೋದಕ್ಕಷ್ಟೆ ಅದನ್ನು ಬೇಕಂತಲೇ ತೋರಿಸಿದೆ’ ಅಂತ ನಿರ್ದೇಶಕ ಹೇಳುವಂತೆ ಅನಿಸುತ್ತದೆ.



“ಜನಗಳ ಕಣ್ಣೀರನ್ನು ಒಡೆಯುವುದನ್ನು, ಅವರ ದುರಂತಗಳಿಂದ..... ಪುಟ 11 ರಿಂದ

ಕಾಶ್ಮೀರಿ ಪಂಡಿತರ ಅಸಹಾಯಕತೆಯನ್ನು ಸ್ವಂತ ಕಣ್ಣುಗಳಿಂದಲೇ ನೋಡಬೇಕಾಗಿ ಬಂದ ಕಾಶ್ಮೀರದ ಮೊದಲ ವ್ಯಕ್ತಿಯೆಂಬ ದುರದೃಷ್ಟ ನನ್ನದು. ಅವರು ತಮ್ಮ ಮನೆಗಳನ್ನು ಬಿಟ್ಟು ಜಮ್ಮುವಿಗೆ ಬಂದದ್ದನ್ನು ನೋಡಿದೆ. ದಾರಿಯಿರಲಿಲ್ಲ, ಸಹನೆಯಿರಲಿಲ್ಲ. ಬೆಂಬಲವಿರಲಿಲ್ಲ, ಸ್ವಲ್ಪವಾದರೂ ಪರಿಹಾರವನ್ನು ಪಡೆಯಬಹುದಾದ ಸ್ಥಳವಿರಲಿಲ್ಲ.. ನಾವು ರಾಜ್ಯಪಾಲರ ಮನೆ ಮುಂದೆ ಮೆರವಣಿಗೆ ನಡೆಸಿದೆವು.ನಾನು ರಾಜ್ಯಪಾಲರಿಗೆ ಬಾಗಿಲು ತೆರೆಯಲು ಹೇಳಿದ್ದೆ–ಇವರು ಕಾಶ್ಮೀರಿಗಳು, ಭಿಕ್ಷುಕರಲ್ಲ. ಅವರು ಭಿಕ್ಷೆ ಕೇಳಲು ಬಂದಿಲ್ಲ. ಯಾವುದೇ ಪ್ರವಾಸಕ್ಕೆ ಬಂದಿಲ್ಲ. ಅವರು ನಿಮ್ಮಿಂದ ಭಿಕ್ಷೆ ಕೇಳುವುದಿಲ್ಲ, ಅವರು ತಮ್ಮ ಹಕ್ಕುಗಳನ್ನು ಕೇಳುತ್ತಾರೆ–ಇಲ್ಲಿ ಸುರಕ್ಷಿತವಾಗಿ ಇರುವ ಹಕ್ಕನ್ನು ಕೇಳುತ್ತಿದ್ದಾರೆ ಎಂದು ನಾನಾಗ ಹೇಳಿದ್ದೆ. ನಮ್ಮ ಕಾಶ್ಮೀರಿ ಪಂಡಿತ್ ಸಹೋದರ ಸಹೋದರಿಯರಿಗೆ ಇವೆಲ್ಲವೂ ತಿಳಿದಿದೆ. ನಾನೇನು ಹೇಳಲಿ? ನನ್ನ ಸಂಬಂಧಿಕರನ್ನು ಕೊಂದರು. ಅಶೋಕ್ ಕೂಡ ನನ್ನ ಸಂಬಂಧಿ, ನನ್ನ ಒಡನಾಡಿ; ಬಹಳಷ್ಟು ಜನರು ಕೊಲ್ಲಲ್ಪಟ್ಟರು; ನನ್ನ ಮಾವನನ್ನು ಕೊಂದರು. ನನ್ನ ಸೋದರಳಿಯ ದುರದೃಷ್ಟವಶಾತ್ ಕೊಲೆಯಾದ. ವಿಧಾನಸಭಾಧ್ಯಕ್ಷ ವಾಲಿ ಮೊಹಮ್ಮದ್ ಇಟೂ ಸಹ ಕೊಲ್ಲಲ್ಪಟ್ಟರು. ವಿಧಾನ ಸಭೆಯ ಸದಸ್ಯರಾಗಿದ್ದ ಗುಲಾಂ ನಬಿ ದಾರ್ ಅವರೂ ಕೊಲೆಯಾದರು. ಪುಲ್ವಾಮಾದಲ್ಲಿದ್ದ ಇಬ್ಬರು, ಮೂವರು ಶಾಸಕರು ಕೊಲೆಯಾದರು. ಪುಲ್ವಾಮ ದಲ್ಲಿ ಗುಲಾಮ್ ಖಾದಿರ್ ರವರನ್ನು ಕೊಂದರು. ನಾನೇನು ಹೇಳಲಿ? ಯಾವ ಖಾತೆಯಲ್ಲಿ ಅವರನ್ನು ಹಾಕಲಿ?

ನಾನು ದೇಶದ ರಾಜಕೀಯ ಪಕ್ಷಗಳಿಗೆ, ವಿಶೇಷವಾಗಿ ಆಳುವವರಿಗೆ, ಬಿಜೆಪಿಗೆ ಮನವಿ ಮಾಡ ಬಯಸುತ್ತೇನೆ: ಹೇ ಸಾಹಿಬ್, ಮತಗಳ ಸಲುವಾಗಿ ನನ್ನ ಕಣ್ಣೀರನ್ನು, ನನ್ನ ಆತ್ಮೀಯರ ಕಣ್ಣೀರನ್ನು ಬಾಚಿಕೊಳ್ಳಬೇಡಿ ಅಥವಾ ವಿಭಜಿಸಬೇಡಿ ಸತ್ತವರೆಲ್ಲರೂ ನನ್ನವರು, ನಮ್ಮವರು ನಷ್ಟವಾದದ್ದು ಕಾಶ್ಮೀರಕ್ಕೆ, ಕಾಶ್ಮೀರದ ಅಸ್ಮಿತೆಗೆ, ಕಾಶ್ಮೀರದ ಜೀವನ ಮಾರ್ಗಕ್ಕೆ– ಎಲ್ಲಿಯವರೆಗೆ ನಾವು ಒಟ್ಟಿಗೆ ಬರುವುದಿಲ್ಲವೋ, ಮತ್ತು ನಮ್ಮ ಮನೆಯನ್ನು ಸರಿಯಾಗಿ ಹೊಂದಿಸುವುದಿಲ್ಲವೋ (ಅಲ್ಲಿಯ ವರೆಗೂ).

ಕೊನೆಯಲ್ಲಿ, (ಕವನವೊಂದರಲ್ಲಿ ಹೇಳಿರುವಂತೆ) ‘ಈ ದುಃಖವು ನಿನ್ನದೂ ಅಲ್ಲ, ನನ್ನದೂ ಅಲ್ಲ, ಅದು

ನಮ್ಮದು ಗೆಳೆಯಾ!’ ಈ ದುಃಖವು ಕಾಶ್ಮೀರಿ ಪಂಡಿತರಿಗೆ, ಸಿಖ್ಖರಿಗೆ, ಮುಸ್ಲಿಮರಿಗೆ, ಪತ್ರಿಕಾ ಸಂಪಾದಕರುಗಳಿಗೆ, ಪತ್ರಕರ್ತರಿಗೆ, ವಕೀಲರಿಗೆ, ಸಾಮಾನ್ಯ ಕಾರ್ಮಿಕರಿಗೆ, ಸಾಮಾನ್ಯ ಬಡಜನರಿಗೆ, ನನ್ನ ಸೋದರಿಯವರಿಗೆ ಸೇರಿದ್ದು.

ನಮ್ಮ ಕಣ್ಣೀರುಗಳನ್ನು ಒಡೆಯಬೇಡಿ.

ರಷ್ಯಾದ ಮೇಲಿನ ದಿಗ್ಬಂಧನಗಳ ವಿಪರ್ಯಾಸ..... ಪುಟ 13 ರಿಂದ

ಉಕ್ರೇನ್‌ಗೆ ರಹಸ್ಯವಾಗಿ ಪೂರೈಸಲಾಗುತ್ತಿದೆ ಎಂಬುದನ್ನು ಅರಿತ ಇಟಲಿಯ ಕಾರ್ಮಿಕರು ಪೀಸಾ ವಿಮಾನ ನಿಲ್ದಾಣದಲ್ಲಿ ಉಕ್ರೇನ್‌ಗೆ "ಮಾನವೀಯ ನೆರವು" ಎಂದು ಹೆಸರಿಸಿದ ಸರಕುಗಳನ್ನು ಸಾಗಾಣಿಕೆ–ವಿಮಾನದಲ್ಲಿ ತುಂಬಲು ನಿರಾಕರಿಸಿದರು. ಒಂದು ಪ್ರಮುಖ ಯೂರೋಪಿಯನ್ ದೇಶದಲ್ಲಿ ಸಂಭವಿಸಿದ ಕಾರ್ಮಿಕರ ಹಸ್ತಕ್ಷೇಪದ ಈ ಉದಾಹರಣೆಯು, ಯುದ್ಧವು ಒಂದು ವೇಳೆ ಲಂಬಿಸಿದರೆ, ಇತರ ದೇಶಗಳಲ್ಲೂ ಪ್ರತಿಧ್ವನಿಸುವ ಸಾಧ್ಯತೆಯಿದೆ.

ವಸಾಹತು ಆಡಳಿತಗಾರರು ತಾವು ಕೈಗೊಂಡ ನಿರ್ಧಾರಗಳಿಗೆ ಯಾವ ವಿವರಣೆಯನ್ನೂ ಕೊಡದೆ ಬಚಾವಾದ ವಸಾಹತುಶಾಹಿ ದಿನಗಳಿಂದ, ತಮ್ಮ ಆಳ್ವಿಕೆಯ ಪರಿಣಾಮಗಳನ್ನು ಅರ್ಥಮಾಡಿಕೊಳ್ಳಲಾಗದ ಮುಗ್ಧ ಜನರಿಂದ ಮಾಡುತ್ತಿದ್ದ ಸುಲಿಗೆಯ ದಿನಗಳಿಂದ ಮತ್ತು ತಕ್ಷಣವೇ ಪ್ರಶ್ನಿಸದ ಜನರ ಮೇಲೆ ತಮ್ಮ ಆಜ್ಞೆಗಳನ್ನು ಸಲೀಸಾಗಿ ಹೇರುತ್ತಿದ್ದ ವಸಾಹತುಶಾಹಿ ಆಡಳಿತದಿಂದ ನಾವೀಗ ಬಹಳ ದೂರ ಸಾಗಿದ್ದೇವೆ. ವಸಾಹತುಶಾಹಿ ಶಕ್ತಿಗಳು ಒಂದು ಕಾಲದಲ್ಲಿ ಹೊಂದಿದ್ದ ಪ್ರಾಬಲ್ಯವನ್ನು ಇಂದು ಅಮೆರಿಕಾ ಹೊಂದಿಲ್ಲ. ತಾನು ಈಗ ಹೊಂದಿರುವ ಅಷ್ಟೊ ಇಷ್ಟೊ ಅಧಿನಾಯಕತ್ವವನ್ನು ಉಳಿಸಿಕೊಳ್ಳುವ ಹತಾಶ ಪ್ರಯತ್ನದಲ್ಲಿ ಅಮೆರಿಕಾ ಖಂಡಿತವಾಗಿಯೂ ವಿಫಲವಾಗುತ್ತದೆ. ಏಕೆಂದರೆ, ಈ ಅಧಿನಾಯಕತ್ವವು ಅಬಾಧಿತವೂ ಅಲ್ಲ ಅಥವಾ ಪ್ರಶ್ನಾತೀತವೂ ಅಲ್ಲ. ಸಾಮ್ರಾಜ್ಯಶಾಹಿ ಅಮೆರಿಕಾ ಹೊಂದಿದ್ದ ವಿಶ್ವ ಪ್ರಾಬಲ್ಯವು ಅವನತಿಯತ್ತ ಸಾಗುತ್ತಿರುವುದನ್ನು ನಾವು ಇಂದು ಕಾಣುತ್ತಿದ್ದೇವೆ.

ಜಗದ ಸುತ್ತ

ಪ್ರೊ. ಆರ್. ರಾಮಕುಮಾರ್
ಸಂಗ್ರಹಾನುವಾದ: ಟಿ. ಸುರೇಂದ್ರ ರಾವ್





ಶ್ರೀಲಂಕಾದ ಇವತ್ತಿನ ಆರ್ಥಿಕ ಬಿಕ್ಕಟ್ಟನ್ನು ಅರ್ಥ ಮಾಡಿಕೊಳ್ಳುವುದು ಹೇಗೆ?

ಶ್ರೀಲಂಕಾದ ಪ್ರಸಕ್ತ ಬಿಕ್ಕಟ್ಟಿನ ಬೇರುಗಳನ್ನು ವಸಾಹತುಶಾಹಿಯಲ್ಲಿ ಮತ್ತು 2009ರ ನಂತರ ಯುದ್ಧಾನಂತರದ ಅವಧಿಯಲ್ಲಿ ಹಿಡಿದ ದಾರಿಯಲ್ಲಿ ಗುರುತಿಸಬಹುದು.

21ನೇ ಶತಮಾನದಲ್ಲೂ ಶ್ರೀಲಂಕಾದ ಆರ್ಥಿಕ ಹಣೆಬರಹ ಚಹಾ, ರಬ್ಬರು ಮುಂತಾದ ಪ್ರಾಥಮಿಕ ಸರಕುಗಳ ರಫ್ತು ಮತ್ತು ಪ್ರವಾಸೋದ್ಯಮವನ್ನೇ ಅವಲಂಬಿಸಿದೆ. ಇವುಗಳಿಂದ ಬಂದ ವಿದೇಶಿ ವಿನಿಮಯವನ್ನು ಆಹಾರವೂ ಸೇರಿದಂತೆ ಅಗತ್ಯ ಬಳಕೆಯ ಸರಕುಗಳ ಆಮದಿಗೆ ಉಪಯೋಗಿಸುವುದು–ಹೀಗೇ ಮುಂದುವರೆದಿದೆ. ಕಳೆದ ಒಂದು ದಶಕದಲ್ಲಿ ಈ ವಸ್ತುಗಳ ಬೆಲೆಗಳು ಜಾಗತಿಕವಾಗಿ ಕುಸಿದಿದ್ದರಿಂದ ರಫ್ತಿನ ಮೇಲೆ ಭಾರಿ ಹೊಡೆತ ಬಿದ್ದಿತ್ತು. 2009 ನಂತರ ತುಸು ಏರಿಕೆ ಕಂಡ ನಂತರ 2012 ರಿಂದಲೇ ಆರ್ಥಿಕ ಬೆಳವಣಿಗೆಯ ದರ ಇಳಿಕೆಯ ಹಾದಿ ಹಿಡಿದಿತ್ತು. ಯುದ್ಧಾನಂತರದಲ್ಲಿ ಕಂಡಿದ್ದ ಬೆಳವಣಿಗೆ ಬಹಳ ಬೇಗ ಇಳಿದುಹೋಯಿತು. ರಫ್ತು ಬೆಳವಣಿಗೆಯಿಲ್ಲದೆ ಚಾಲ್ತಿ ಲೆಕ್ಕದ ಕೊರತೆ (ಕರೆಂಟ್ ಅಕೌಂಟ್ ಡಿಫಿಸಿಟ್) ವ್ಯಾಪಕವಾಗಿತ್ತು. 2013ರ ನಂತರ ಬೆಳವಣಿಗೆ ದರ ಅರ್ಧಕ್ಕಿಳಿಯಿತು. ಆದರೆ 2009ರಲ್ಲಿ ತೆಗೆದುಕೊಂಡಿದ್ದ 2.6 ಬಿಲಿಯ ಡಾಲರುಗಳ ಐಎಂಎಫ್ ಸಾಲದ ಷರತ್ತಿನಿಂದಾಗಿ ಆದ್ದ ಮಹೇಂದ್ರ ರಾಜಪಕ್ಷೆ ಸರಕಾರ ಯಾವುದೇ ಸರಿಪಡಿಕೆ ಕ್ರಮ ಕೈಗೊಳ್ಳುವುದು ಸಾಧ್ಯವಾಗಲಿಲ್ಲ. ಏಕೆಂದರೆ ಬಜೆಟ್ ಕೊರತೆ 5% ವನ್ನು ದಾಟುವಂತಿರಲಿಲ್ಲ.

ವಿದೇಶೀ ವಿನಿಮಯದ ಕೊರತೆ ಹೆಚ್ಚುತ್ತಿದ್ದಾಗ 2016ರಲ್ಲಿ ಅಧಿಕಾರಕ್ಕೆ ಬಂದ ಯುಎನ್‌ಪಿ ನೇತೃತ್ವದ ಸಮ್ಮಿಶ್ರ ಸರಕಾರ 1.5 ಬಿಲಿಯ ಡಾಲರುಗಳ ಇನ್ನೊಂದು ಸಾಲಕ್ಕೆ ಐಎಂಎಫ್ ಬಳಿ ಹೋಯಿತು. ಇದಕ್ಕೆ ಬಜೆಟ್ ಕೊರತೆಯ ಪ್ರಮಾಣವನ್ನು 3.5%ಕ್ಕೆ ಇಳಿಸಬೇಕು, 'ತೆರಿಗೆ ಸುಧಾರಣೆ' ಮಾಡಬೇಕು, ಖರ್ಚುಗಳಲ್ಲಿ ಕಡಿತ ಮಾಡಬೇಕು ಮತ್ತು ಸಾರ್ವಜನಿಕ ವಲಯದ ವಾಣಿಜ್ಯೀಕರಣ ಮಾಡಬೇಕು ಎಂಬ ಷರತ್ತುಗಳನ್ನು ಐಎಂಎಫ್ ಹಾಕಿತು.

ಈ ಐಎಂಎಫ್ ಪ್ಯಾಕೇಜ್ ಪರಿಸ್ತಿತಿಯನ್ನು ಇನ್ನಷ್ಟು ಹದಗೆಡಿಸಿತು. ಜಿಡಿಪಿ ಬೆಳವಣಿಗೆ ದರ 2015ರಲ್ಲಿ 5% ಇದ್ದದ್ದು 2019ರಲ್ಲಿ 2.9%ಕ್ಕೆ ಇಳಿಯಿತು. ಹೂಡಿಕೆ ದರ, ಉಳಿತಾಯ ದರ, ಸರಕಾರದ ಆದಾಯ ಎಲ್ಲವೂ ಇಳಿದವು. ಸರಕಾರೀ ಸಾಲದ ಪ್ರಮಾಣ ಏರಿತು.

2019 ರಲ್ಲಿನ ಎರಡು ಘಟನೆಗಳು ಶ್ರೀಲಂಕಾದ ಆರ್ಥಿಕ ಬೆಳವಣಿಗೆಗೆ ಇನ್ನೂ ದೊಡ್ಡ ಪ್ರಮಾಣದಲ್ಲಿ ಪೆಟ್ಟು ನೀಡಿದವು.

ಮೊದಲನೆಯದು, 2019 ರ ಈಸ್ಟರ್ ಹಬ್ಬದ ಸಂದರ್ಭದಲ್ಲಿ ಕೊಲಂಬೋದ ಮೂರು ಚರ್ಚುಗಳು ಮತ್ತು ಮೂರು ಹೋಟಲುಗಳಲ್ಲಿ ಸಂಭವಿಸಿದ ಸ್ಫೋಟವು 253 ಜನರ ಸಾವಿಗೆ ಕಾರಣವಾಗಿತ್ತು ಮತ್ತು ಅದು ಶ್ರೀಲಂಕಾದ ಪ್ರವಾಸೋದ್ಯಮದ ಮೇಲೆ ತೀಕ್ಷ್ಣವಾದ ಪರಿಣಾಮ ಬೀರಿತು. ಪ್ರವಾಸಿಗಳ ಸಂಖ್ಯೆ ಶೇಕಡಾ 18 ರಷ್ಟು ಕುಸಿದಿತ್ತು. ಅದು ವಿದೇಶಿ ವಿನಿಮಯ ಮೊತ್ತದಲ್ಲಿನ ಭಾರಿ ಕೊರತೆಗೆ ಕಾರಣವಾಯಿತು.

ಎರಡನೆಯದಾಗಿ, ಯಾರದ್ದೋ ಅವಿವೇಕದ ಸಲಹೆ ಕೇಳಿಕೊಂಡು ನೂತನ ಅಧ್ಯಕ್ಷ ಗೋಟಬಾಯ ರಾಜಪಕ್ಸೆಯವರು 2019 ರ ಡಿಸೆಂಬರಿನಲ್ಲಿ ವ್ಯಾಟ್ ದರವನ್ನು ಶೇಕಡಾ 15 ರಿಂದ ಶೇಕಡಾ 8 ಕ್ಕೆ ಇಳಿಸಿದರು. ಅದರ ಜತೆಯಲ್ಲೇ, ಇತರ ಹಲವು ತೆರಿಗೆಗಳನ್ನೂ ಇಳಿಸಿದರು, ಕೆಲವನ್ನು ರದ್ದುಗೊಳಿಸಿದರು.

ಇವೆಲ್ಲದರ ಪರಿಣಾಮವಾಗಿ, ಕೋವಿಡ್ ಮಹಾಜಾಡ್ಯಕ್ಕೆ ಮುಂಚೆ ಶ್ರೀಲಂಕಾವು ಜಗತ್ತಿನಲ್ಲೆ ಅತ್ಯಂತ ಕಡಿಮೆ ಪರೋಕ್ಷ ತೆರಿಗೆಯನ್ನು ಹೊಂದಿತ್ತು. ಇದು ಭಾರಿ ಪ್ರಮಾಣದ ಆದಾಯದ ಕೊರತೆಗೆ ಕಾರಣವಾಯಿತು. ಜಿಎಸ್‌ಟಿ/ವ್ಯಾಟ್ ಆದಾಯವು 2019 ರಲ್ಲಿ 443,877 ಮಿಲಿಯನ್ ಶ್ರೀಲಂಕಾ ರೂಪಾಯಿಗಳಿದ್ದದ್ದು 2020 ರಲ್ಲಿ 233,786 ಮಿಲಿಯನ್ ಶ್ರೀಲಂಕಾ ರೂಪಾಯಿಗಳಿಗೆ ಕುಸಿಯಿತು, ಅಂದರೆ ಆದಾಯ ಸರಿಸುಮಾರು ಶೇಕಡಾ 50 ರಷ್ಟು ಕುಸಿಯಿತು.

2020 ರಲ್ಲಿ ಕೋವಿಡ್ ಮಹಾರೋಗ ಅಪ್ಪಳಿಸಿತು ಮತ್ತು ಅದು ಪರಿಸ್ಥಿತಿಯನ್ನು ಇನ್ನೂ ಹದಗೆಡಿಸಿತು. ಪ್ರವಾಸಿಗಳ ಸಂಖ್ಯೆಯ ಇಳಿಮುಖ ಹಾಗೂ ಪ್ರವಾಸೋದ್ಯಮದ ಆದಾಯ ಇನ್ನೂ ಕೆಳಕ್ಕಿಳಿಯಿತು. ಬೇಡಿಕೆ ಇಲ್ಲದೇ ಚಹಾ ಹಾಗೂ ರಬ್ಬರ್ ರಫ್ತು ಕೂಡ ಕುಸಿಯಿತು. ಜಗತ್ತಿನ ಇತರ ಭಾಗಗಳಲ್ಲಿ ಇರುವ ಅನಿವಾಸಿ ಶ್ರೀಲಂಕನ್ನರು ಉದ್ಯೋಗ ಕಳೆದುಕೊಂಡ ಕಾರಣ ಅವರು ಕಳಿಸುತ್ತಿದ್ದ ಹಣ ನಿಂತು ಹೋಗಿ ವಿದೇಶಿ ವಿನಿಮಯ ಮೊತ್ತವೂ ಪಾತಾಳಕ್ಕಿಳಿಯಿತು.

ಕೋವಿಡ್ ಅಂಟುಜಾಡ್ಯದ ಕಾರಣ ಸರ್ಕಾರವು ವೆಚ್ಚದ ಬಜೆಟನ್ನು ಹೆಚ್ಚಿಸಲೇ ಬೇಕಾಯಿತು. ಆದಾಯಗಳು ಕುಸಿಯುತ್ತಿದ್ದ ಕಾರಣ, ಹಣಕಾಸಿನ ಕೊರತೆ ಶೇಕಡಾ 10 ಕ್ಕಿಂತಲೂ ಹೆಚ್ಚಾಯಿತು. 2019ರಲ್ಲಿ ಸಾರ್ವಜನಿಕ ಸಾಲ ಜಿಡಿಪಿಯ 94% ತಲುಪಿದ್ದರೆ, 2021ರಲ್ಲಿ ಅದು 119%ಕ್ಕೇರಿತು. ಫೆಬ್ರವರಿ 2022 ರಲ್ಲಿ, ಐಎಂಎಫ್ ಇದಕ್ಕೆ ಮೂರು ಕಾರಣಗಳನ್ನು ಗುರುತಿಸಿತು: ಕೋವಿಡ್ ಅಂಟುಜಾಡ್ಯಕ್ಕಿಂತ ಮುಂಚಿನ ತೆರಿಗೆ ಕಡಿತಗಳು,

ಶ್ರೀಲಂಕಾದ ಅರ್ಥವ್ಯವಸ್ಥೆ ಪಾವತಿ ಬಾಕಿಯ ಗಂಭೀರ ಸಮಸ್ಯೆಯಿಂದಾಗಿ ಒಂದು ಬಿಕ್ಕಟ್ಟನ್ನು ಎದುರಿಸುತ್ತಿದೆ. ಅದರ ವಿದೇಶಿ ವಿನಿಮಯ ಮೀಸಲು ತ್ವರಿತವಾಗಿ ಕರಗುತ್ತಿದೆ. ಬಳಕೆ ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳುವುದು ಹೆಚ್ಚೆಚ್ಚು ಕಷ್ಟವಾಗುತ್ತಿದೆ. ಹಿಂದಿನ ಸಾಲಗಳನ್ನು ಮರುಪಾವತಿ ಮಾಡಲು ಸಾಧ್ಯವಾಗುತ್ತಿಲ್ಲ. ಶ್ರೀಲಂಕಾದ ಈ ಆರ್ಥಿಕ ಬಿಕ್ಕಟ್ಟು ರಾಜಕೀಯವು ಬಲಪಂಥದತ್ತ ಹೊರಳಿದ್ದು, ಐಎಂಎಫ್ ಷರತ್ತುಗಳು ಮತ್ತು ಯೋಜನೆಗಳ ಕಾರಣದಿಂದ ಎನ್ನುವುದು ಸ್ಪಷ್ಟ.

ಆದಾಯದ ದುರ್ಬಲ ಕಾರ್ಯನಿರ್ವಹಣೆ, ಮತ್ತು ಹೆಚ್ಚಾದ ಲಾಕ್ಡೌನ್ ಖರ್ಚುಗಳು.

ಇಂತಹ ಸಮಯದಲ್ಲಿ ಸಾವಯುವ ವ್ಯವಸಾಯದ ವಶೀಲಿ ಗುಂಪು ಅದಾಗಲೇ ಹದಗೆಟ್ಟಿದ್ದ ಪರಿಸ್ಥಿತಿಯನ್ನು ಮತ್ತಷ್ಟು ಕೆಡಿಸಲು ಪ್ರವೇಶ ಮಾಡಿತು. ದೇಶೀಯ ವಿಜ್ಞಾನ ವಿರೋದಿ ಉತ್ಸಾಹಿಗಳು, ಮತ್ತು ವಂದನಾ ಶಿವರಂತಹ ಹೊರಗಿನ ಸಲಹೆಗಾರರು 'ರಸಗೊಬ್ಬರಗಳ ಆಮದನ್ನು ನಿಲ್ಲಿಸಿದರೆ ನಿಮ್ಮ ವಿದೇಶಿ ವಿನಿಮಯ ಮೊತ್ತದ ಮೇಲಿನ ಒತ್ತಡವನ್ನು ಕಡಿಮೆ ಮಾಡಬಹುದು' ಎಂಬ ಉಪದೇಶ ಮಾಡಿದರು.

ರಾಜಪಕ್ಸೆ ಅದಕ್ಕೆ ಒಪ್ಪಿದರು. ತಾನೊಬ್ಬ ಸಾವಯುವ ಕೃಷಿಯ ಉದ್ಧಾರಕ ಎಂದು ತನಗೆ ತಾನೇ ಸೋಗು ಹಾಕಿಕೊಂಡ ರಾಜಪಕ್ಸೆ, ಮೇ 2021 ರಿಂದ ಎಲ್ಲಾ ರೀತಿಯ ರಾಸಾಯನಿಕ ಗೊಬ್ಬರಗಳ ಆಮದನ್ನು ನಿಷೇಧಿಸಿದರು. ಅದರ ವಿಧ್ವಂಸಕ ಪರಿಣಾಮಗಳು ದೇಶವನ್ನು ದಿವಾಳಿಯಂಚಿಗೆ ತಳ್ಳಿದವು.

ರಾಜಪಕ್ಸೆಯ 'ಸಾವಯವ ಸಾಹಸ'ವನ್ನು ಹಲವಾರು ಪಾಶ್ಚಿಮಾತ್ಯ ಪರಿಸರವಾದಿ ಗುಂಪುಗಳು ಕೊಂಡಾಡಿದವು ಮತ್ತು ಬೆಂಬಲಿಸಿದವು. ಅವರನ್ನು ನಾವು "ಹಸಿರು ಸಾಮ್ರಾಜ್ಯವಾದಿಗಳು" ಎಂದು ಕರೆಯೋಣ, ಜಾಗತಿಕ ಇಂಗಾಲ ಬಜೆಟ್ಟನ್ನು ತಮ್ಮ ವಸಾಹತು ಮಾಡಿಕೊಳ್ಳಲು ಪಾಶ್ಚಿಮಾತ್ಯ ಏಜಂಟರುಗಳ ಪ್ರಯತ್ನಗಳವು, ಇಂಗಾಲದ ಹೊರಸೂಸುವಿಕೆಗಳಿಗೆ ಅಭಿವೃದ್ಧಿಶೀಲ ದೇಶಗಳು ತಮ್ಮದೇ ಆದ ನ್ಯಾಯಯುತ ಪಾಲು ಪಡೆಯುವುದನ್ನು ನಿರಾಕರಿಸಿದವು.

ಶ್ರೀಲಂಕಾದ ಸಾವಯವ ಕೃಷಿ ನೀತಿಯು ವಿನಾಶಕಾರಿಯಾಯಿತು. ಐಎಂಎಫ್ ಪ್ರಕಾರ, "ರಾಸಾಯನಿಕ ಗೊಬ್ಬರ ನಿಷೇಧದಿಂದ ಕೃಷಿ ಉತ್ಪಾದನೆಯ ಮೇಲೆ ನಿರೀಕ್ಷಿತ ಪರಿಣಾಮಕ್ಕಿಂತಲೂ ಇನ್ನೂ ಕೆಟ್ಟದಾಗಿಯೇ ಇತ್ತು."

ಇನ್ನೂ ಮುಂದುವರಿದು ಅದು "ಅದರ ಬಳಕೆಯ ಮತ್ತು ರಾಸಾಯನಿಕ ಗೊಬ್ಬರದ ಆಮದಿನ ಮೇಲಿನ ತಾತ್ಕಾಲಿಕ ತಡೆಯಿಂದಾಗಿ ಕೃಷಿ ಉತ್ಪಾದನೆಯ ಮೇಲೆ ಕೆಟ್ಟ ಪರಿಣಾಮ ಬೀರಿತು ಹಾಗೂ ಕೆಲವು ಆಮದನ್ನು ತಡೆ ಹಿಡಿದ ಕಾರಣ ಚೇತರಿಕೆಯು ಇನ್ನೂ ನಿಧಾನವಾಯಿತು" ಎಂದು ಹೇಳಿದೆ.



ವ್ಯಂಗ್ಯಚಿತ್ರ: ಅಲೋಕ್ ನಿರಂತರ್

ಹೀಗೆ, ಕೃಷಿ ಉತ್ಪಾದನೆ ಕುಂಠಿತವಾಯಿತು; ಆಹಾರ ಕೊರತೆಯು ಹಣದುಬ್ಬರ ಸೃಷ್ಟಿಸಿತು; ಆಹಾರ ಆಮದಿನ ಅಗತ್ಯ ಬಿತ್ತು. ಚಹಾ ಹಾಗೂ ರಬ್ಬರ್ ಉತ್ಪಾದನೆ ಮತ್ತು ರಫ್ತು ಕಷ್ಟವಾಯಿತು. ವಿದೇಶಿ ವಿನಿಮಯ ಮೊತ್ತದ ಮೇಲಿನ ಒತ್ತಡ ಕಡಿಮೆಯಾಗುವ ಬದಲು ಹೆಚ್ಚಾಯಿತು.

ಐಎಂಎಫ್‌ನ ಉದ್ದೇಶಗಳು ಎಂದಿನಂತೆ ತೀವ್ರ ಅನುಮಾನಕ್ಕೊಳಗಾದವು. ಮೇಲೆ ಹೇಳಿದಂತೆ, 2016 ರಲ್ಲೇ, 'ಆರ್ಥಿಕ ಸುಧಾರಣೆ'ಯ ಯೋಜನೆಗೆ ಒತ್ತಾಸೆ ನೀಡಲು ಐಎಂಎಫ್‌ನೊಂದಿಗೆ 1.5 ಬಿಲಿಯನ್ ಅಮೆರಿಕ ಡಾಲರಿನ ಸಾಲದ 36 ತಿಂಗಳು ವಿಸ್ತರಣೆಯ ಇಎಫ್‌ಎಫ್ ಒಪ್ಪಂದಕ್ಕೆ ಶ್ರೀಲಂಕಾ ಮುಂದಾಯಿತು. ಅದಕ್ಕೆ, ಐಎಂಎಫ್ ವಿಧಿಸಿದ ಷರತ್ತುಗಳು ವಾಷಿಂಗ್‌ಟನ್ ಒಮ್ಮತದ ಮಾದರಿಗಳಾಗಿದ್ದವು: ತೆರಿಗೆ ನೀತಿಗಳು ಹಾಗೂ ಆಡಳಿತ ಸುಧಾರಣೆ; ವೆಚ್ಚದ ಮೇಲಿನ ನಿಯಂತ್ರಣ; ಸರ್ಕಾರಿ ಸಂಸ್ಥೆಗಳನ್ನು ವ್ಯಾಪಾರೀಕರಣ ಮಾಡುವುದು; ವಿನಿಮಯ ದರಗಳು ಸಡಿಲವಾಗಿರಬೇಕು; ಪೈಪೋಟಿಗೆ ಉತ್ತೇಜನ; ಮತ್ತು ಮುಕ್ತ ಹಣಹೂಡಿಕೆ ವಾತಾವರಣ.

ಮೂರು ವರ್ಷಗಳ ನಂತರ, 2019 ರಲ್ಲಿ, "ಇಎಫ್‌ಎಫ್ ಯೋಜನೆಗೆ ಬದ್ಧತೆ", "ಆದಾಯ ಆಧಾರಿತ ಹಣಕಾಸು ಕ್ರೋಢೀಕರಣಕ್ಕೆ ಮಾಡಿದ ಪ್ರಯತ್ನಗಳು", "ಹೆಚ್ಚಿನ ವಿನಿಮಯ ದರ ಸಡಿಲತೆ ಅಡಿಯಲ್ಲಿ, ನಿಧಿಯನ್ನು ಬಲಪಡಿಸುವುದು", ಮತ್ತು "ವಿವೇಕಯುತ ಹಣಕಾಸಿನ ನಿಲುವು" ನಂತಹ ಕಾರ್ಯಕ್ರಮಗಳನ್ನು ಜಾರಿ ಮಾಡಿದ ಶ್ರೀಲಂಕಾವನ್ನು ಐಎಂಎಫ್ ಹಾಡಿ ಹೊಗಳಿ ಕೊಂಡಾಡಿತು.

ವಾಸ್ತವದಲ್ಲಿ ಐಎಂಎಫ್ ಸುಧಾರಣಾ ಕ್ರಮಗಳಿಂದಾಗಿ 2016–2019 ರ ಅವಧಿಯ ಅನುಭವಗಳು ಶ್ರೀಲಂಕಾದ ಜನರಿಗೆ ತೀವ್ರ ಯಾತನಾಮಯವಾಗಿದ್ದವು. ಜಿಡಿಪಿ ಬೆಳವಣಿಗೆ ದರ ಮತ್ತಷ್ಟು ಕುಸಿಯಿತು. ಆದಾಯ ಮತ್ತು ಜಿಡಿಪಿ ನಡುವಿನ ಅನುಪಾತ ಇಳಿಮುಖವಾಯಿತು. (ಕಾರ್ಪೊರೇಟ್ ತೆರಿಗೆ ದರವನ್ನು ಶೇಕಡಾ 28 ರಿಂದ ಶೇಕಡಾ 24 ಕ್ಕೆ ಇಳಿಸಲಾಗಿತ್ತು). ಸಾರ್ವಜನಿಕ ಸಾಲ ಶೇಕಡಾ 30 ಕ್ಕೆ ಏರಿತ್ತು. ಆಗ 2019 ರಲ್ಲಿ ಇನ್ನೂ ವಿಪರೀತ ಹಾನಿ ಮಾಡಲು ರಾಜಪಕ್ಸೆ ಬಂದರು.

ಆದರೆ ಶ್ರೀಲಂಕಾಗೆ ಇದು ಐಎಂಎಫ್‌ನೊಂದಿಗಿನ ಮೊದಲ ಮುಖಾಮುಖಿಯಾಗಿರಲಿಲ್ಲ. 1970 ರಲ್ಲೇ ಶ್ರೀಲಂಕಾವು ನವ ಉದಾರವಾದಿ ನೀತಿಯನ್ನು ಜಾರಿ ಮಾಡಿದ ದಕ್ಷಿಣ ಏಶಿಯಾದ ಮೊದಲ ದೇಶವಾಗಿತ್ತು. ಈ ಐಎಂಎಫ್ ಪ್ರಣೀತ ಸುಧಾರಣೆಗಳ ಜತೆಯಲ್ಲೇ ಅಲ್ಪಸಂಖ್ಯಾತರ ದಮನ ಹಾಗೂ ಕಾರ್ಮಿಕ ಸಂಘಟನೆಗಳು ಮತ್ತು ಎಡಪಂಥೀಯರ ಮೇಲೆ ದಾಳಿ ಪ್ರಾರಂಭವಾದವು. ಇವೆಲ್ಲವೂ ಯುದ್ಧಕ್ಕೆ ಮೊದಲು ನಡೆದವು.

ಶ್ರೀಲಂಕಾದ ಆರ್ಥಿಕ ಬಿಕ್ಕಟ್ಟು ಮತ್ತು ರಾಜಕೀಯವು ಬಲಪಂಥದತ್ತ ಹೊರಳಿದ್ದು ಐಎಂಎಫ್ ಷರತ್ತುಗಳು ಮತ್ತು ಯೋಜನೆಗಳ ಕಾರಣದಿಂದ ಎನ್ನುವುದು ಸ್ಪಷ್ಟ.

ಐಎಂಎಫ್ ಮಾದರಿಯು ಎಲ್ಲೂ ಉದ್ಧಾರ ಮಾಡಲಿಲ್ಲ ಎನ್ನುವುದು ಸರ್ವವಿದಿತ, ಮತ್ತು ಅಲ್ಲಿಯ ಎಲ್ಲಾ ರೀತಿಯ ರಾಜಕೀಯ ಪಕ್ಷಗಳ ಅವ್ಯವಹಾರ ಕೂಡ ಅದಕ್ಕೆ ಮುಖ್ಯ ಕಾರಣವಾಗಿವೆ. ಮತ್ತು ನರೇಂದ್ರ ಮೋದಿಯವರಿಂದ ಹಾಡಿ ಹೊಗಳಲ್ಪಟ್ಟ ರಾಜಪಕ್ಸೆಯ ಕೃಷಿಯಲ್ಲಿನ ಹುಸಿ ವಿಜ್ಞಾನದ ಆಲಿಂಗನವು ಪರಿಸ್ಥಿತಿಯನ್ನು ಇನ್ನೂ ಹದಗೆಡಿಸಿತು.

ಪ್ರಾಯಶಃ ಶ್ರೀಲಂಕಾವು ಈಗ ಇನ್ನೊಂದು ಐಎಂಎಫ್ ಸಾಲವನ್ನು, ಇನ್ನೂ ಕಟ್ಟುನಿಟ್ಟಾದ ಷರತ್ತುಗಳೊಂದಿಗೆ ಪಡೆಯಬಹುದು. ಅದು ಮತ್ತೊಮ್ಮೆ ಹಣದುಬ್ಬರ ಇಳಿಸುವ ಸಾಹಸಕ್ಕೆ ನಾಂದಿಯಾಗಬಹುದು. ಇದು ಹಾಗೂ ಬಲಪಂಥದತ್ತ ರಾಜಕೀಯ ಪಲ್ಲಟ ಎರಡೂ ಜನಜೀವನ ಮತ್ತು ಅವರ ಕೆಲಸದ ಮೇಲೆ ತೀವ್ರತರದ ಪರಿಣಾಮ ಬೀರಲಿವೆ.

JANASHAKTHI KANNADA VARA PATRIKE APRIL 04-10, 2022 Price: Rs. 10/- Date of Publication: 01 APRIL 2022 RNI No. KARKAN /2006/17926 Posted on 04-04-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate** - Rs. 2







ಸಿಪಿಐ(ಎಂ) 23ನೇ ಮಹಾಧಿವೇಶನದ ಯಶಸ್ವಿಗೆ ಕಣ್ಣೂರು ಸಕಲ ರೀತಿಯಲ್ಲೂ ಸಜ್ಜುಗೊಳ್ಳುತ್ತಿದೆ



ಎಚ್.ಆರ್. ನವೀನ್ ಕುಮಾರ್, ಹಾಸನ

ಭಾರತದಲ್ಲಿ ಕಮ್ಯೂನಿಸ್ಟ್ ಪಕ್ಷ ಪ್ರಾರಂಭವಾಗಿ ನೂರು ವರ್ಷಗಳನ್ನು ಪೂರೈಸಿದ ಸಂಭ್ರಮದಲ್ಲಿದೆ. ಇದೇ ಸಂದರ್ಭದಲ್ಲಿ ಪಕ್ಷದ ಚರಿತ್ರೆಯನ್ನು ಮುಂದೊಯ್ಯಲು ಸಂಕಲ್ಪಿಸಿರುವ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಸಿಪಿಐಎಂ ಪ್ರತಿ ಮೂರು ವರ್ಷಗಳಿಗೊಮ್ಮೆ, ರಾಜಕೀಯ, ಸಾಮಾಜಿಕ, ಆರ್ಥಿಕ ಬೆಳವಣಿಗೆಗಳ ಕುರಿತು ವಿವರವಾಗಿ ಚರ್ಚಿಸಿ, ಪಕ್ಷದ ಸಂಘಟನಾ ವಿಮರ್ಶೆಯೊಂದಿಗೆ ಮುಂದಿನ ಮೂರು ವರ್ಷಗಳಿಗೆ ಬೇಕಾದ ರಾಜಕೀಯ ತಂತ್ರಗಾರಿಕೆ ಮತ್ತು ಸಂಘಟನಾ ಗುರಿಗಳನ್ನು ನಿಗದಿಪಡಿಸಿಕೊಳ್ಳಲು ಪಕ್ಷದ ಮಹಾಧಿವೇಶನವನ್ನು ನಡೆಸುತ್ತದೆ. ಪಕ್ಷದಲ್ಲಿ ಇದೇ ಅತ್ಯುನ್ನತ ಅಂಗವಾಗಿದೆ.

ಪುಟ 12 ಕ್ಕೆ

















JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**